ರಂಜನೆ ಬೋಧನೆ ಪ್ರಬೋಧನೆ

ಗೌರಿ ಲಂಕೇಶ್

16 ಏಪ್ರಿಲ್, 2014   ಪುಟ 20   ರೂ. 15/-



ವಾಲ್ಮೀಕಿ ಬೇಡನೋ? ಬ್ರಾಹ್ಮಣನೋ?




ಬುದ್ಧಿಜೀವಿಗಳ ಫ್ಯಾಸಿಸ್ಟ್ ಪಾಲಿಟಿಕ್ಸ್





ಮಂಡ್ಯ: ಮೋದಿಗೆ ಶಿವಲಿಂಗಯ್ಯನ ಜೇಬು ಬಲಿ




ದಾವಣಗೆರೆ: ಬಿಜೆಪಿಗೆ ಸೋಲು ಸನ್ನಿಹಿತ

ಉತ್ತರಕನ್ನಡ: ನಡೆಯುತ್ತಿಲ್ಲ ಬಿಜೆಪಿ ತಂತ್ರ



ದಕ್ಷಿಣ ಕನ್ನಡ ಪೂಜಾರಿ ಪ್ರವಾಹದಲ್ಲಿ ಕಂಗೆಟ್ಟ ಕಲ್ಲಡ್ಕ






ಧಾರವಾಡ: ಜೋಷಿ ಸೋಲಿಗೆ ಮುತಾಲಿಕನೇ ಮೂಲ



ರಾಯಚೂರು ಯಡ್ಡಿಗೆ ಏಡ್ಸ್ ಬರಲಿ ಎಂದ ಬಿಜೆಪಿ ಅಭ್ಯರ್ಥಿ

ವರ್ಷ ವಿಧಾನಸಭೆಯಲ್ಲಿ ತೆಪ್ಪಗಿದ್ದ ಮೋದಿ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ಚಾನೆಲ್‌ಗಳು ಆರಂಭವಾದ ಮೇಲೆ ಪರಿಚಯವಾದ ಹೊಸ ವಿದ್ಯಮಾನವಲ್ಲ. ಬರ್ಕ್‌ವೈಟ್ ಬಿರ್ಲಾ ಬಗ್ಗೆ ಬರೆಯುವ ಪುಟಗಳಲ್ಲಿ ಒಂದು ಕಡೆ ಈ ರೀತಿಯ ಒಂದು ಸಾಲಿದೆ: 'ಬಿರ್ಲಾ ಮಾಲೀಕತ್ವದಲ್ಲಿ ಪ್ರಕಟವಾಗುತ್ತಿದ್ದ ಹದಿನಾರು ವೃತ್ತಪತ್ರಿಕೆಗಳ ಸಂಪಾದಕೀಯದ ಪ್ರಕಾರ ಸಾಮಾನ್ಯ ಮನುಷ್ಯನಿಗೆ ಬೆಲೆ ನಿಯಂತ್ರಣವೂ ಬೇಕಾಗಿರಲಿಲ್ಲ'. ಜನರು ತೀವ್ರ ಬೆಲೆಏರಿಕೆಯಿಂದ ತತ್ತರಿಸುತ್ತಿದ್ದ, ಭಾರತದಲ್ಲಿ ಸ್ವಾತಂತ್ರ್ಯದ ಹೊಸ ಬೆಳಗು ಮೂಡಿದ ಆರಂಭದ ದಿನಗಳಲ್ಲಿ ಬರೆದಿರುವ ಮಾತಿದು. ಆಗಿನಿಂದ ಈಗಿನವರೆಗೂ ನಮ್ಮ ಮಾಧ್ಯಮಗಳ ಮೇಲೆ ಹೆಚ್ಚಿನ ಹಿಡಿತ ಹೊಂದಿರುವವರು ಇಂಥವರೇ ಆಗಿದ್ದಾರೆ. ಹಾಗಾಗಿಯೇ ಕಾಂಗ್ರೆಸ್ಸಿಗೆ ಮಾತ್ರ ಬೆಂಬಲ ನೀಡುತ್ತಿದ್ದ ಮನೆಯೇ ಸಹಿಷ್ಣುತೆಯೊಂದನ್ನು ಬಿಟ್ಟು ಬೇರೇನನ್ನೂ ಮಾಡಬಲ್ಲ ಹಾಗೂ ಬಹಳಷ್ಟು ಹಿಂಸಾತ್ಮಕ ಘಟನೆಗಳಿಗೆ ಕಾರಣವಾದ ಧರ್ಮಾಂಧ ಹಿಂದೂ ಮಹಾಸಭಾವನ್ನು ಪ್ರೋತ್ಸಾಹಿಸುತ್ತಿದ್ದ ಮನೆಯೂ ಆಗಿತ್ತು'

ಮೋದಿ ಮಹಾನುಭಾವರು ಇಂದು ಬಹುವಾಗಿ ಪ್ರೊಜೆಕ್ಟ್ ಮಾಡುತ್ತಿರುವ ಸರ್ದಾರ್ ಪಟೇಲರ ಕುರಿತ ಬರ್ಕ್‌ವೈಟರ ಬರಹವೂ ಬಹಳ ಕುತೂಹಲಕಾರಿಯಾಗಿದೆ. ಕೈಗಾರಿಕೆಗಳು ಮತ್ತು ಕಾರ್ಮಿಕ ಸಂಘಟನೆಗಳ ಕುರಿತ ಅವರ ಹಲವು ಮಾತುಗಳನ್ನು ಅದರಲ್ಲಿ ಉಲ್ಲೇಖಿಸಲಾಗಿದೆ. 'ಕೈಗಾರಿಕಾ ಅಶಾಂತಿಯತ್ತ ಕರೆದೊಯ್ಯುವ ನಾಯಕರ ಸರಹಳಿಯ ಕೊಂಡಿಗಳೇ ಆಗಿವೆ. ಈ ದೇಶದ ರಚನೆಯಲ್ಲೇ ಇರುವ ಇಂತಹ ಸಮಸ್ಯೆಗಳನ್ನು ಈ ಚುನಾವಣೆಯ ಸಂದರ್ಭದಲ್ಲೂ ನೆನೆಯಬೇಕಿದೆ. ಅದು ಪ್ರಜಾತಂತ್ರದ ಹೆಸರಿನಲ್ಲಿ ನಡೆಯುವ ಮುಖವಾಡಗಳನ್ನು, ದ್ರೋಹಗಳನ್ನು ಮತ್ತು ದುರಂತಗಳನ್ನು ಅರಿಯಲು ಸಹಾಯ ಮಾಡುತ್ತದೆ.

ನಮ್ಮ ಚಿಕ್ಕಮ್ಮ ಪಾಕಿಸ್ತಾನದ ದುರಂತ ಇನ್ನೂ ಆಗಾಧವಾದದ್ದು. ತೆಹಮಿನಾಳ ಪುಸ್ತಕ ಓದುತ್ತಾ ಅಲ್ಲಿನ ಜನರ ಬಗ್ಗೆ ವಿಶೇಷವಾಗಿ ದಮನಿತರು ಮತ್ತು ಮಹಿಳೆಯರ ಬಗ್ಗೆ ನಮ್ಮಲ್ಲಿ ಅಪಾರ ಸಹಾನುಭೂತಿ ಮೂಡುವಂತಾಗುತ್ತದೆ. ಆದಕ್ಕೆ ನಿಜವಾಗಲೂ

ಅವಳಿದೇಶಗಳ ಪ್ರಜಾತಂತ್ರಗಳು: ಇಬ್ಬರು ಮಹಿಳೆಯರ ಕಣ್ಣಿಂದ

ಒಬ್ಬಾಕೆ ಅಮೆರಿಕನ್ ಪತ್ರಕರ್ತೆ. ಈ ದೇಶ ಪ್ರಜಾತಂತ್ರ ವ್ಯವಸ್ಥೆಯನ್ನು ಅಪ್ಪಿಕೊಳ್ಳುವುದಕ್ಕೆ ಹಿಂದಿನ ವರ್ಷಗಳಲ್ಲಿ ಇಡೀ ದೇಶವನ್ನು ಸುತ್ತಿ ಅದರ ಅನೇಕ ಮಜಲುಗಳನ್ನು ಕಂಡ ವ್ಯಕ್ತಿ. ಆಕೆಯ ಹೆಸರು ಬರ್ಕ್‌ವೈಟ್. ನೆಹರೂ, ಪಟೇಲ್, ಜಿನ್ನಾ, ಬಿರ್ಲಾ, ದಾಲ್ಮಿಯಾ, ಹರೂನ್‌ರಂತಹ ದೇಶದ ದೊಡ್ಡ ರಾಜಕಾರಣಿಗಳು ಮತ್ತು ಉದ್ದಿಮೆದಾರರನ್ನು ಸಂದರ್ಶಿಸಿ ಮಹತ್ವದ ಪ್ರಶ್ನೆಗಳನ್ನು ಹಾಕಿದ್ದಳು. ಅದೇರೀತಿ ಬಿರ್ಲಾನ ಫ್ಯಾಕ್ಟರಿಯ ಕಾರ್ಮಿಕರೂ, ಸುಣ್ಣದ ಭಟ್ಟಿಗಳಲ್ಲಿ ಕೆಲಸ ಮಾಡುವ ಹುಡುಗರೂ, ಹಳ್ಳಿಯ ಹೆಣ್ಣುಮಕ್ಕಳೂ ಎಲ್ಲರೂ ಈಕೆಯ ಪುಸ್ತಕದಲ್ಲಿ ತಮ್ಮ ಮಾತುಗಳನ್ನಾಡಿದ್ದಾರೆ. ಹಾಗಾಗಿಯೇ ಅದು ಅಂದಿನ ಭಾರತದ ಚಿತ್ರಣವನ್ನು ಸಮಗ್ರವಾಗಿ ಕಟ್ಟಿಕೊಡುವಲ್ಲಿ ಒಂದು ಮಟ್ಟಿಗೆ ಯಶಸ್ವಿಯಾಗಿದೆ. ವಿಶೇಷವಾದ ಸಂಗತಿಯೆಂದರೆ 1948ರ ಜನವರಿ 30ರಂದು, ಗಾಂಧಿಯವರು ಗೋಡ್ಸೆಯ ಗುಂಡಿಗೆ ಬಲಿಯಾಗುವ ಕೆಲವೇ ಗಂಟೆಗಳ ಮುಂಚೆ ಆಕೆ ಗಾಂಧಿಯವರ ಸಂದರ್ಶನವನ್ನೂ ಪಡೆದುಕೊಂಡಿರುತ್ತಾಳೆ. ಭಾರತದ ಪ್ರಜಾತಂತ್ರ ರೂಪುಗೊಳ್ಳುತ್ತಿದ್ದ ಬಗೆಯಲ್ಲಿದ್ದ ವೈರುಧ್ಯಗಳನ್ನು ಅರ್ಥಮಾಡಿಕೊಳ್ಳಲು ಅದೊಂದು ಅತ್ಯುತ್ತಮ ಪುಸ್ತಕ. **'Halfway to freedom'** ಎಂದು ಅದನ್ನು ಆಕೆ ಕರೆದಿದ್ದಾಳೆ. ಇದರ ಕನ್ನಡಾನುವಾದಕ್ಕೆ 'ಅರೆಬರೆ ಸ್ವಾತಂತ್ರ್ಯ' ಎಂದು ಹೆಸರಿಡಲು ಲಂಕೇಶ್ ಸೂಚಿಸಿದ್ದರಂತೆ. ಆದರೆ ಅನುವಾದಕಿ ಸಂಧ್ಯಾ ರೆಡ್ಡಿ ಅದನ್ನು 'ಬರ್ಕ್‌ವೈಟ್ ಕಂಡ ಭಾರತ' ಎಂದಿದ್ದಾರೆ.


ಇನ್ನೊಬ್ಬಾಕೆ ತೆಹಮಿನಾ ದುರ್ರಾನಿ. ಪಾಕಿಸ್ತಾನದ ಅತ್ಯಂತ ಪ್ರಭಾವಿ ರಾಜಕಾರಣಿ ಮುಸ್ತಾಫಾ ಖಾರ್‌ನ ಆರನೇ ಹೆಂಡತಿ. ಊಹಿಸಲು ಅಸಾಧ್ಯವಾದ ಪ್ರಮಾಣದಲ್ಲಿ ಮುಸ್ತಾಫಾನ ಚಿತ್ರಹಿಂಸೆಗಳಿಗೆ ಒಳಗಾದವಳು. ಭುಟ್ಟೋನ ಆಪ್ತಮಿತ್ರನೂ, ನಂತರ ಆತನ ವಿರುದ್ಧದ ಸಂಚಿನ ಸಂದರ್ಭದಲ್ಲಿ ಜಿಯಾಉಲ್‌ಹಕ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡು ಇಂಗ್ಲೆಂಡಿಗೆ ಓಡಿಹೋಗಿದ್ದವನೂ ಆಗಿದ್ದ ಮುಸ್ತಾಫಾ ಅಸಾಧಾರಣ, ಕ್ರೂರ ಮತ್ತು ಚಾಲಾಕಿ ವ್ಯಕ್ತಿಯಾಗಿದ್ದ. ಆತನ ಹಿಂಸೆಗೆ ಪಕ್ಕಾಗುತ್ತಲೇ ರಾಜಕಾರಣವನ್ನೂ ಕಲಿತ ತೆಹಮಿನಾ ನಂತರ ಹೆಸರುವಾಸಿ ವ್ಯಕ್ತಿಯಾಗುತ್ತಾಳೆ. ಭುಟ್ಟೋ ಮೇಲೇರಿದ್ದು, ನಂತರ ಕುಸಿದದ್ದು, ನೇಣಿಗೇರಿದ್ದರಿಂದ ಹಿಡಿದು ಜಿಯಾಉಲ್‌ಹಕ್ ಪಾಕಿಸ್ತಾನದ ಸರ್ವಾಧಿಕಾರಿಯಾಗಿ ಮೆರೆದು ಸತ್ತಿದ್ದು, ಬೆನಜೀರ್ ಪ್ರಧಾನಿಯಾಗಿದ್ದು ಎಲ್ಲವನ್ನೂ ಆ ಕಾಲದ ಪ್ರಭಾವಿ ರಾಜಕಾರಣಿಯೊಬ್ಬನ ಪತ್ನಿಯಾಗಿ ದಾಖಲಿಸುತ್ತಾ ಸಾಗುವ ಆಕೆಯ ಆತ್ಮಕಥೆ **'My feudal Lord'** ಹಲವು ಕಾರಣಗಳಿಗಾಗಿ ಒಂದು ಅಮೂಲ್ಯ ಕೃತಿ. ಅದನ್ನು ರಾಹು 'ಆರನೇ ಹೆಂಡತಿಯ ಆತ್ಮಕಥೆ' ಎನ್ನುವ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ.

ಸಾಧಾರಣರಂತೆ ಕಾಣುವ ಆದರೆ ಅಸಾಧಾರಣ ಒಳನೋಟಗಳನ್ನು ತಮ್ಮ ಪುಸ್ತಕಗಳಲ್ಲಿ ತುಂಬಿರುವ ಈ ಇಬ್ಬರು ಮಹಿಳೆಯರ ಪುಸ್ತಕಗಳು ಅವಳಿ ದೇಶಗಳ ರಾಜಕಾರಣದ ದುರಂತವನ್ನು ಅಪೂರ್ವವಾಗಿ ಕಟ್ಟಿಕೊಟ್ಟಿದ್ದಾವೆ. ಈ ದೇಶಗಳ ಹುಟ್ಟಿನಲ್ಲೂ, ನಂತರ ಅದರ ಬೆಳವಣಿಗೆ ಪಡೆದುಕೊಂಡು ತಿರುವುಗಳಿಗೂ ಕಾರಣವಾದ ಅಂಶಗಳಲ್ಲಿ ಹಲವು ನಮಗೆ ಈ ಪುಸ್ತಕಗಳಲ್ಲಿ ಕಾಣಸಿಗುತ್ತವೆ.

ಭಾರತ ಇನ್ನೊಂದು ಮಹಾಚುನಾವಣೆಯ ಅಬ್ಬರದಲ್ಲಿ ಮುಳುಗಿದೆ. ಬಹುತೇಕ ಎಲ್ಲಾ ಪಕ್ಷಗಳೂ ಒಂದಲ್ಲ ಒಂದು ರೀತಿಯಲ್ಲಿ ಈ ದೇಶದ ಕಾರ್ಪೊರೇಟ್ ಉದ್ದಿಮೆದಾರರ ಹಿತ ಕಾಯಲು ಕೆಲಸ ಮಾಡುತ್ತಿವೆ. ಆದರೆ ಅದಕ್ಕೆ ಜನರ ಹಿತಾಸಕ್ತಿಯ ಮುಖವಾಡವನ್ನು ತೊಡಿಸುವ ಕೆಲಸವನ್ನು ಮಾಡಲು ಯಶಸ್ವಿಯಾಗುತ್ತಿದ್ದಾರೆ. ಮೋದಿಯನ್ನು ದೇಶದ ಅಭಿವೃದ್ಧಿಯ ಪರಿಕಾರನೆಂಬಂತೆ ಭಾರತದ ಗಣನೀಯ ಪ್ರಮಾಣದ ಜನರಿಗೆ ಕಾರ್ಪೊರೇಟ್ ಮಾಧ್ಯಮಗಳು 'ಮನವರಿಕೆ' ಮಾಡಿಕೊಟ್ಟಿದ್ದಾರೆ.

ಈ ರೀತಿ ಮನವರಿಕೆ ಮಾಡಿಕೊಡುವ ಕೆಲಸ ಟಿವಿ ವಿರೋಧಿಯಂತೆ ಕಂಡುಬರುತ್ತಿದ್ದ ಕೇಜ್ರಿವಾಲ್ ಮತ್ತು ಅವರ ಪಕ್ಷವನ್ನು ಮುಗಿಲೆತ್ತರಕ್ಕೆ ಏರಿಸಿದ್ದ ಮಾಧ್ಯಮಗಳು, ಆತ 'ಕ್ರೋನಿ ಕ್ಯಾಪಿಟಲಿಸಂ'ಗೂ ವಿರೋಧಿ ಎಂದು ಕಂಡುಬರುತ್ತಿದ್ದಂತೆ ಸದೆಬಡಿಯಲು ಮುಗಿಬಿದ್ದಿದ್ದಾರೆ.

ಬಿರ್ಲಾನ ಬಗ್ಗೆ ವಿಸ್ತೃತವಾಗಿ ಬರೆಯುವ ಬರ್ಕ್‌ವೈಟ್ ಆತನಿಗೆ ಪ್ರತಿಸ್ಪರ್ಧಿಯಾಗಿದ್ದ ಇನ್ನೊಬ್ಬ ಉದ್ದಿಮೆದಾರ ದಾಲ್ಮಿಯಾನ ಕುರಿತೂ ಬರೆದಿದ್ದಾರೆ. 'ಸೇಠ್ ದಾಲ್ಮಿಯಾ ಅವರು ಭಾರತೀಯ ಉಪಖಂಡದಲ್ಲಿ ಪ್ರವೇಶಿಸದೇ ಇದ್ದಂತಹ ಕೈಗಾರಿಕಾ ಕ್ಷೇತ್ರ ಯಾವುದೂ ಇರಲಿಲ್ಲ, ಇವರ ಉದ್ಯಮಗಳು ಪಾಕಿಸ್ತಾನಕ್ಕೂ ಹಬ್ಬಿದ್ದವು. ಸಿಮೆಂಟ್, ಏರ್‌ಲೈನ್ಸ್, ರೈಲ್ವೇ, ವಿದ್ಯುತ್ ಕಂಪೆನಿಗಳು, ರಾಸಾಯನಿಕ ಕಾರ್ಖಾನೆಗಳು, ಪ್ಲೈವುಡ್, ಕಲ್ಲಿದ್ದಲು ಗಣಿಗಳು, ಸಕ್ಕರೆ, ಸೋಪು, ಮಾರ್ಗರಿನ್, ಟೆಕ್ಸ್‌ಟೈಲ್ಸ್, ಬ್ಯಾಂಕುಗಳು, ಇನ್‌ಶೂರೆನ್ಸ್ ಹಾಗೂ ವೃತ್ತಪತ್ರಿಕೆಗಳ ಒಂದು ದೊಡ್ಡ ಸರಣಿ. ಇದರಲ್ಲಿ ಬಾಂಬೆಯ ಪ್ರತಿಷ್ಠಿತ ದಿನಪತ್ರಿಕೆ **The Times of India** ಹಾಗೂ ಪಾಕಿಸ್ತಾನದ ಪ್ರಸಿದ್ಧ ಪತ್ರಿಕೆ **The Civil and Military Gazettee** ಸೇರಿವೆ.'


ತೆಹಮಿನಾ ದುರ್ರಾನಿ


ಬರ್ಕ್‌ವೈಟ್

ಮುಂಬರುವ ದಿನಗಳಲ್ಲಿ ಯಾವ ರೀತಿಯ ರಾಜಕೀಯ ವ್ಯವಸ್ಥೆ ಇರಬೇಕು ಎಂಬುದಕ್ಕೆ ದಾಲ್ಮಿಯಾ ಹೀಗೆ ಹೇಳುತ್ತಾನೆ: 'ಜನರಿಂದ ಚುನಾಯಿತನಾದ ಒಬ್ಬ ಸರ್ವಾಧಿಕಾರಿ ಇರಬೇಕು. ಆತನಿಗೆ ಅನಿರ್ಬಂಧಿತವಾದ ಅಧಿಕಾರಗಳಿರಬೇಕು ಮತ್ತು ಕನಿಷ್ಠ ಹತ್ತು ವರ್ಷ ಕಾಲಾವಕಾಶವನ್ನಾದರೂ ಆತನಿಗೆ ಕೊಡಬೇಕು. ಸರ್ವಾಧಿಕಾರಿಗಳಿಗೆ ಅಲ್ಪಕಾಲದ ಅಧಿಕಾರ ಕೊಡುವುದು ನನಗೆ ಸಮ್ಮತವಿಲ್ಲ'. ಇಂದು ದಾಲ್ಮಿಯಾನ ಜಾಗದಲ್ಲಿ ಅಂಬಾನಿ, ಟಾಟಾ, ನಾರಾಯಣಮೂರ್ತಿ ಎಲ್ಲರೂ ಕೂತಿದ್ದಾರೆ ಎಂದು ನಿಮಗನ್ನಿಸಿದರೆ ಅದು ಸಹಜ. ಈ ದಾಲ್ಮಿಯಾನ ಬಗ್ಗೆ ಇನ್ನಷ್ಟು ಕೇಳಿ: 'ಬಿರ್ಲಾ ಗಾಂಧಿಯನ್ನು ತಮ್ಮ ಆಶ್ರಯದಲ್ಲಿಟ್ಟುಕೊಂಡರು. ದಾಲ್ಮಿಯಾ ಜಿನ್ನಾರಿಗೆ ಒತ್ತಾಸೆಯಾಗಿ ನಿಂತರು. ಬಿರ್ಲಾ ಕಾಂಗ್ರೆಸ್‌ಗೆ, ದಾಲ್ಮಿಯಾ ಮುಸ್ಲಿಂಲೀಗ್‌ಗೆ ಹಣ ಒದಗಿಸಿದರು. ಆದರೆ ದಾಲ್ಮಿಯಾ ಸಂಪ್ರದಾಯನಿಷ್ಠ ಹಿಂದೂ ಕೂಡಾ ಆಗಿದ್ದರಿಂದ ಹಿಂದೂ ಮಹಾಸಭೆಗೂ ಹಣ ಕೊಟ್ಟರು.'

ಪಾಕಿಸ್ತಾನದ ಉದ್ದಿಮೆಯ ಜೊತೆಗಿನ ತನ್ನ ಸಂಬಂಧ ಭಾರತದಲ್ಲಿ ತೊಂದರೆ ಕೊಡಬಹುದೆಂದು ಭಾವಿಸಿದ ದಾಲ್ಮಿಯಾ ನಂತರ ಗೋಹತ್ಯೆ ವಿರುದ್ಧದ ಆಂದೋಲನದಲ್ಲಿ ಒಂದು ಮುಖ್ಯ ಪಾತ್ರ ವಹಿಸಿದ್ದರು. ಹಾಗೆಂದು ಬಿರ್ಲಾ ಗಾಂಧಿಯವರಿಗೆ ಮಾತ್ರ ಪೋಷಕರೆಂದುಕೊಳ್ಳಬೇಡಿ. ಬರ್ಕ್‌ವೈಟ್ ಮಾತುಗಳಲ್ಲೇ ಕೇಳಿ: 'ಬಿರ್ಲಾ ಮನೆಯಲ್ಲಿ ಎರಡು ಪಕ್ಷಗಳಿದ್ದವು. ಈ ಕುಟುಂಬದ ಕಿರಿಯ ಸೋದರ ಗಾಂಧಿಯನ್ನು ಬೆಂಬಲಿಸಿದ್ದ. ಹಿರಿಯ ಸೋದರ ಹಿಂದೂ ಮಹಾಸಭಾಗೆ ಬಹಳ ನಿಕಟವಾಗಿದ್ದರು...... ಪ್ರಾಚೀನ ಹಿಂದೂ ಕಾನೂನಿನ ಪ್ರಕಾರ ಇವರಿಬ್ಬರೂ ಕುಟುಂಬದ ಆಸ್ತಿಗೆ ಜಂಟಿ ಪಾಲುದಾರರಾದ್ದರಿಂದ, ಅಹಿಂಸಾತತ್ವ ಹಾಗೂ ಧಾರ್ಮಿಕ ಸಹಿಷ್ಣುತೆಯ ಮೇಲೆ ಗಾಂಧಿ ಹಾಗೂ ಕಾಂಗ್ರೆಸ್ಸಿಗೆ ಮಾತುಗಳನ್ನು ಕೇಳುವುದಕ್ಕಿಂತ ಶಿಸ್ತಾಗಿ ನಡೆದುಕೊಂಡರೆ ಅವರು ಒಳ್ಳೆಯ ಫಲ ಪಡೆಯಬಹುದು', 'ಮುಷ್ಕರ ಮಾಡುವುದರಿಂದ ಯಾರಿಗೂ ಲಾಭವಿಲ್ಲ, ಇದರಿಂದ ಉತ್ಪಾದನೆ ಕುಂಠಿತವಾಗುತ್ತದೆ ಅಷ್ಟೇ', 'ಈಗಿರುವ ಬಹುತೇಕ ಕೈಗಾರಿಕೆಗಳನ್ನು ಖಾಸಗಿ ಉದ್ಯಮವಾಗಿಯೇ ಉಳಿಸಿಕೊಂಡು ಬರಲಾಗುವುದು. ಆದರೆ ಬ್ಯಾಂಕುಗಳು, ವಿಮೆ, ಹಡಗು ಕೈಗಾರಿಕೆ ಹಾಗೂ ಕಲ್ಲಿದ್ದಲ ಗಣಿಗಳು ರಾಷ್ಟ್ರೀಕರಣವಾಗುವ ಸಾಧ್ಯತೆ ಇದೆ.'

ವಿವಿಧ ರಾಜಸಂಸ್ಥಾನಗಳನ್ನು ಒಗ್ಗೂಡಿಸಿದ ಉಕ್ಕಿನ ಮನುಷ್ಯ ಎಂಬ ಬಿರುದನ್ನು ಹೊಂದಿರುವ ಸರ್ದಾರ್ ಪಟೇಲರು ಆ ಕಾಲದ ಎಲ್ಲ ರಾಜರುಗಳ ಜೊತೆಯೂ ಹೊಂದಿದ್ದ ಮಧುರ ಸಂಬಂಧದ ಕುರಿತು ಕೆಲವು ಸತ್ಯಸಂಗತಿಗಳನ್ನು ಬರ್ಕ್‌ವೈಟ್ ಬರೆಯುತ್ತಾರೆ. ಅದರಲ್ಲಿ ಪಟೇಲರ ಮಗಳು ಮಣಿಬೆನ್‌ಳ ಒಂದು ಮಾತು ಹೀಗಿದೆ: "ಈಗ ರಾಜರಿಗೆ ಸ್ವಾತಂತ್ರ್ಯ ದೊರೆತಿದೆ. ಬ್ರಿಟಿಷರ ಕಾಲದಲ್ಲಿ ಅವರ ಬದುಕು ಒಂದು ರೀತಿಯಲ್ಲಿ ಬಂಧನದ ಹಾಗೇ ಇತ್ತು .. ಅವರು ನಮ್ಮನ್ನು ಕಾಣಲು ತುಂಬಾ ಗುಟ್ಟಾಗಿ ಬರಬೇಕಿತ್ತು. ಗುಪ್ತ ಪೊಲೀಸರು ತಮ್ಮನ್ನು ಹಿಂಬಾಲಿಸುತ್ತಿರಬಹುದು ಎಂಬ ಭಯದಿಂದ ಸದಾ ಬೆನ್ನಹಿಂದೆಯೇ ಒಂದು ಕಣ್ಣಿಟ್ಟಿರುತ್ತಿದ್ದರು.'

ಇಂದು ಭಾರತದ ಪ್ರಜಾತಂತ್ರ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಜಾಗತೀಕರಣೋತ್ತರ ಆಯಾಮಗಳೂ ಹಲವಿವೆ. ಈ 60 ಚಿಲ್ಲರೆ ವರ್ಷಗಳಲ್ಲಿ ಹಲವಾರು ಬದಲಾವಣೆಗಳು ಬಂದಿವೆ: ಆದರೆ ನಮ್ಮ ಪ್ರಜಾತಂತ್ರವನ್ನು ಕಟ್ಟಿರುವ ರೀತಿಯಲ್ಲೇ, ಅದರ ಆರಂಭದ ಬೀಜಗಳಲ್ಲೇ ಇರುವ ಸಮಸ್ಯೆಗಳನ್ನು ಮರೆಯದಿರಲು 'ಅರೆಬರೆ ಸ್ವಾತಂತ್ರ್ಯ' ಕೃತಿ ನಮ್ಮನ್ನು ಒತ್ತಾಯಿಸುತ್ತದೆ. ಕಾರ್ಪೊರೇಟ್‌ಗಳಲ್ಲಿ 'ನ್ಯಾಯಬದ್ಧ' ಉದ್ದಿಮೆದಾರರಾದ ಟಾಟಾನಂತಹವರ ಬಗ್ಗೆ ಬರ್ಕ್‌ವೈಟ್ ಸಕಾರಾತ್ಮಕವಾಗಿಯೇ ಬರೆಯುತ್ತಾರೆ. ಅದು ಕೇಜ್ರಿವಾಲ್ ಪ್ರತಿಪಾದಿಸುತ್ತಿರುವ 'ಕ್ರೋನಿ ಕ್ಯಾಪಿಟಲಿಸಂ'ನಿಂದ ಹೊರತಾದ ದೊಡ್ಡ ಬಂಡವಾಳಿಗರ ಪರವಾದ ನೀತಿಯಂತೆ. ಇಂದು ವಿಶ್ವಬ್ಯಾಂಕ್, ಫೋರ್ಡ್ ಫೌಂಡೇಷನ್ ಪ್ರಾಯೋಜಿತ ಎನ್‌ಜಿಓಗಳು ಬಯಸುವ ರೀತಿಯ 'ಒಳ್ಳೆಯ ಬಂಡವಾಳಶಾಹಿ' ಬೆಳವಣಿಗೆಯನ್ನು ಬಯಸುವುದೂ ಹೊಸದಲ್ಲ, ಅದರ ಬೀಜಗಳೂ ಆ ಕಾಲದಲ್ಲೇ ಇದ್ದವು.

ಹಳೆಯ ಭೂಮಾಲೀಕರು, ರಾಜರುಗಳ ಪಾರಮ್ಯ ಹೊಸ ಪ್ರಜಾತಂತ್ರದಲ್ಲೂ ಮುಂದುವರೆಸಿದ್ದು, ಬ್ರಿಟಿಷರ ಚಮಚಾಗಳಾಗಿ ಬೆಳೆದ ಹೊಸ ಉದ್ದಿಮೆದಾರರ ಅನುಕೂಲಗಳಿಗೆ ತಕ್ಕಂತೆ ಆರ್ಥಿಕನೀತಿಯನ್ನು ಹೊಸೆದದ್ದು ಈ ದೇಶವನ್ನು ಹೊಸ ರೀತಿಯ ಪ್ರಜಾಪ್ರಭುತ್ವವಾಗಿ ರೂಪಿಸಿತು. ಅದರ ತಾರ್ಕಿಕ ಮುಂದುವರಿಕೆಯೇ ಮೋದಿ ಮಾದರಿ ಪ್ರಜಾಪ್ರಭುತ್ವ. 1947, 1966, 1975, 1990 ಮತ್ತು 2014 ಎಲ್ಲವೂ ಒಂದಕ್ಕೊಂದು ಸಂಬಂಧ ಇರುವ ಬಿಡುಗಡೆಯಿದೆಯೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಅದರ ಕುರಿತು ಬರ್ಕ್‌ವೈಟ್ ಪುಸ್ತಕದಲ್ಲೂ ಕೆಲವು ಕುತೂಹಲಕಾರಿ ಸಂಗತಿಗಳಿವೆ. 'ಭಾರತದ ಮುಖ್ಯ ದೇಹದಿಂದ ಈ ದೇಶವನ್ನು ಪ್ರತ್ಯೇಕಿಸಿದಾಗ ವಾಸ್ತವಿಕ ಸ್ಥಿತಿಗತಿಗಳನ್ನು ಒಂದಿಷ್ಟೂ ಗಣನೆಗೆ ತೆಗೆದುಕೊಂಡಿರಲಿಲ್ಲ. ಇದೊಂದು ತೀರ ಅಸಹಜ ವಿಭಜನೆಯಾಗಿತ್ತು. ಜಗತ್ತಿನ ಶೇಕಡಾ 75ರಷ್ಟು ಸೆಣಬನ್ನು ಪಾಕಿಸ್ತಾನ ಬೆಳೆಯುತ್ತಿತ್ತು ಆದರೆ ಅದರ ಸಂಸ್ಕರಣ ಗಿರಣಿಗಳೆಲ್ಲಾ ಭಾರತದಲ್ಲಿದ್ದವು. ಭಾರತದ 1/3ರಷ್ಟು ಹತ್ತಿಯನ್ನು ಪಾಕಿಸ್ತಾನ ಬೆಳೆಯುತ್ತಿತ್ತು ಆದರೆ ಅದರಲ್ಲಿದ್ದ ಗಿರಣಿಗಳ ಸಂಖ್ಯೆ 1/13ರಷ್ಟು ಮಾತ್ರ.' ಇಂತಹ ಇನ್ನೂ ಹಲವು ಉದಾಹರಣೆಗಳನ್ನು ಆಕೆ ಬಿಚ್ಚಿಡುತ್ತಾರೆ.

ಅದೇ ರೀತಿ ಪಾಕಿಸ್ತಾನಕ್ಕೆ ಟಾಟಾ, ಬಿರ್ಲಾ, ದಾಲ್ಮಿಯಾ ಎಲ್ಲವೂ ಆಗಿದ್ದ ಅಬ್ದುಲ್ಲಾ ಹರೂನ್‌ರ ಕುರಿತೂ ವಿವರಗಳಿವೆ. 'ಹೊಸ ರಾಷ್ಟ್ರದಲ್ಲಿ ಹರೂನ್ ಕುಟುಂಬದ ಪ್ರತಿಯೊಬ್ಬರೂ ಕೈಗೆ ಸಿಕ್ಕ ಎಲ್ಲ ರಾಜಕೀಯ ಹಾಗೂ ವಾಣಿಜ್ಯ ಕ್ಷೇತ್ರದ ನೇತೃತ್ವ ವಹಿಸಿದರು. ಸಕ್ಕರೆಯ ಸಿಂಡಿಕೇಟ್‌ನ ಮುಖ್ಯಸ್ಥಿಕೆ ವಹಿಸಿಕೊಂಡ ಶ್ರೀಮತಿ ಹರೂನ್, ಗಂಡ ಮಾಡುತ್ತಿದ್ದ ಲಾಭದಾಯಕವಾದ ಸೆಕೆಂಡ್ ಹ್ಯಾಂಡ್ ಉಡುಪು ತಯಾರಿಕೆ ವ್ಯವಹಾರವನ್ನೂ ಕೈಗೆತ್ತಿಕೊಂಡಳು. ಅವರ ಹಿರಿಯ ಮಗ ಯೂಸುಫ್, ಮುಸ್ಲಿಂ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷನಾದ. ಒಂದು ಅವಧಿಯವರೆಗೆ ಕರಾಚಿಯ ಮೇಯರ್ ಕೂಡಾ ಆಗಿದ್ದ, ಇತ್ತೀಚೆಗೆ ಸಿಂಧ್ ಪ್ರಾಂತದ ಮುಖ್ಯಸ್ಥನಾದ. ಜಿನ್ನಾ ಹೊರಡಿಸುತ್ತಿದ್ದ 'ಡಾನ್' ವೃತ್ತಪತ್ರಿಕೆಯ ಪ್ರಕಾಶಕನಾದ. ಬಟ್ಟೆ ಮತ್ತು ಆಟಿಕೆಗಳ ಆಮದು ಮುಂತಾದ ವೈವಿಧ್ಯಮಯ ತಯಾರಿಕಾ ಉದ್ಯಮ ವ್ಯವಹಾರಗಳನ್ನು ನಡೆಸಿದ. 'ಪಾಕ್‌ಏರ್' ಎಂಬ ಹೆಸರಿನ ಹೊಸ ಏರ್‌ಲೈನ್ಸ್ ಆರಂಭಿಸಿದ.'

ಈ ರೀತಿ ಆರಂಭಗೊಂಡ ಪಾಕಿಸ್ತಾನದ ಪ್ರಜಾತಂತ್ರ ಇನ್ನೂ ವಿಚಿತ್ರ ಸ್ಥಿತಿಯಲ್ಲಿತ್ತು. ಅದರ ವಿವರಗಳನ್ನು ತೆಹಮಿನಾಳ ಆತ್ಮಕಥೆಯಲ್ಲಿ ಕಾಣಬಹುದು. ಆಕೆಯ ಗಂಡ ಮುಸ್ತಾಫಾ ಹಾಗೂ ಇನ್ನಿತರ 'ಕುಲೀನ' ಮುಸ್ಲಿಂ ಕುಟುಂಬಗಳು ಸದಾ ವಿಮಾನಗಳಲ್ಲೇ ಓಡಾಡುತ್ತಾರೆ. ಬೇಕೆನಿಸಿದಾಗ ಹೋಗಿ ಲಂಡನ್‌ನಲ್ಲಿ ನೆಲೆಸುತ್ತಾರೆ. ಆದರೆ ಆಗಲೂ ಅವರ ಶ್ರೀಮಂತಿಕೆಗೆ ಮೂಲ ಕಾರಣವಾದ ಅಪಾರ ಭೂಮಿ ಇರುವ ಪಂಜಾಬ್ ಪ್ರಾಂತದ ಸ್ವಂತ ಊರು 'ಕೋಟ್ ಅದ್ದು'ವಿನ ಅವರದ್ದೇ ಮನೆಯಲ್ಲಿ ವಿದ್ಯುತ್ ಇರುವುದಿಲ್ಲ. ಸಫಿಯಾ ಎಂಬ ಗಗನಸಖಿಯನ್ನು ವರಿಸುವ ಮುಸ್ತಾಫಾ ಅವಳನ್ನು ನಿಯಂತ್ರಣದಲ್ಲಿಡಲು ವಿದ್ಯುತ್ ಇಲ್ಲದ ಕೋಟ್‌ಅದ್ದುವಿನ ಮನೆಯಲ್ಲಿ ಇರಿಸಿರುತ್ತಾನೆ.

ಇಂತಹ ಭೂಮಾಲೀಕರು, ಹರೂನ್‌ನಂತಹ ಉದ್ದಿಮೆದಾರರು ಮಾತ್ರವಲ್ಲದೇ, ಬುಡಕಟ್ಟು ಅವಸ್ಥೆಯಲ್ಲಿರುವ ಹಲವು ಪ್ರಾಂತಗಳ ಯಜಮಾನರುಗಳು, ಜಿಯಾ–ಮುಷರಫ್‌ನಂತಹ ಸೇನಾ ಜನರಲ್‌ಗಳು, ಭುಟ್ಟೋನಂತಹ ಏಕಕಾಲದಲ್ಲಿ ಉದಾರವಾದಿ ಮತ್ತು ಫ್ಯೂಡಲ್ ನಾಯಕರು ಹಾಗೂ ಧಾರ್ಮಿಕ ನಾಯಕರು ಎಲ್ಲರೂ ಸೇರಿ ಪಾಕಿಸ್ತಾನದ ಭವಿಷ್ಯ ನಿರ್ಧರಿಸುವ ವಿಚಿತ್ರ ಪರಿಸ್ಥಿತಿಯನ್ನು ತೆಹಮಿನಾಳ ಆತ್ಮಕಥೆ ಬಿಚ್ಚಿಡುತ್ತಾ ಹೋಗುತ್ತದೆ. ಅವೆಲ್ಲದರ ಪರಿಣಾಮವಾಗಿ ಅಲ್ಲಿ ಪಾಕಿಸ್ತಾನದ ರೀತಿಯ ಪ್ರಜಾತಂತ್ರ ಅಸ್ತಿತ್ವದಲ್ಲಿದೆ. ಅದನ್ನು ಇಂಗ್ಲೆಂಡ್‌ನಲ್ಲಿ ನಾಲ್ಕಾರು ಮನೆಗಳನ್ನು ಹೊಂದಿದ್ದ ಕುಟುಂಬದ, ಆದರೆ ಉದಾರವಾದಿ ರಾಜಕಾರಣಿಯೆಂದು ಹೆಸರಾಗಿದ್ದ ಫ್ಯೂಡಲ್ ಗಂಡನ ಬರ್ಬರ ಹಿಂಸೆಗೆ ತುತ್ತಾಗಿದ್ದ ಹೆಣ್ಣುಮಗಳ ಜೀವನ ಕಥೆಯ ರೂಪದಲ್ಲಿ ಓದಬೇಕೆಂದರೆ 'ಆರನೇ ಹೆಂಡತಿಯ ಆತ್ಮಕಥೆ' ಓದಲೇಬೇಕು.

ಈ ಚುನಾವಣೆಯ ಸಂದರ್ಭದಲ್ಲಿ ಓದಿದ ಈ ಇಬ್ಬರು ಮಹಿಳೆಯರ ಕೃತಿಗಳು ಅವಳಿ ದೇಶಗಳ ಆತ್ಮಕಥೆಗಳಂತೆಯೂ ಕಂಡವು.

ವಿಧಾನಸಭೆಯಲ್ಲಿ ತುಟಿಪಿಟಿಕ್ ಅನ್ನದ ಮೋದಿ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಆತ ಕಳೆದ ಹದಿಮೂರು ವರ್ಷಗಳಿಂದ ಮುಖ್ಯಮಂತ್ರಿ ಹುದ್ದೆಯಲ್ಲಿದ್ದಾನೆ. ಈ ಹದಿಮೂರು ವರ್ಷಗಳಲ್ಲಿ ಹಲವಾರು ಬಾರಿ ವಿಧಾನಸಭೆಯ ಅಧಿವೇಶನಗಳು ಮುಗಿವೆ. ಆದರೆ ಇಲ್ಲಿಯತನಕ ಆ ಮುಖ್ಯಮಂತ್ರಿ ಒಮ್ಮೆಯೂ ವಿಧಾನಸಭೆಯಲ್ಲಿ ತುಟಿಪಿಟಿಕ್ ಅಂದಿಲ್ಲ ಎಂದರೆ ನಂಬುತ್ತೀರಾ? ಇದು ಆ ರಾಜ್ಯದ ವಿಧಾನಸಭೆಯ ಕಡತಾವಳಿಗಳ ದಾಖಲೆಗಳಲ್ಲೇ ಸ್ಪಷ್ಟವಾಗಿರುವ ಸಂಗತಿ. ಆದ್ದರಿಂದ ಅದನ್ನು ನೀವು ನಂಬಲೇ ಬೇಕು.

ಮುಖ್ಯಮಂತ್ರಿಯಾಗಿದ್ದರೂ ಒಂದು ಬಾರಿಯೂ ಅಧಿವೇಶನದಲ್ಲಿ ಚಕಾರವೆತ್ತದ 'ಅದ್ಭುತ ಸಾಧನೆ' ಮಾಡಿರುವ ವ್ಯಕ್ತಿ ಬೇರೆ ಯಾರೂ ಅಲ್ಲ, ಈಗ ಪ್ರಧಾನಿ ಆಗುವ ಕನಸು ಕಾಣುತ್ತಿರುವ ನರಹಂತಕ ನರೇಂದ್ರ ಮೋದಿ.

ಯಾಕೆ ಮೋದಿ ಅಧಿವೇಶನದಲ್ಲಿ ಬಾಯಿ ಬಿಟ್ಟಿಲ್ಲ? ಯಾಕೆ ವಿರೋಧ ಪಕ್ಷಗಳ ಶಾಸಕರು ಅಧಿವೇಶನದಲ್ಲಿ ಕೇಳುವ ಪ್ರಶ್ನೆಗಳಿಗೆ ಎಂದೂ ಉತ್ತರಿಸಿಲ್ಲ? ಯಾಕೆ ಪ್ರಮುಖ ಸಂಗತಿಗಳ ಬಗ್ಗೆ ಅಧಿವೇಶನದಲ್ಲಿ ಚರ್ಚೆಗಳಾದಾಗ ಆತ ಅವುಗಳಲ್ಲಿ ಭಾಗವಹಿಸಿಲ್ಲ?

ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಮೋದಿಯ ಫ್ಯಾಸಿಸ್ಟ್ ಧೋರಣೆ. ವಿರೋಧ ಪಕ್ಷದವರು ಎತ್ತುವ ಪ್ರಶ್ನೆಗಳಿಗೆ ಉತ್ತರ ಕೊಡುವ ಜರೂರತ್ತು ಇಲ್ಲ ಎಂದೇ ಮೋದಿ ಭಾವಿಸಿದ್ದಾನೆ. ಮಾತ್ರವಲ್ಲ, ತಾನು ಅಧಿವೇಶನದಲ್ಲಿ ಮಾತನಾಡಿದರೆ ವಿರೋಧ ಪಕ್ಷದವರು ಅಡ್ಡ ಬರುತ್ತಾರೆ, ವಿರೋಧ ವ್ಯಕ್ತಪಡಿಸುತ್ತಾರೆ, ತನ್ನ ಬಂಡವಾಳವನ್ನು ಬಿಚ್ಚಿಡುತ್ತಾರೆ ಎಂಬ ಕಾರಣಕ್ಕೇ ಆತ ಬಾಯಿ ತೆರೆಯುವುದಿಲ್ಲ. ಅಂದರೆ ವಿರೋಧ ಪಕ್ಷದವರೂ ತನ್ನಂತೆ ಜನಪ್ರತಿನಿಧಿಗಳಾಗಿದ್ದರೂ ಅವರ ಅಭಿಪ್ರಾಯ ಮೋದಿಗೆ ಬೇಕಿಲ್ಲ. ಅವರು ಬಾಯಿಬಡಿದುಕೊಂಡರೂ ತಾನು ನಡೆಸುವ ಅಕ್ರಮಗಳನ್ನು ಅಡೆತಡೆ ಇಲ್ಲದೆ ಮುಂದುವರೆಸುತ್ತಾನೆ.

ಈ ಸರ್ವಾಧಿಕಾರಿ ಮೋದಿಗೆ ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆ ಎಂತಹ ಹೇಸಿಗೆ ಇದೆ ಎಂದರೆ ಈಗ ಆತ ಗುಜರಾತ್ ರಾಜ್ಯದ ವಿಧಾನಸಭೆಯ ಪ್ರಾಮುಖ್ಯತೆಯನ್ನೇ ನಾಶವಾಗಿಸಿದ್ದಾನೆ. ಈಗ ಆ ರಾಜ್ಯದಲ್ಲಿ ವಿಧಾನಸಭೆಯ ಅಧಿವೇಶನಗಳು ಕಾಟಾಚಾರಕ್ಕೆ ಮತ್ತು ನಿಯಮಗಳನ್ನು ತೋರಿಕೆಗೆ ಪಾಲಿಸಬೇಕೆಂದು ಮಾತ್ರ ಜರುಗುತ್ತವೆ. ಉದಾಹರಣೆಗೆ ಮಳೆಗಾಲದ ಅಧಿವೇಶನದ ಅವಧಿ ಕೇವಲ ಐದು ದಿನ. ಹಾಗೆಯೇ ಬಜೆಟ್ ಅಧಿವೇಶನ ಕೂಡ ನಡೆದದ್ದು ಒಂದು ವಾರ ಮಾತ್ರ. ಒಂದು ವರದಿಯ ಪ್ರಕಾರ ಗುಜರಾತಿನ ವಿಧಾನಸಭೆ ಒಂದು ವರ್ಷದಲ್ಲಿ 30 ದಿನ ಸೇರಿದರೆ ಅದೇ ಹೆಚ್ಚು ಎಂಬಂತಾಗಿದೆ. ಹೀಗೆ ಅಧಿವೇಶನದ ದಿನಗಳನ್ನು ಕಡಿತಗೊಳಿಸುವ ಮೂಲಕ ಮೋದಿ ತನ್ನ ಸರ್ಕಾರದ ಹುಳುಕುಗಳು ಹೊರಬರದಂತೆ ನೋಡಿಕೊಳ್ಳುತ್ತಿದ್ದಾನೆ.

ಮೋದಿ ಅಧಿಕಾರಕ್ಕೆ ಏರಿದ ನಂತರ ಗುಜರಾತ್ ವಿಧಾನಸಭೆಯಲ್ಲಿ ಎಂತೆಂತಹ ಗೂಂಡಾಗಿರಿ ನಡೆದಿದೆ ಎಂದು ನೋಡಿದರೆ ಆತನ ಪ್ರಜಾತಂತ್ರವಿರೋಧಿ ನಿಲುವು ಇನ್ನಷ್ಟು ಸ್ಪಷ್ಟವಾಗುತ್ತದೆ. ಅದಕ್ಕೆ ಇಲ್ಲಿ ಹಲವು ಉದಾಹರಣೆಗಳಿವೆ ನೋಡಿ:

ಹದಿಮೂರು ವರ್ಷಗಳ ಹಿಂದೆ ಹತ್ತಾರು ಅವ್ಯವಹಾರಗಳನ್ನು ಕುರಿತು ತನಿಖೆ ನಡೆಯಬೇಕೆಂದು ಕಾಂಗ್ರೆಸ್ ಶಾಸಕರು ಒತ್ತಡ ಹೇರಿದರು. ಅದು ಹೆಚ್ಚಾದಾಗ ಮೋದಿ ವಿಧಿಯಿಲ್ಲದೆ ನಿವೃತ್ತ ನ್ಯಾಯಮೂರ್ತಿ ಎಂ.ಬಿ.ಷಾ ಎಂಬುವವರ ನೇತೃತ್ವದಲ್ಲಿ ಒಂದು ವಿಚಾರಣೆ ಆಯೋಗವನ್ನು ರಚಿಸಿದ. ಸುಮಾರು 17 ಅವ್ಯವಹಾರಗಳನ್ನು ತನಿಖೆ ಮಾಡಲು ಆ ಆಯೋಗಕ್ಕೆ ಸೂಚಿಸಲಾಯಿತು. ಆ ಆಯೋಗವು ಜನರಿಂದ ದಾಖಲೆಗಳನ್ನು ಮತ್ತು ಅಫಿಡವಿಟ್ಟುಗಳನ್ನು ಆಹ್ವಾನಿಸಿತು. ಗುಜರಾತಿನ ಪೀಪಲ್ಸ್ ಯೂನಿಯನ್ ಆಫ್ ಸಿವಿಲ್ ಲಿಬರ್ಟೀಸ್ ಸಂಘಟನೆಯ ಕಾರ್ಯದರ್ಶಿಯಾದ ಗೌತಮ್ ಥಾಕರ್ ಎಂಬುವವರು ಹಲವಾರು ದಾಖಲೆಗಳನ್ನು ಸಂಗ್ರಹಿಸಿ ಅವುಗಳನ್ನು ಷಾ ಆಯೋಗದ ಮುಂದೆ ಸಲ್ಲಿಸಲು ಮುಂದಾದರು. ಆದರೆ ಪ್ರತಿ ದಾಖಲೆಗೂ ನೋಟರಿ ಒಬ್ಬರ ಸಹಿ ಇರಬೇಕೆಂದು ಆಯೋಗ ತಾಕೀತು ಮಾಡಿತು.

ಥಾಕರ್ ಅವರು ಸುಮಾರು 44 ದಿನಗಳ ಕಾಲ ಪ್ರಯತ್ನಪಟ್ಟರೂ ಅವರ ಬಳಿ ಇದ್ದ ಮೋದಿ ವಿರೋಧಿ ದಾಖಲೆಗಳಿಗೆ ಸಹಿ ಹಾಕಲು ಯಾವೊಬ್ಬ ನೋಟರಿಗೂ ಧೈರ್ಯವಿರಲಿಲ್ಲ. ಥಾಕರ್ ಅವರ ಅದೃಷ್ಟಕ್ಕೆ ಕೊನೆಗೂ ಒಬ್ಬ ನೋಟರಿ ಸಿಕ್ಕ. ಆನಂತರ ಥಾಕರ್ ಅವರು ದಾಖಲೆಗಳನ್ನು ಸಲ್ಲಿಸಲು ಹೋದಾಗ ಆಯೋಗದ ರಿಜಿಸ್ಟ್ರಾರ್ ಅವುಗಳನ್ನು ಸ್ವೀಕರಿಸಲು ಸಮ್ಮತಿಸಲಿಲ್ಲ. "ನೀನು ಯಾರು? ಯಾಕೆ ಇವನ್ನೆಲ್ಲ ಮಾಡುತ್ತಿದ್ದೀಯಾ? ನೀನು ಕಾಂಗ್ರೆಸ್ ಏಜೆಂಟಾ?" ಎಂದೆಲ್ಲ ರಿಜಿಸ್ಟ್ರಾರ್ ಧಮಕಿ ಹಾಕಿದ. ಥಾಕರ್ ಅವರು ತಮಗೆ ಸಂವಿಧಾನ ನೀಡಿರುವ ಹಕ್ಕನ್ನು ಚಲಾಯಿಸುತ್ತಿರುವುದಾಗಿ ಹೇಳಿದ ನಂತರ ವಿಧಿ ಇಲ್ಲದೆ ಅವರ ದಾಖಲೆಗಳನ್ನು ರಿಜಿಸ್ಟ್ರಾರ್ ಸ್ವೀಕರಿಸಿದ.

ಒಂದು ವರ್ಷ ಕಾಲ ಕೆಲಸ ಮಾಡಿದ ಷಾ ಆಯೋಗವು ಎಂದೂ ಅವ್ಯವಹಾರದಲ್ಲಿ ಭಾಗಿ ಆಗಿದ್ದ ಯಾವ ಅಧಿಕಾರಿಯನ್ನಾಗಲಿ, ಉದ್ಯಮಿಯನ್ನಾಗಲಿ ವಿಚಾರಣೆಗೆ ಒಳಪಡಿಸಲು ಮುಂದಾಗಲಿಲ್ಲ. ಬದಲಾಗಿ ಅಂತಹ ಅಧಿಕಾರಿಗಳನ್ನು ಮತ್ತು ಉದ್ಯಮಿಗಳನ್ನು ಜನರೇ ತನ್ನ ಮುಂದೆ ತಂದು ನಿಲ್ಲಿಸಬೇಕೆಂದು ಆದೇಶಿಸಿತು. ಅದು ಹೇಗೆ ಸಾಧ್ಯ?

ಷಾ ಆಯೋಗವು 2012ರಲ್ಲಿ ತನ್ನ ಮಧ್ಯಂತರ ವರದಿಯನ್ನು ಗುಜರಾತ್ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸಲ್ಲಿಸಿತು. ಅದನ್ನು ಸಚಿವ ಸಂಪುಟ ಅಕ್ಟೋಬರ್ 2ರಂದು ಸ್ವೀಕರಿಸಿತು. ಅದಾದನಂತರ ನಡೆದಿದ್ದೇನು? ಮಾರನೆ ದಿನ, ಅಂದರೆ ಅಕ್ಟೋಬರ್ 3ರಂದು ಬಿಜೆಪಿಯ ವಕ್ತಾರನೊಬ್ಬ 'ಷಾ ಆಯೋಗವು ಮೋದಿ ಸರ್ಕಾರಕ್ಕೆ ಕ್ಲೀನ್‌ಚಿಟ್ ನೀಡಿದೆ' ಎಂದು ಘೋಷಿಸಿದ. ಆದರ ವಾಸ್ತವವಾಗಿ ಷಾ ಆಯೋಗದ ವರದಿಯನ್ನು ಇಲ್ಲಿಯತನಕ ವಿಧಾನಸಭೆಯಲ್ಲಿ ಮಂಡಿಸಿಲ್ಲ, ಅಂದರೆ ಅದರಲ್ಲಿ ನಿಜವಾಗಲೂ ಏನಿದೆ ಎಂಬುದು ಮೋದಿ ಹೊರತಾಗಿ ಬೇರೆ ಯಾರಿಗೂ ಗೊತ್ತಿಲ್ಲ. ಷಾ ಆಯೋಗದ ವರದಿ ಮಾತ್ರವಲ್ಲ, ಇಂತಹ ಹತ್ತಾರು ವರದಿಗಳಿಗೆ ಇಂತಹದ್ದೇ ಗತಿಯಾಗಿದೆ.

ಇತ್ತೀಚೆಗೆ ಮೋದಿ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಎಂದು ಘೋಷಣೆಯಾದ ನಂತರ ಮೂರು ದಿನಗಳ ಅಧಿವೇಶನವನ್ನು ಕರೆಯಲಾಗಿತ್ತು. ಕಾಂಗ್ರೆಸ್ ಶಾಸಕರು ಅದಕ್ಕೆ ಹಲವು ದಿನಗಳ ಮುನ್ನ ಗುಜರಾತಿನಲ್ಲಿ ಸಂಭವಿಸಿದ ನೆರೆ ಹಾವಳಿಯನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಜನರ ನೆರವಿಗೆ ತೆಗೆದುಕೊಂಡಿರುವ ಕ್ರಮಗಳನ್ನು ಕುರಿತು ಅಧಿವೇಶನದಲ್ಲಿ ಚರ್ಚಿಸಬೇಕೆಂದು ಮನವಿ ಸಲ್ಲಿಸಿದ್ದರು. ಆದರೆ ಅಂತಹ ಚರ್ಚೆಯಿಂದ ತಪ್ಪಿಸಿಕೊಳ್ಳಲು ಮೋದಿ ಒಂದು ಕುತಂತ್ರವನ್ನು ರೂಪಿಸಿದ. ಮೋದಿಯ ಚೇಲನಂತೆ ವರ್ತಿಸುವ ಸ್ಪೀಕರ್ ಅಶೋಕ್ ಭಟ್ ಕಾಂಗ್ರೆಸ್ ಶಾಸಕರ ಮನವಿಯನ್ನು ತಿರಸ್ಕರಿಸಿದಾಗ ಸಹಜವಾಗಿಯೇ ಅವರೆಲ್ಲ ಪ್ರತಿಭಟಿಸಿದರು. ಅದನ್ನೇ ನೆಪವಾಗಿಟ್ಟುಕೊಂಡು ಎಲ್ಲಾ ಕಾಂಗ್ರೆಸ್ ಶಾಸಕರನ್ನು ಭಟ್ ಮೂರು ದಿನಗಳ ಕಾಲ ಅಮಾನತ್ತಿನಲ್ಲಿಟ್ಟ. ಅಂದರೆ ನೆರೆ ಹಾವಳಿಗೆ ತುತ್ತಾಗಿರುವ ಜನರಿಗೆ ಮೋದಿ ಏನನ್ನೂ ಮಾಡಿರದಿದ್ದುದು ಅಧಿವೇಶನದಲ್ಲಿ ಚರ್ಚೆಯಾಗದಂತೆ, ಆ ಮೂಲಕ ಜನರ ಗಮನಕ್ಕೆ ಬರದಂತೆ ನೋಡಿಕೊಂಡ.

ಮದ್ಯನಿಷೇಧ ಜಾರಿಯಲ್ಲಿರುವ ಗುಜರಾತಿನಲ್ಲಿ ಎರಡು ವರ್ಷಗಳ ಹಿಂದೆ ಲಾಥಾ ಎಂಬಲ್ಲಿ ಕಳ್ಳಭಟ್ಟಿ ಸೇವಿಸಿದ್ದರಿಂದ ನೂರಾರು ಜನ ಸಾವಿಗೀಡಾದರು. ಅದೇ ಹೊತ್ತಿಗೆ ಅಧಿವೇಶನ ನಡೆಯುತ್ತಿದ್ದರಿಂದ ಈ ಬಗ್ಗೆ ಶೂನ್ಯ ವೇಳೆಯಲ್ಲಿ ಚರ್ಚಿಸಬೇಕೆಂದು ಕಾಂಗ್ರೆಸ್ ಶಾಸಕರು ಮನವಿ ಸಲ್ಲಿಸಿದರು. ಸ್ಪೀಕರ್ ಭಟ್ ಮಾರನೆ ದಿನ ಸಮಯ ಕೊಡುವುದಾಗಿ ಭರವಸೆ ನೀಡಿದ. ಮದ್ಯ ನಿಷೇಧ ನೀತಿ ಜಾರಿಯಲ್ಲಿರುವ ಗುಜರಾತಿನಲ್ಲಿ ಮದ್ಯದಂಗಡಿಗಳಿಲ್ಲ ನಿಜ, ಆದರೆ ಎಂತಹ ಬ್ರಾಂಡನ್ನು ಬೇಕಾದರೂ ಜನ ತಮ್ಮ ಮನೆಯ ಬಾಗಿಲಿಗೆ ತರಿಸಿಕೊಳ್ಳಬಹುದು. ಇದು ಅಕ್ರಮವಾಗಿ ನಡೆಯುವ ಭಾರಿ ಪ್ರಮಾಣದ ವ್ಯವಹಾರವಾಗಿದ್ದು ಇದರಿಂದ ಬಿಜೆಪಿಗೆ ಮತ್ತು ಮೋದಿಗೆ ಪ್ರತಿ ತಿಂಗಳು ಕೋಟ್ಯಾಂತರ ರೂಪಾಯಿ ಲಂಚ ಸಿಗುತ್ತದೆ. ಪರಿಸ್ಥಿತಿ ಹೀಗಿರುವಾಗ ಲಾಥಾದಲ್ಲಿ ಅಕ್ರಮ ಕಳ್ಳಭಟ್ಟಿ ಸಿಗುತ್ತಿದ್ದದ್ದನ್ನು ಕುರಿತು ಚರ್ಚೆಯಾದರೆ ಈ ಅವ್ಯವಹಾರ ದೇಶದ ಗಮನಕ್ಕೇ ಬರುತಿತ್ತು, ಆದ್ದರಿಂದ ಚರ್ಚೆ ನಡೆಯದಂತೆ ಮೋದಿ ನೋಡಿಕೊಳ್ಳಲು ಮುಂದಾದ. ಮೂರು ದಿನಗಳು ಉರುಳಿದರೂ, ಅದೇ ಅವಧಿಯಲ್ಲಿ ಮತ್ತಷ್ಟು ಜನ ಸಾವಿಗೀಡಾದರೂ ಇದರ ಬಗ್ಗೆ ಚರ್ಚಿಸಲು ಕಾಂಗ್ರೆಸ್ ಶಾಸಕರಿಗೆ ಅನುಮತಿಯನ್ನೇ ಸ್ಪೀಕರ್ ಭಟ್ ಕೊಡಲಿಲ್ಲ. ಇದರಿಂದ ರೊಚ್ಚಿಗೆದ್ದ ಕಾಂಗ್ರೆಸ್ ಶಾಸಕರು ವಿಧಾನಸಭೆಯಲ್ಲಿ ಪ್ರತಿಭಟಿಸಲಾರಂಭಿಸಿದರು. ಆಗ ಮಾರ್ಷಲ್‌ಗಳನ್ನು ಕರೆಸಿದ ಭಟ್ ಅವರನ್ನೆಲ್ಲ ವಿಧಾನಸಭೆಯಿಂದ ಹೊರದೂಡುವಂತೆ ಆದೇಶಿಸಿದ. ಅವರನ್ನೆಲ್ಲ ಬಲವಂತಗಾಗಿ ಹೊರ ದಬ್ಬುತ್ತಿದ್ದಾಗ ಮಾರ್ಷಲ್‌ಗಳು ಮೂರು ಮೈಕ್‌ಗಳನ್ನು ಕಿತ್ತುಹಾಕಿದರು. ಇದನ್ನು ಪತ್ರಕರ್ತರು ಕಣ್ಣಾರೆ ನೋಡಿದ್ದರು ಮತ್ತು ವೀಡಿಯೋ ಕ್ಯಾಮೆರಾಗಳೂ ಇದನ್ನು ಸೆರೆಹಿಡಿದಿದ್ದವು. ಆದರೆ ಸ್ಪೀಕರ್ ಭಟ್ ಇದರ ಬಗ್ಗೆ ವರದಿ ಮಾಡದಂತೆ ಮಾಧ್ಯಮಗಳಿಗೆ ತಾಕೀತು ಮಾಡಿದನಲ್ಲದೆ ಮೈಕುಗಳನ್ನು ಕಿತ್ತು ಹಾಕಿದ್ದು ಕಾಂಗ್ರೆಸ್ ಶಾಸಕರು ಎಂದು ಹೇಳಿ ಅವರಿಂದ ಪ್ರತಿ ಮೈಕ್ ರಿಪೇರಿಗೆಂದು 3,600 ರೂಪಾಯಿಗಳ ದಂಡವನ್ನು ಕಟ್ಟಿಸಿಕೊಂಡಿದ್ದ. ಜೊತೆಗೆ ಏಳು ಜನ ಕಾಂಗ್ರೆಸ್ ಶಾಸಕರನ್ನು ಅಧಿವೇಶನದ ಅವಧಿಯಿಂದಲೇ ಅಮಾನತ್ತು ಮಾಡಿದ್ದ.

ಇದಾದನಂತರ ಮತ್ತೊಂದು ಆಘಾತಕಾರಿ ಪ್ರಕರಣ ಜರುಗಿತು. ಒಂದು ದಿನ ಗುಜರಾತ್ ವಿಧಾನಸಭಾದ ಹತ್ತಿರವೇ ಇರುವ ಮಹಾತ್ಮ ಗಾಂಧಿಯ ಪ್ರತಿಮೆಯ ಮುಂದೆ ಕಾಂಗ್ರೆಸ್ ಶಾಸಕರು ಪ್ರಾರ್ಥನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಅವರೆಲ್ಲ ಪ್ರಾರ್ಥನೆ ಮುಗಿಸಿ ಮುಖ್ಯ ಕಟ್ಟಡದತ್ತ ಹೋಗುತ್ತಿದ್ದಾಗ ಸುಮಾರು 200 ಜನರಿದ್ದ ಬಿಜೆಪಿ ಗೂಂಡಾಗಳು ಅವರ ಮೇಲೆ ದಾಳಿ ಮಾಡಿದರು. ಆ ಗುಂಪಿನಲ್ಲಿ ಮೋದಿಯ 'ಸೈಡ್ ಕಿಕ್' ಆಗಿರುವ ಅಮಿತ್ ಶಾನ ಮಿತ್ರರಿದ್ದರಲ್ಲದೆ, ಸಂಘಪರಿವಾರದ ವಿವಿಧ ಸಂಘಟನೆಗಳಲ್ಲಿ ಮುಖ್ಯ ಸ್ಥಾನಗಳನ್ನು ಅಲಂಕರಿಸಿರುವವರೂ ಇದ್ದರು. ಅವರೆಲ್ಲರ ಕೈಗಳಲ್ಲಿ ಲಾಠಿ, ಕ್ರಿಕೆಟ್ ಬ್ಯಾಟ್‌ಗಳಿದ್ದವಲ್ಲದೆ ಒಬ್ಬನ ಕೈಯಲ್ಲಿ ಚಾಕು ಕೂಡ ಇತ್ತು. ಈ ರೌಡಿಗಳ ಗುಂಪು ಕಾಂಗ್ರೆಸ್ ಶಾಸಕರ ಮೇಲೆ ದಾಳಿ ಮಾಡುತ್ತಿದ್ದಾಗ ಸ್ಥಳದಲ್ಲಿದ್ದ ಪೊಲೀಸರು ಕೈಕಟ್ಟಿಕೊಂಡು ನಿಂತಿದ್ದರು. ಅದೆಷ್ಟೋ ಹೊತ್ತು ತೆಪ್ಪಗಿದ್ದ ಪೊಲೀಸರು ಕೊನೆಗೂ ದಾಳಿಕೋರರನ್ನು ತಡೆದರು ನಿಜ. ಆದರೆ ಅವರ್‍ಯಾರನ್ನೂ ಬಂಧಿಸಲಿಲ್ಲ, ಬದಲಾಗಿ ಅಲ್ಲಿಂದ ಹೋಗುವಂತೆ ದಾಳಿಕೋರರಿಗೆ ಸೂಚಿಸಿದರು. ಆಗ ರೌಡಿಗಳಲ್ಲಿ ಅನೇಕರು ಬಿಜೆಪಿ ಶಾಸಕರ ಮತ್ತು ಮಂತ್ರಿಗಳ ಕಾರುಗಳನ್ನೇರಿ ಅಲ್ಲಿಂದ ಹೊರಟುಹೋದರು.

ಮೋದಿಯ ಸರ್ವಾಧಿಕಾರಿ ಸರ್ಕಾರದಲ್ಲಿ ಜನಪ್ರತಿನಿಧಿಗಳಾದ ಕಾಂಗ್ರೆಸ್ ಶಾಸಕರದ್ದೇ ಈ ಪಾಡಾದರೆ ಇನ್ನು ಜನಸಾಮಾನ್ಯರ ಗತಿ ಹೇಗಿರಬೇಕೆಂದು ಊಹಿಸುವುದೂ ಅಸಾಧ್ಯ. ಗುಜರಾತಿನಲ್ಲಿ ಇಂತಹ ಫ್ಯಾಸಿಸ್ಟ್ ಸರ್ಕಾರವನ್ನು ನಡೆಸುತ್ತಿರುವ ಮೋದಿ ಈ ದೇಶದ ಪ್ರಧಾನಿಯಾದರೆ ಇಲ್ಲಿ ಪ್ರಜಾತಂತ್ರ ವ್ಯವಸ್ಥೆಗೆ ಎಂತಹ ಅಪಾಯ ಕಾದಿದೆಯಲ್ಲವೇ?

****

ಇದೇ ವಾರ 'ದಿ ವೀಕ್' ಪತ್ರಿಕೆಯಲ್ಲಿ ನಿರಂಜನ್ ಟಕ್ಲೆ ಎಂಬುವವರು 'ಸೀಕ್ರೆಟ್ಸ್ ಆಫ್ ದಿ 'ಎಂ'ಪೈರ್' ಎಂಬ ವರದಿಯನ್ನು ಬರೆದಿದ್ದಾರೆ. ಮೋದಿಯ ಹತ್ತಾರು ಭೂ ಹಗರಣಗಳನ್ನು, ಅವ್ಯವಹಾರಗಳನ್ನು ತೆರೆದಿಡುವ ಆ ವರದಿಯಲ್ಲಿನ ಒಂದು ಅಂಶ ಹೀಗಿದೆ:

"ಇದೇ ಫೆಬ್ರವರಿ ತಿಂಗಳಲ್ಲಿ ಗುಜರಾತಿನ ಭ್ರಷ್ಟಾಚಾರ ನಿಯಂತ್ರಣ ಪಡೆಯ ಪೊಲೀಸರು ಕಲ್ಯಾಣ್‌ಸಿಂಗ್ ಚಂಪಾವತ್ ಎಂಬಾತನನ್ನು ಬಂಧಿಸಿದರು. ಜೊತೆಗೆ ಆತನ ಬಳಿ ಇದ್ದ 1.43 ಕೋಟಿ ರೂಪಾಯಿಗಳನ್ನೂ ಜಪ್ತಿಮಾಡಿಕೊಂಡರು.

ಯಾರು ಈ ಕಲ್ಯಾಣ್‌ಸಿಂಗ್ ಚಂಪಾವತ್? ಎಂದು ಬಿಜೆಪಿಯವರನ್ನು ಕೇಳಿದರೆ ಕಂದಾಯ ಮಂತ್ರಿ ಆನಂದಿಬೆನ್ ಪಟೇಲ್ "ನಮಗೂ, ಅವನಿಗೂ ಸಂಬಂಧವೇ ಇಲ್ಲ" ಎನ್ನುತ್ತಾರೆ. ಅಷ್ಟೇ ಅಲ್ಲ, ರಾಜ್ಯ ಬಿಜೆಪಿ ನಾಯಕರೂ ಆತ ತಮ್ಮ ಪಕ್ಷದ ಸದಸ್ಯನೇ ಅಲ್ಲ ಎನ್ನುತ್ತಾರೆ.

ಆದರೆ 2012ರಲ್ಲಿ ಈ ಚಂಪಾವತ್ ಗಾಂಧಿನಗರ ಉತ್ತರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿಗೆ ಅರ್ಜಿ ಸಲ್ಲಿಸಿದ್ದನಲ್ಲದೆ ತಾನು ಹತ್ತಾರು ವರ್ಷಗಳಿಂದ ಆರೆಸ್ಸೆಸ್ ಮತ್ತು ಬಿಜೆಪಿಯ ತಂಡಗಳಿಗೆ ಮುಖ್ಯ ತರಬೇತಿದಾರನಾಗಿದ್ದೇನೆ ಎಂದಿದ್ದ. ಗಾಂಧಿನಗರದಲ್ಲಿ ಸ್ಮಾರ್ಟ್ ಟ್ರೈನಿಂಗ್ ಅಂಡ್ ರಿಸರ್ಚ್ ಸೆಂಟರ್ ಎಂಬ ಕೋಚಿಂಗ್ ಸಂಸ್ಥೆಯನ್ನು ನಡೆಸುವ ಚಂಪಾವತ್‌ನ ಬಳಿ ಇದ್ದ 1.43 ಕೋಟಿ ರೂಪಾಯಿಗಳು ಎಲ್ಲಿಂದ ಬಂದಿತ್ತು ಎಂದು ನೋಡಿದರೆ ಇನ್ನೊಂದು ಅಚ್ಚರಿ ಕಾಣಸಿಗುತ್ತದೆ.


ಅದೇನೆಂದರೆ ಇತ್ತೀಚೆಗೆ ಗುಜರಾತ್ ಸರ್ಕಾರ 1,500 ಗ್ರಾಮ ತಲಥಿ (ಮೂರನೆ ದರ್ಜೆಯ) ಹುದ್ದೆಗಳಿಗೆ ಅರ್ಜಿಗಳನ್ನು ಕರೆದಿತ್ತು, ಅದಕ್ಕೆಂದು ಪರೀಕ್ಷೆಗಳನ್ನೂ ಪ್ರಕಟಿಸಲಾಗಿತ್ತು. ಗುಜರಾತಿನಲ್ಲಿ ಮೋದಿ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸಿರುವುದಾಗಿ ಕೊಚ್ಚಿಕೊಳ್ಳುತ್ತಿದ್ದಾನೆ. ಆದರೆ ಮಾಸಿಕ 5,000 ರೂಪಾಯಿಗಳ ಸಂಬಳವನ್ನು ತರುವ ಗ್ರಾಮ ತಲಥಿ ಹುದ್ದೆಗಳಿಗೆ ಪದವೀಧರರಿಂದ ಕೆಲವೇ ದಿನಗಳಲ್ಲಿ ಬಂದ ಅರ್ಜಿಗಳ ಸಂಖ್ಯೆ ಬರೋಬ್ಬರಿ 8,40,000! ಅನಕ್ಷರಸ್ಥ ನಿರುದ್ಯೋಗಿಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಗುಜರಾತಿನಲ್ಲಿ ಅಂದಾಜು 30 ಲಕ್ಷ ನಿರುದ್ಯೋಗಿಗಳಿದ್ದಾರೆ. ಇದು ಮೋದಿಯ 'ಉದ್ಯೋಗ ಸೃಷ್ಟಿ'ಯ ಅಸಲಿ ಮುಖ."

(ಇತ್ತೀಚೆಗೆ ಕರ್ನಾಟಕದಲ್ಲಿ ಬಿಎಂಟಿಸಿ ಸಂಸ್ಥೆ 1,257 ಹುದ್ದೆಗಳಿಗೆ ಪದವೀಧರರಿಂದ ಅರ್ಜಿಗಳನ್ನು ಕರೆದಿತ್ತು. ಈ ಹುದ್ದೆಗಳ ಮಾಸಿಕ ಸಂಬಳ 10,000-20,000 ರೂಪಾಯಿಗಳು. ಆಗ ಬಂದ ಅರ್ಜಿಗಳ ಸಂಖ್ಯೆ 80,000. ಅಂದರೆ ಮೋದಿಯ ಗುಜರಾತ್‌ಗಿಂತ ಕರ್ನಾಟಕದಲ್ಲೇ ನಿರುದ್ಯೋಗ ಕಡಿಮೆ ಪ್ರಮಾಣದಲ್ಲಿದೆ ಎಂದಾಯಿತಲ್ಲವೇ?)

ನಿರಂಜನ್ ಟಕ್ಲೆ ಅವರು ಮುಂದುವರೆದು ಹೀಗೆ ಹೇಳುತ್ತಾರೆ:

"ಕಲ್ಯಾಣ್‌ಸಿಂಗ್ ಚಂಪಾವತ್ ತರಹದ ಮಧ್ಯವರ್ತಿಗಳು ನಿರುದ್ಯೋಗಿಗಳಿಗೆ ಕೆಲಸ ಕೊಡಿಸುವ ಭರವಸೆ ನೀಡಿ ಲಂಚ ಪಡೆದಿದ್ದರು. ಒಂದು ಮೂಲದ ಪ್ರಕಾರ ಪ್ರತಿ ಅಭ್ಯರ್ಥಿಯಿಂದ ಮಧ್ಯವರ್ತಿಗಳು ಪಡೆದ ಲಂಚ ಹತ್ತು ಲಕ್ಷ ರೂಪಾಯಿ. ಮೋದಿ ಆಡಳಿತದಲ್ಲಿ ಚುನಾವಣೆಯ ಮುನ್ನ ನಡೆದಿರುವ ನೇಮಕಾತಿ ಹಗರಣ ಇದೇ ಮೊದಲನೆಯದಲ್ಲ. ಕಳೆದ ಚುನಾವಣೆಗೆ ಇನ್ನೂ ಎರಡು ತಿಂಗಳು ಇದೆ ಎನ್ನುವಾಗ ಇಂತಹದ್ದೇ ಇನ್ನೊಂದು 300 ಕೋಟಿ ರೂಪಾಯಿಗಳ ನೇಮಕಾತಿ ಹಗರಣ ನಡೆದಿತ್ತು. ಈಗ ಲೋಕಸಭೆ ಚುನಾವಣೆಗೆ ಇನ್ನು ಕೆಲವೇ ತಿಂಗಳು ಇದೆ ಎನ್ನುವಾಗ ಮತ್ತೆ ನೇಮಕಾತಿ ಹಗರಣ ನಡೆದಿರುವುದು ಅಚ್ಚರಿಯೇನಲ್ಲ. ಗುಜರಾತ್ ಕಾಂಗ್ರೆಸ್ ಅಧ್ಯಕ್ಷ ಅರ್ಜುನ ಮೊಧ್ವಾಡಿಯಾ ಅವರು ಈ ಕುರಿತು ಹೀಗೆ ಲೇವಡಿ ಮಾಡಿದರು: "ಮೋದಿ ತನ್ನ ಭಾಷಣಕ್ಕೆ ಹತ್ತು ರೂಪಾಯಿಗಳ ದೇಣಿಗೆ ಪಡೆಯುತ್ತಾನೆ. ಆದರೆ ಆತನ ನಿಕಟವರ್ತಿಗಳು ಒಂದು ಹುದ್ದೆಗೆ ಹತ್ತು ಲಕ್ಷ ರೂಪಾಯಿಗಳನ್ನು ಪಡೆಯುತ್ತಾರೆ. ಇದು ಮೋದಿಯ ಅವ್ಯವಹಾರಕ್ಕೆ ಒಂದು ಸಾಕ್ಷಿ."

ಮೋದಿ ಎಂಬ ಮೋಸಗಾರ, ಸುಳ್ಳುಗಾರ, ಭ್ರಷ್ಟ, ಕೊಲೆಗಡುಕ ನಮ್ಮ ದೇಶದ ಪ್ರಧಾನಿ ಆಗದಂತೆ ತಡೆಯುವುದು ಎಲ್ಲರ ಕರ್ತವ್ಯವಲ್ಲವೇ?







ವಾಲ್ಮೀಕಿ ಯಾರು? ಬ್ರಾಹ್ಮಣನೋ? ಬೇಡನೋ?

ಮನುವಾದಿಗಳು ಮತ್ತೊಮ್ಮೆ ಅಖಾಡಕ್ಕಿಳಿದಿದ್ದಾರೆ. ಈ ಬಾರಿ ಅವರ ದಾಳಿಯ ಗುರಿ ನೇರವಾಗಿ ಬೇಡ/ನಾಯಕ ಜನಾಂಗ. ನಮ್ಮ ನಾಡಿನಲ್ಲಿ ಜನಮನ್ನಣೆ ಗಳಿಸಿರುವ ಎಲ್ಲ ವ್ಯಕ್ತಿಗಳ ಮೇಲೆ ತಮ್ಮ ಜಾತಿಯ ಅಥವಾ ಸಿದ್ಧಾಂತದ ಮುದ್ರೆಯೊತ್ತುವುದು ಅನಾದಿಯಿಂದಲೂ ಅವರಿಗೆ ಕರಗತವಾಗಿರುವ ಕಲೆ. ಈ ಬಾರಿ ಅವರು ರಾಮಾಯಣ ಮಹಾಕಾವ್ಯದ ಕರ್ತೃ ಮಹಾಕವಿ ವಾಲ್ಮೀಕಿಯನ್ನು ಆಪೋಷನ ತೆಗೆದುಕೊಳ್ಳಲು ಹೊರಟಿದ್ದಾರೆ. ಅಷ್ಟು ಮಾತ್ರವಲ್ಲ, ವಾಲ್ಮೀಕಿಯ ಮೇಲೆ ಬ್ರಾಹ್ಮಣ್ಯದ ಮುದ್ರೆಯೊತ್ತುವ ಭರದಲ್ಲಿ ಬೇಡ/ನಾಯಕ ಜಾತಿಯನ್ನು ಅತ್ಯಂತ ಹೀನಾಯವಾಗಿ ಹೀಯ್ಯಾಳಿಸಿದ್ದಾರೆ.

ಮಾರ್ಚ್ 15ರಂದು ಮೈಸೂರಿನಲ್ಲಿ ಕೆಲವು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವಿತ್ತು. ಈ ಕೃತಿಗಳ ಕರ್ತೃ ಡಾ.ಕೆ.ಎಸ್.ನಾರಾಯಣಾಚಾರ್ಯ ಎಂಬ ಸುಮಾರು 80 ವರ್ಷ ವಯಸ್ಸಿನ ವಯೋವೃದ್ಧ ಪಂಡಿತೋತ್ತಮರು. ಆ ಸೇರಿಕೊಳ್ಳುವುದು ಮಾಮೂಲಿ. ಆ ಮಾತು ಹಾಗಿರಲಿ.

ಆದರೆ ಅಲ್ಲಿ ಬಿಡುಗಡೆಯಾದ ಒಂದು ಪುಸ್ತಕವನ್ನು ನಾವು ಮಾಮೂಲಿ ಎಂಬಂತೆ ಕಡೆಗಣಿಸಲಾಗುವುದಿಲ್ಲ. ಆ ಪುಸ್ತಕದ ಹೆಸರೇ ಕುತೂಹಲ ಕೆರಳಿಸುವಂತಿದೆ. ಆ ಪುಸ್ತಕದ ತಲೆಬರಹ 'ವಾಲ್ಮೀಕಿ ಯಾರು?' ಎಂದು. ಇದೇನು? ಮನುವಾದಿ ಕೇಸರಿಕೂಟಕ್ಕೆ ಇದ್ದಕ್ಕಿದ್ದಂತೆ ಇಂಥಾ ಪ್ರಶ್ನೆ ಮೂಡಿದೆ ಎಂದು ಯಾರಿಗಾದರೂ ಅನ್ನಿಸಬಹುದು. ಸಾಮಾನ್ಯವಾಗಿ ಪ್ರೈಮರಿ ಶಾಲೆಯ ವಿದ್ಯಾರ್ಥಿಗಳಿಗೂ ವಾಲ್ಮೀಕಿ ಋಷಿ ರಾಮಾಯಣದ ಕರ್ತೃ ಎಂಬುದು ತಿಳಿದಿದೆ. ವಾಲ್ಮೀಕಿ ಯಾರು ಎಂಬುದು ಇಷ್ಟು ಪ್ರಚಲಿತವಾಗಿರುವಾಗ ಈ ಚಡ್ಡಿ ಚತುರರಿಗೆ ಇಂಥಾ ಪ್ರಶ್ನೆ ಮೂಡಿ ಅದಕ್ಕೊಂದು ಪುಸ್ತಕ ಕೆತ್ತಲು ಕಾರಣವೇನಿರಬಹುದು? ಇದೇ ಅಸಲಿ ಪ್ರಶ್ನೆ.

ವಾಲ್ಮೀಕಿಯ ಹಿನ್ನೆಲೆಯ ಬಗ್ಗೆ ಒಂದಷ್ಟು ಕೆದಕಿದಾಗ ಪುರಾಣದ ಜೊತೆ ಹೆಣೆದುಕೊಂಡಿದೆ ಎಂಬುದು ನಮಗೆಲ್ಲಾ ಗೊತ್ತಿರುವ ಸಂಗತಿ. ಇಂಥಾ ರಾಮಾಯಣವನ್ನು ಬೇಡನೊಬ್ಬ ಬರೆದಿದ್ದಾನೆ ಎಂಬ ಕಹಿಸಂಗತಿ ಈ 'ಹಿಂದೂ ವೀರ'ರಿಗೆ ಅಪಥ್ಯವಾಗಿದೆ. ಸುಮಾರು 3000 ವರ್ಷಗಳಿಂದಲೂ, ನಾನಾ ತಂತ್ರ-ಕುತಂತ್ರಗಳಿಂದ ತಮ್ಮ ಜಾತಿಶ್ರೇಷ್ಠತೆಯನ್ನು ಸಾಧಿಸುತ್ತಾ ಬಂದಿರುವ ಈ ಪುರೋಹಿತಶಾಹಿ ವರ್ಗ ವಾಲ್ಮೀಕಿಯನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲಿಕ್ಕೆಂದೇ ಈ ಕೃತಿಯನ್ನು ರಚಿಸಲಾಗಿದೆ. ಈ ಪ್ರಯತ್ನ ಕೇವಲ ನಾರಾಯಣಾಚಾರ್ಯ ಎಂಬ ಲೇಖಕನೊಬ್ಬನಿಗೆ ಸೀಮಿತವಾದುದಲ್ಲ, ಅದು ಇಡೀ ಬ್ರಾಹ್ಮಣಶಾಹಿಗಳ ಶಕ್ತಿಕೇಂದ್ರವಾದ ಆರೆಸ್ಸೆಸ್ ದುಷ್ಟಕೂಟದ ಸಂಚಿನ ಭಾಗವೆಂದೇ ನಾವು ಅರ್ಥ ಮಾಡಿಕೊಳ್ಳಬೇಕು. ಅದಕ್ಕಾಗಿಯೇ ಇಡೀ ಕೇಸರಿ ಕೂಟ ಈ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿತ್ತು. ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ ಸಂಸ್ಥೆ ಈ ಪುಸ್ತಕವನ್ನು ಪ್ರಕಟಿಸಿದೆ.

ಅಭಿರುಚಿಯ ಈ 'ವಾಲ್ಮೀಕಿ ಯಾರು?' ಎಂಬ ಕೃತಿ.

ತಾನು ಬರೆದ ಮುನ್ನುಡಿಯಲ್ಲಿ ಈ ಸತ್ಯವನ್ನು ಹೇಗೆ ಕಾರಿಕೊಂಡಿದ್ದಾನೆಂಬುದನ್ನು ನೋಡಿ:


"ಈಗ ಜಾತಿಗೊಬ್ಬ 'ಜಗದ್ಗುರು', 'ಒಂದು ಮಠ', ಒಂದು ಅನುಚರರ ದಂಡು, ಒಂದು 'ಗ್ರಂಥ', ಒಂದು 'ಧ್ವಜ' ಏನೆಲ್ಲಾ ಪ್ರತ್ಯೇಕತಾ ಸಂಕೇತವೋ ಅದೆಲ್ಲಾ ಹುಟ್ಟಿಕೊಂಡವು...


ಇಂಥಾ ವಿಷಮ ಪರಿಸ್ಥಿತಿಯಲ್ಲೂ ಒಬ್ಬರ ತಲೆಯಲ್ಲಿ ವಾಲ್ಮೀಕಿ ಮಹರ್ಷಿ ಹೊಕ್ಕು ಕೆಲಸ ಮಾಡಲಾರಂಭಿಸಿದ! ಅವರು ಇಲ್ಲಿನ ಸ್ಥಳೀಯ ಸರ್ಕಾರದಲ್ಲಿ ಆಗ ಮಂತ್ರಿಗಳಾಗಿ ತುಂಬ ಪ್ರಭಾವಶಾಲಿಗಳಾಗಿದ್ದವರು. 'ವಾಲ್ಮೀಕಿ ಜನಾಂಗ' ಎಂದುಕೊಳ್ಳುವ ಪರಿಶಿಷ್ಟ ವರ್ಗದವರಾಗಿದ್ದ ಪ್ರಯುಕ್ತ ಹುತ್ತ ಒಡೆದುಕೊಂಡು ಮೇಲೆದ್ದು ಬಂದ ಯುಗಾಂತರದ ವಾಲ್ಮೀಕಿಯಂತೆ, ಇಲ್ಲೂ ಜಾತೀಯ ಹಾವಿನ ಹುತ್ತದೊಳಗಿಂದ 'ವಾಲ್ಮೀಕಿಯ ಪುನರುದಯ ಆಯ್ತು!!!' (ಪುಟ 7, ಮುನ್ನುಡಿಯಿಂದ)"

ಈ ಆಸಾಮಿಯ ಪ್ರಕಾರ 'ವಾಲ್ಮೀಕಿಯ ಪುನರುದಯ' ಎಂದರೆ ಬೇಡ ಜನಾಂಗದವರು ವಾಲ್ಮೀಕಿಯನ್ನು ತಮ್ಮ ಜನಾಂಗದ ಸಂಕೇತವನ್ನಾಗಿ ಆರಿಸಿಕೊಂಡಿದ್ದು! ಇಲ್ಲಿ ಪ್ರಸ್ತಾಪಿತನಾಗಿರುವ ಬೇಡ ಜನಾಂಗದ ಪ್ರಭಾವಿ ಮಂತ್ರಿ ಎಂದರೆ ಬಳ್ಳಾರಿ ಶ್ರೀರಾಮುಲು ಎಂಬುದು ಯಾರಿಗಾದರೂ ಅರ್ಥವಾಗುತ್ತದೆ.

ಈ 'ಹಿಂದೂ' ವೀರನ ಪ್ರಕಾರ ಮಠಮಾನ್ಯಗಳನ್ನು ಕಟ್ಟಿಕೊಳ್ಳುವುದು ಎಲ್ಲ ಜಾತಿಗಳ ಜನರ ಹಕ್ಕಲ್ಲ; ಕೇವಲ ಬ್ರಾಹ್ಮಣರಿಗಷ್ಟೇ ಸೀಮಿತವಾಗಬೇಕಿದ್ದ ಒಂದು ವಿಶೇಷ ಹಕ್ಕು ಎಂಬುದನ್ನು ಪರೋಕ್ಷವಾಗಿ ಸೂಚಿಸಿದ್ದಾನೆ ಮತ್ತೂ ಮುಂದುವರೆದು ಹೀಗೆ ಹೇಳುತ್ತಾನೆ:

"ಈ ಗೊಂದಲದಲ್ಲಿ ವಾಲ್ಮೀಕಿಯ ವಿಸ್ಮೃತಿ! ದಿಢೀರನೆ ಕರ್ನಾಟಕದಲ್ಲಿ ನಾಯಕ/ಬೇಡ ಜನಾಂಗದವರಿಗೆ 'ವಾಲ್ಮೀಕಿ ನಮ್ಮವನು' ಎಂಬ 'ಜ್ಞಾನೋದಯ'! ಜಿಲ್ಲೆಜಿಲ್ಲೆಗಳಲ್ಲಿ 'ವಾಲ್ಮೀಕಿ ಭವನ' ನಿರ್ಮಾಣ ಪ್ರತಿಜ್ಞೆ, ಇದು ಓಟಿನ








ಕಾರ್ಯಕ್ರಮದ ವೇದಿಕೆಯಲ್ಲಿ ನಾರಾಯಣಾಚಾರ್ಯರ ಕುಲಬಂಧುಗಳೂ ಹಾಗೂ ಸಮಾನಮನಸ್ಕರೂ ಆಗಿರುವ ಎಸ್.ಎಲ್.ಭೈರಪ್ಪ ಚಕ್ರವರ್ತಿ ಸೂಲಿಬೆಲೆ, ಮೈಸೂರಿನ ಆರೆಸ್ಸೆಸ್‌ನ ಕಿಂಗ್‌ಪಿನ್ ಹಾಗೂ ಎಂಎಲ್‌ಸಿ ಗೋ.ಮಧುಸೂದನ್ ಮುಂತಾದವರು ರಾರಾಜಿಸುತ್ತಿದ್ದರು. ಕೇಸರಿ ಕೂಟದ ಫಾಸಲೆಯಲ್ಲಿ ಇಂಥಾ ವ್ಯಕ್ತಿಗಳೇ ಕೂಟ ಆತ ಮೂಲತಃ ಬೇಡ ಜನಾಂಗಕ್ಕೆ ಸೇರಿದವನು ಎಂಬ ಉತ್ತರ ನಮಗೆ ಸಿಗುತ್ತದೆ. ಇದೂ ಕೂಡ ನಮ್ಮ ದೇಶದಲ್ಲಿ ಅತ್ಯಂತ ಪ್ರಚಲಿತ ಸಂಗತಿ.

ನೋಡಿ, ಸಮಸ್ಯೆ ಇರುವುದೇ ಇಲ್ಲಿ, ಆರೆಸ್ಸೆಸ್‌ನ ಅಜೆಂಡಾಗಳು ಒಂದಲ್ಲ ಒಂದು ರೀತಿಯಲ್ಲಿ ರಾಮಾಯಣ

ನಾರಾಯಣಾಚಾರಿ ಯಾರು?



81 ವರ್ಷದ ವಯೋವೃದ್ಧ ನಾರಾಯಣಾಚಾರ್ಯ ಮೂಲತಃ ಕನಕಪುರದವರು. ಧಾರವಾಡ ವಿವಿ ವ್ಯಾಪ್ತಿಯ ಕಾಲೇಜಿನಲ್ಲಿ ಪ್ರಾಧ್ಯಾಪಕ/ ಪ್ರಾಂಶುಪಾಲರಾಗಿದ್ದು ಈಗ ನಿವೃತ್ತಿ ಹೊಂದಿದ್ದಾರೆ. ಸದ್ಯಕ್ಕೆ ಮೈಸೂರಿನ ಮಠವೊಂದರಲ್ಲಿ ತನ್ನ 'ಸೇವಾಕಾರ್ಯ'ಗಳಲ್ಲಿ ನಿರತರಾಗಿದ್ದಾರೆ. ರಾಮಾಯಣ, ಮಹಾಭಾರತಗಳ ಬಗ್ಗೆ ಮಾತ್ರವಲ್ಲದೆ ಕೇಸರಿಕೂಟಕ್ಕೆ ಪ್ರಿಯವಾಗುವಂಥ ಸುಮಾರು 70 ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಗಾಂಧಿಯನ್ನು ಕೊಂದದ್ದು ಗೋಡ್ಸೆಯಲ್ಲ ಎಂದು ಪ್ರತಿಪಾದಿಸುವ ವಿಕೃತಿಯೂ ಒಂದು. ನಾಡಿನ ಜನತೆಗೆ ಅಷ್ಟಾಗಿ ಪರಿಚಯವಿಲ್ಲದಿದ್ದರೂ ಈ ಪ್ರಭೃತಿ ಚಡ್ಡಿ ಪಟಾಲಂನೊಳಗೆ ಸಿದ್ಧಾಂತ ಕರ್ತೃ ಲೇಖಕನೆಂಬ ಖ್ಯಾತಿ ಪಡೆದಿದ್ದು ಸುಪರಿಚಿತ.

ಈ ನಾರಾಯಣಾಚಾರಿಯ ಸಾಧನೆಗಳನ್ನು ಮೆಚ್ಚಿದ ಬಿಜೆಪಿ ಸರ್ಕಾರ 2008ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟು ಗೌರವಿಸಿದೆ. ಈ ಪ್ರತಿಭೆಗೆ ವಿಶ್ವವಿದ್ಯಾಲಯವೊಂದು ಡಾಕ್ಟರೇಟ್ ಕೊಡಮಾಡಿದೆ. ಕರ್ನಾಟಕ ಕಲಾಶ್ರೀ, ಗಮಕ ರತ್ನಾಕರ, ರಾಮಾಯಣಾಚಾರ್ಯ ಇತ್ಯಾದಿ ಬಿರುದು ಬಾವಲಿಗಳೂ ಇವರ ಬೆಂಬಲಕ್ಕಿವೆ.

ಭಾಗವತ ಉಪನ್ಯಾಸ/ ಪ್ರವಚನಗಳ ಹೆಸರಿನಲ್ಲಿ ಕೋಮುವಾದವನ್ನು, ನವ ಬ್ರಾಹ್ಮಣವಾದವನ್ನು ಪ್ರಚುರಪಡಿಸುತ್ತಾ ಇವರು ತಮ್ಮ ಸರಜನ್ಮವನ್ನು ಸಾರ್ಥಕ ಪಡಿಸಿಕೊಳ್ಳುತ್ತಿದ್ದಾರೆ.

'ವಾಲ್ಮೀಕಿ ಯಾರು?' ಎಂಬ ಈ ಕೃತಿಯ ವಿಷಯಕ್ಕೆ ಬರೋಣ. ಸುಮಾರು 100 ಪುಟಗಳ ಈ ಕಿರುಹೊತ್ತಗೆಯಲ್ಲಿ 1) ವಾಲ್ಮೀಕಿ ಯಾರು? 2) ವಾಲ್ಮೀಕಿ 3) ವಾಲ್ಮೀಕಿ ದರ್ಶನ ಎಂಬ ಮೂರು ಅಧ್ಯಾಯಗಳಿವೆ. ಈ ಕೃತಿಗೆ ಲೇಖಕರೇ ಮುನ್ನುಡಿಯನ್ನೂ ಬರೆದಿದ್ದು, ಅದರಲ್ಲಿ ಪ್ರತಿಪಾದಿಸಲ್ಪಟ್ಟಿರುವ ವಿಷಯಗಳ ಪ್ರಾಮುಖ್ಯತೆಯಿಂದಾಗಿ ಅದೂ ಕೂಡ ಈ ಕೃತಿಯ ಪ್ರಮುಖ ಭಾಗವೆಂದೇ ಪರಿಗಣಿಸಬೇಕು.

ವಾಲ್ಮೀಕಿ ಎಂಬ ಹೆಸರು ಕರ್ನಾಟಕದಲ್ಲಿ ಒಂದು ಜನಾಂಗದ ಘನತೆಯ ಸಂಕೇತವಾಗಿರುವುದಂತೂ ಸತ್ಯ. ಬೇಡ/ ನಾಯಕ ಜನಾಂಗ ಇತ್ಯಾದಿ ಹೆಸರುಗಳಲ್ಲಿ ಗುರುತಿಸಲ್ಪಡುತ್ತಿದ್ದ ಈ ಶ್ರಮಜೀವಿ ಜನಾಂಗ ಇತ್ತೀಚಿನ ವರ್ಷಗಳಲ್ಲಿ ವಾಲ್ಮೀಕಿ ಜನಾಂಗ ಎಂದು ಗುರುತಿಸಿಕೊಳ್ಳತೊಡಗಿದ್ದಾರೆ. ರಾಜ್ಯದಾದ್ಯಂತ ವಾಲ್ಮೀಕಿ ಹೆಸರಿನಲ್ಲಿ ಸಂಘಟನೆಗಳು ವಿಸ್ತರಿಸುತ್ತಿವೆ.

ಸಾವಿರಾರು ವರ್ಷಗಳಿಂದ ನಮ್ಮ ದೇಶದ ಜನಮನವನ್ನು ಹಿಡಿದಿಟ್ಟಿರುವ ರಾಮಾಯಣ ಮಹಾಕಾವ್ಯ ಬರೆದವನು 'ಕೆಳಜಾತಿ'ಗೆ ಸೇರಿದ ಒಬ್ಬ ಬೇಡ ಎಂಬುದು ಇಂದು ಹಿಂದೆಂದಿಗಿಂತಲೂ ಹೆಚ್ಚು ಪ್ರಚಲಿತವಾಗುತ್ತಿರುವುದು ಸಹಜವಾಗಿಯೇ ಪುರೋಹಿತಶಾಹಿಗಳ ಕಣ್ಣು ಕೆಂಪಾಗುವಂತೆ ಮಾಡಿದೆ. ಹೀಗಾಗಿಯೇ ಇಡೀ ಒಂದು ಜನಾಂಗದ ಹಿರಿಮೆಯ/ ಹೆಮ್ಮೆಯ ಸಂಕೇತವಾಗಿದ್ದ ವಾಲ್ಮೀಕಿ ಮಹರ್ಷಿಯನ್ನು ಒಂದೇ ಏಟಿಗೆ ಆಪೋಷನ ತೆಗೆದುಕೊಳ್ಳಲು ಮನುವಾದಿ ನಾರಾಯಣಾಚಾರಿ ಷಡ್ಯಂತ್ರ ರೂಪಿಸಿಬಿಟ್ಟಿದ್ದಾನೆ. ಅದರ ಪರಿಣಾಮವೇ ಈ ಲಜ್ಜೆಗೇಡಿ/ ಜಾತಿವಾದಿ/ಕೀಳು ಪ್ರಶ್ನೆಯಾದ್ದರಿಂದ ಜಾತಿ ಬುಡಕಟ್ಟು ಸೇರಿದ್ದು, ಯಾರೂ ವಿರೋಧಿಸಲಾರದ, ಒಂದು ಚಳವಳಿ ರೂಪ ತಾಳುತ್ತಿದೆ." (ಪುಟ - 21)

"ವಾಲ್ಮೀಕಿ ಜಯಂತಿಯನ್ನೂ ಸಾರ್ವತ್ರಿಕ ರಜಾದಿನ ಎಂದು ಘೋಷಿಸಬೇಕೆಂಬ" ಅವರ ಬೇಡಿಕೆ, ಸರ್ವಾನುಮತದಿಂದ ಅಂಗೀಕೃತವಾಯ್ತು. ಕರ್ನಾಟಕ ಬಿಟ್ಟು ಬೇರೆಲ್ಲಿ ಹೀಗಾಗಿದೆಯೋ ತಿಳಿಯದು. ಪ್ರಾಯಶಃ ಉತ್ತರ ಪ್ರದೇಶದಲ್ಲೂ ಇರಲಾರದು! ... ಸರಿ, ಪರಿಶಿಷ್ಟರ/ ಬುಡಕಟ್ಟಿನವರ ಓಟಿಗೆ ಧಕ್ಕೆಯಾಗದಿರಲು ಎಲ್ಲ ಪಕ್ಷಗಳೂ ಧ್ವನಿಗೂಡಿಸಿದವು. ನಾವೂ ಸ್ವಾಗತಿಸಿದೆವು."

(ಪುಟ 7, ಮುನ್ನುಡಿಯಿಂದ)

ಇಲ್ಲಿ "ನಾವೂ" ಎಂದರೆ ಯಾರು ಎಂಬುದು ಒಂದು ಪ್ರಮುಖ ಪ್ರಶ್ನೆ. ಈ ಲಜ್ಜೆಗೇಡಿ ಮನುಷ್ಯ ಬ್ರಾಹ್ಮಣ ಜಾತಿಯನ್ನುದ್ದೇಶಿಸಿ ಈ ರೀತಿ ಹೇಳಿಕೊಂಡಿರುವುದು ಸುಸ್ಪಷ್ಟ.

ಈ ಪ್ರಭೃತಿ ರಾಮಾಯಣದ ಬೇರೆಬೇರೆ ಅವತರಣಿಕೆಗಳನ್ನು ಮನಬಂದಂತೆ ಹೀಯಾಳಿಸಿದ್ದಾನೆ. ಉದಾಹರಣೆಗೆ ಪೋಲಂಕಿಯವರ ರಾಮಾಯಣವನ್ನು ಪೋಲಿ ಸೃಷ್ಟಿ ಎಂದು ನೇರವಾಗಿ ಜರೆಯುವಷ್ಟು ದಾರ್ಷ್ಟ್ಯ ತೋರುತ್ತಾನೆ. "ವಾಲ್ಮೀಕಿ ಎಂಬ 'ಬೇಡರವನು' ರಾಮಾಯಣ ರಚಿಸಿದನೆಂದು ವಾದಿಸುವವರು ಏನೂ ಅರಿಯದ, ವಾಲ್ಮೀಕಿಯನ್ನೋದದ, ಹೃದಯದಲ್ಲಿ ಜನಾಂಗೀಯ ವಿಷ, ದ್ವೇಷ ತುಂಬಿದ ರಾಜಕಾರಣಿಗಳು, ಅವರ ಹಿಂದಿನ ಜಾತೀಯ ಪುಢಾರಿಗಳು, ವರ್ಗಗಳು, ಓಟು ಬ್ಯಾಂಕುಗಳು." (ಪುಟ 23)

ಈತನ ಸಂಕುಚಿತ ಬ್ರಾಹ್ಮಣವಾದಿ ಜಾತಿವಾದದ





ಪುಸ್ತಕದ ವಿರುದ್ಧ ಪ್ರತಿಭಟನೆ

...ಕ್ಕಗೆ ಇತಿಮಿತಿಯೇ ಇಲ್ಲವಾಗಿದೆ. ಬೇಡ/ನಾಯಕ ...ನಾಂಗವನ್ನು ಮಾತ್ರವಲ್ಲದೆ, ಪರಿಶಿಷ್ಟ ಜಾತಿಗಳನ್ನೂ, ...ಲಿತರನ್ನೂ ವಿಕೃತ ಬುದ್ಧಿಯವರು, ದುರಹಂಕಾರಿಗಳು ...ದು ನೇರವಾಗಿ ಹೀಯಾಳಿಸುವ ಮಟ್ಟಕ್ಕೆ ಈ ಆಧುನಿಕ ...ನುವಾದಿ ಮುಂದುವರೆದಿದ್ದಾನೆ. ಆತನ ಮಾತುಗಳನ್ನೇ ...ಡೋಣ:

"ಪೂರ್ಣವಾಗಿ ವಾಲ್ಮೀಕಿಯನ್ನು ಓದಿ, ಮೆಚ್ಚಿ, ಒಪ್ಪಿ, ...ನ ಎಲ್ಲ ಸೊಗಸುಗಳಿಗೂ ಮನಸೋತು ...ಜಕಾರಣಿಗಳೂ, ಬೇಡ/ನಾಯಕ ಜನಾಂಗವೂ, ...ರಿಶಿಷ್ಟರೂ, ದಲಿತರೂ, ಇಲ್ಲಿ ಅಹಂಕಾರ, ಪ್ರತ್ಯೇಕತಾಭಾವ, ...ಕೃತ ಮನ ಬುದ್ಧಿಗಳನ್ನು ತೊರೆಯುವಂತಾದರೆ ತುಂಬ ...ನ್ನು." (ಪುಟ - 21)

ಜೈಲುಪಾಲಾದ ಇವರ ನೀತಿಗೆಟ್ಟ ಸರ್ಕಾರಕ್ಕೆ ಯಾರೋ "ಸೆಕ್ಯುಲರಿಸ್ಟ್‌ಗಳು" ತೊಂದರೆ ಕೊಟ್ಟರು ಎಂಬಂತೆ ಬಿಂಬಿಸುವುದು ನೀಚತನದ ಪರಮಾವಧಿ.

ಚರಿತ್ರೆಯ ಬಗ್ಗೆ ಪ್ರಸ್ತಾಪಿಸುವಾಗಲೂ ಹೀಗೆ ಆಕ್ಷೇಪ ವ್ಯಕ್ತಪಡಿಸಿದ್ದಾನೆ:

"ಸಂಸ್ಕೃತ ಪಾಠಶಾಲೆಗಳು ಮುಚ್ಚುತ್ತಾ ಬಂದವು. ಮದ್ರಸಾ, ಮಿಶಿನರಿಗಳು ಎಲ್ಲೆಲ್ಲೂ ಹರಡುತ್ತಾ ಮತಾಂತರಕ್ಕೆ ಸರ್ಕಾರಗಳೇ ಪ್ರತ್ಯಕ್ಷ-ಪರೋಕ್ಷವಾಗಿ ಪ್ರೋತ್ಸಾಹವೀಯುತ್ತಾ ಹಿಂದೂಗಳ ಸಂಖ್ಯೆ, ಒಕ್ಕಟ್ಟು, ಮೌಲ್ಯಗಳು, ಸಾಮಾಜಿಕ ಭದ್ರತೆ ನಶಿಸುತ್ತಾ ಪಂಡಿತರು ಅನಾಥರಾದರು. ದೇವಾಲಯಗಳ ಆರ್ಥಿಕ ಸುಸ್ಥಿತಿ ನಾಶವಾಯ್ತು. ಹಿಂದೂ ಸಂತರ, ಮಹಾಪುರುಷರ, ಮಹಾಕವಿ/ದಾರ್ಶನಿಕರ, ದ್ರಷ್ಟಾರರ


ತಾನು ಹೇಳುತ್ತಿರುವುದು ಪರಮಸತ್ಯ ಎಂಬುದನ್ನು ನಂಬಿಸಲು ಈ ಆಸಾಮಿ "ತಾನು ಬ್ರಾಹ್ಮಣನಾಗಿರದಿದ್ದರೂ ಹೀಗೇ ಬರೆಯುತ್ತಿದ್ದೆ" ಎಂದು ಒಂದೆಡೆ ಹೇಳಿಕೊಂಡಿದ್ದಾನೆ. ಆ ಮೂಲಕ ಈಗ ನಾನು ಮಂಡಿಸುತ್ತಿರುವುದು ಜಾತಿ ತಾರತಮ್ಯದ ಮಲವನ್ನು ತಲೆಯಲ್ಲಿ ತುಂಬಿಕೊಂಡಿರುವ ಬ್ರಾಹ್ಮಣವಾದವನ್ನೇ ಎಂಬುದನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದಾನೆ.

ಈ ಎಲ್ಲ ವಾದ ಸರಣಿಗೆ ಕಳಸವಿಟ್ಟಂತೆ ಆಚಾರಿ ಹೀಗೆ ಅಪ್ಪಣೆ ಕೊಡಿಸಿದ್ದಾನೆ: "ಸತ್ಯಾರ್ಥ ತಿಳಿಯದವರು ವಾಲ್ಮೀಕಿಯನ್ನು ಅತ್ತಿತ್ತ ಸೆಳೆದಾಡುವುದನ್ನು ನಿಲ್ಲಿಸಬೇಕು... "ಪರಂ ಕವೀನಾಂ ಆಧಾರಂ" ಎಂದು ಮುಂದೆ ಬರುವ ಕವಿಗಳಿಗೆ ಆಧಾರವಾದ ಆದಿಕವಿಯ ತೇಜೋವಧೆ

ನಿಜಕ್ಕೂ ಸ್ವಾಭಿಮಾನವಿದೆಯೆ? ತನ್ನ ಜನಾಂಗದ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇದ್ದಲ್ಲಿ ಈ ಕೂಡಲೇ ಆರೆಸ್ಸೆಸ್‌ನ ಕಪಿಮುಷ್ಟಿಯಲ್ಲಿರುವ ಬಿಜೆಪಿ ಕೂಟವನ್ನು ತೊರೆಯಲಿ.

ಮೈಸೂರಿನ ನಾಯಕ ಜನಾಂಗದವರು ಮಾತ್ರವಲ್ಲದೆ ಇಡೀ ನಾಡಿನಾದ್ಯಂತ ಇರುವ ದೀನದಲಿತರು, ಹಿಂದುಳಿದವರೂ ಒಟ್ಟಾಗಿ ಮೈಚಳಿಬಿಟ್ಟು ಬೀದಿಗಿಳಿದು, ನಾರಾಯಣಾಚಾರಿ ಮತ್ತು ಅವನ ಕೋಮುವಾದಿ ಕೂಟಕ್ಕೆ ಮಣ್ಣುಮುಕ್ಕಿಸದೇ ಹೋದರೆ ನಮಗೆ ಉಳಿಗಾಲವಿಲ್ಲ.

ಈ ಹಿಂದೆ ಬೆಂಗಳೂರಿನ ಜಯನಗರದಲ್ಲಿ ಇಂಥದೇ ಕೇಸರಿ ಕೂಟದ ಕಾರ್ಯಕ್ರಮವೊಂದರಲ್ಲಿ ಮಾತಾಡುತ್ತಾ "ಸನ್ಯಾಸಿಗಳು ನಮ್ಮ ಧರ್ಮವನ್ನು ರಕ್ಷಿಸಲು ಪರಶುರಾಮನಂತೆ ಹೋರಾಡಲು ಸಿದ್ಧರಾಗಬೇಕು" ಎಂದು ಇದೇ ನಾರಾಯಣಾಚಾರಿ ಹೂಂಕರಿಸಿದ್ದ. ಆದರೆ ಈ ಆಚಾರಿಯ ಕೂಟ ಒಂದು ಸಂಗತಿಯನ್ನು ನೆನಪಿನಲ್ಲಿಡುವುದು ಒಳ್ಳೆಯದು. ಪರಶುರಾಮ ಎಂಬುದು ಪುರಾಣದಲ್ಲಿ ಬರುವ ಒಂದು ಕಾಲ್ಪನಿಕ ಪಾತ್ರವಷ್ಟೆ. ಆದರೆ ಕತ್ತಿ, ಕೊಡಲಿಗಳನ್ನು ಹಿಡಿದುಕೊಂಡೇ ತಮ್ಮ ಇಡೀ ಜೀವನವನ್ನು ಸಾಗಿಸುವ ಜೀವಂತ ಪರಶುರಾಮರು ಲಕ್ಷಾಂತರ ಮಂದಿ ಇದ್ದಾರೆ. ಅವರು ಜಾಗೃತಗೊಂಡರೆ ಈ ಪರಾವಲಂಬಿ ಮನುವಾದಿಗಳು ಬಾಲ ಮುದುರಿಕೊಳ್ಳುತ್ತಾರೆ.





ಈ ನರಜಂತುವಿನ ನರನಾಡಿಗಳಲ್ಲಿ ಎಷ್ಟೊಂದು ...ತಿದ್ವೇಷದ ವಿಷ ತುಂಬಿಕೊಂಡಿದೆ ಎಂಬುದಕ್ಕೆ ಮತ್ತಾವ ...ಕ್ಷಿ ಬೇಕು? ಅದಿರಲಿ. ಬೇಡ/ನಾಯಕ ಜನಾಂಗವನ್ನು, ...ಶಿಷ್ಟರನ್ನು, ದಲಿತರನ್ನು ಅಹಂಕಾರಿಗಳು, ಪ್ರತ್ಯೇಕತಾ ...ವದವರು, ವಿಕೃತ ಮನ ಬುದ್ಧಿಯವರು ಎಂದು ...ಯಾಳಿಸಿದ್ದರೂ ಇದು ಇಷ್ಟು ದಿನ ಯಾರ ಗಮನಕ್ಕೂ ...ರದಂತಾಗಿದ್ದಾದರೂ ಹೇಗೆ? ರೋಚಕ / ವಿವಾದಾತ್ಮಕ ...ದ್ದಿಗಳ ಬೆನ್ನು ಹತ್ತುವ ನಮ್ಮ ಸುದ್ದಿ ಮಾಧ್ಯಮಗಳು ... ವಿಷಯವನ್ನು ಯಾಕೆ ಮೂಲೆಗುಂಪು ಮಾಡಿವೆ? ...ತ, ದಮನಿತರ ಪರವಾಗಿ ದನಿಯೆತ್ತುವ ಚಿಂತಕರು, ...ಘ-ಸಂಸ್ಥೆಗಳು ಯಾಕೆ ಈ ವಿಷಯವನ್ನು ಇನ್ನೂ ...ಗಣನೆಗೆ ತೆಗೆದುಕೊಂಡಿಲ್ಲ? ಯಾರ ಅಪ್ಪನ ಸೊತ್ತೂ ...ದ ಸಂಗತಿಗಳ ಸುತ್ತಾ 'ಡುಂಡಿ' ಎಂಬ ಕಾದಂಬರಿ ...ದ ಕಾರಣಕ್ಕೆ ಯೋಗೀಶ್ ಮಾಸ್ಟರ್ ಎಂಬ ಲೇಖಕನ ...ಲೆ ಗದಾಪ್ರಹಾರ ನಡೆಸಿದ ಸರ್ಕಾರ ಈಗ ಕಣ್ಣುಮುಚ್ಚಿ ...ತಿರುವುದೇಕೆ?

... ಕುತಂತ್ರಿ ನಾರಾಯಣಾಚಾರಿಯ ಇಂಥಾ ಕುತ್ಸಿತ ...ಕಾರವನ್ನು ಅಡಗಿಸದೆ ಹೋದರೆ ದೀನದಲಿತರಿಗೆ ...ಳಿಗಾಲವಿಲ್ಲ.

... ಕೋಮುವಾದಿ ಬಿಜೆಪಿ ಸರ್ಕಾರದ ಪರವಾದ ತನ್ನ ...ವನ್ನು ಸ್ವಲ್ಪವೂ ಮುಚ್ಚುಮರೆಯಿಲ್ಲದೆ ಹೀಗೆ ...ಬಿಸಿಕೊಂಡಿದ್ದಾನೆ. "ಯಾವುದೋ ಒಂದು ಅನಿರೀಕ್ಷಿತ ...ಗೆಯಲ್ಲಿ ಒಂದು ಹಿಂದೂ ಪರ ಸರ್ಕಾರ ಇಲ್ಲಿ ...ರ್ನಾಟಕದಲ್ಲಿ ಅಧಿಕಾರಕ್ಕೆ ಬಂತು! "ಎಲ್ಲ ಸರಿಯಾಯ್ತು" ...ದು ನನ್ನಂಥವರು ನಿಟ್ಟುಸಿರು ಬಿಡುವಷ್ಟರಲ್ಲೇ ...-ಹೊರಗು ಶತ್ರುಗಳು ಹುಟ್ಟಿಕೊಂಡರು. ದಾರಿ ತಪ್ಪಿ ... ಅವಸಿತಿಗೆ ಬರಲು ಹೊರಗಿನ ಸೆಕ್ಯುಲರಿಸ್ಟರು ... ಕುಳಿತೇ ಇದ್ದರು."

... ಇಲ್ಲಿ ಹಿಂದೂ ಎಂಬ ಜಾಗದಲ್ಲಿ ಬ್ರಾಹ್ಮಣವಾದಿ ...ದು ಬದಲಾಯಿಸಿಕೊಂಡರೆ ಇವರ ವಾದದ ಹುನ್ನಾರ ... ಸರಳವಾಗಿ ಗ್ರಹಿಕೆಗೆ ಸಿಗುತ್ತದೆ. ಇಡೀ ರಾಜ್ಯ ಕಂಡು ...ರಿಯಾದ ಪರಮಭ್ರಷ್ಟಾಚಾರದಲ್ಲಿ ಮುಳುಗಿ

ತೇಜೋವಧೆಗೂ ಸರ್ಕಾರಗಳು ಪ್ರೋತ್ಸಾಹವಿತ್ತವು. "ಸೆಕ್ಯುಲರಿಸಂ" ಎಂದರೆ "ಹಿಂದೂ ವಿರೋಧಿ" ಎಂಬ ನಿಚ್ಚಳ ಸ್ವರೂಪ ಈಗ ಬಯಲಾಯ್ತು."

ವಾಲ್ಮೀಕಿಯ ಜಾತಿಮೂಲದ ಬಗ್ಗೆ ಈ ಪರಾನ್ನಜೀವಿ ಆಚಾರಿಯ ಪ್ರಲಾಪವನ್ನು ಗಮನಿಸಿ. ವಾಲ್ಮೀಕಿಯು "ಭಾರ್ಗವ ಗೋತ್ರದ ಪ್ರಚೇತಸನೆಂಬ ಮಹರ್ಷಿಯ ಹತ್ತನೇ ಮಗ... ಶಿಶುವಾಗಿದ್ದಾಗ ಎತ್ತಿಕೊಂಡು ಹೋಗಿ ದೂರದ ಚಂಬಲ್ ಕಣಿವೆಯ ಬೇಡರ ಕೇರಿಯಲ್ಲಿ ಹಾಕಿದ್ದು ಒಂದು ಹದ್ದು... ಹಾಗೆ ಮಗುವಿಗೆ ಆಶ್ರಯವಿತ್ತು, ರಕ್ಷಿಸಿ ಪೋಷಿಸಿದವರು ಬೇಡ ಕುಲದವರು. ಅದಕ್ಕೆ ಅವರು ನಮಗೆ ಆದರಣೀಯರು. ಶ್ರೀಕೃಷ್ಣ ಯಾದವ ಕುಲದ ಕ್ಷತ್ರಿಯನಾದರೂ, ಗೊಲ್ಲರ ನಡುವೆ ಮರೆಸಿ ಬೆಳೆಯಲಿಲ್ಲವೆ? ಗೊಲ್ಲರೂ ಆದರಣೀಯರು. ವಾಲ್ಮೀಕಿಗೆ ನಾರದರ (ಸಪ್ತರ್ಷಿಗಳ) ದೆಸೆಯಿಂದ ಮಂತ್ರೋಪದೇಶವಾಗಿ, ವೈರಾಗ್ಯ ತಪಸ್ಸಿದ್ಧಿ ಆಗದಿದ್ದರೆ, ಇಂಥ ವೈದಿಕಾರ್ಥ, ವೈದಿಕ ದರ್ಶನ, ವೈದಿಕ ಪ್ರಕ್ರಿಯೆ, ವೈದಿಕೋಪಮೆಗಳ ಪುಷ್ಟವಾದ, ನಿತ್ಯಸೇವ್ಯವಾದ "ಇತಿಹಾಸ ರತ್ನವನ್ನೂ" ಬರೆಯಲು ಸಾಧ್ಯವಿರಲಿಲ್ಲ." (ಪುಟ 24 ಮತ್ತು 25)

ಬೇಡರ ವಿಷಯಕ್ಕೆ ಮಾತ್ರ ಸೀಮಿತವಾಗದೆ ಗೊಲ್ಲರ ವಿಷಯಕ್ಕೂ ಎಂಟ್ರಿ ಕೊಟ್ಟಿದ್ದಾನೆ. ಈ ಜಗತ್ತಿನಲ್ಲಿ ಉತ್ತಮ, ಶ್ರೇಷ್ಠ ಎನಿಸಿಕೊಂಡಿರುವ ಎಲ್ಲವೂ ಬ್ರಾಹ್ಮಣರ ಸ್ವತ್ತು ಎಂಬುದನ್ನು ಇಷ್ಟು ನೇರವಾಗಿ ಈ ಕಾಲದಲ್ಲೂ ಪ್ರತಿಪಾದಿಸುವ ಭಂಡ ಧೈರ್ಯ ಈತನಿಗೆ ಎಲ್ಲಿಂದ ಬಂತು? ನಾರಾಯಣಾಚಾರಿ ಪಟಾಲಂ ಮತ್ತೆ ವಿಜೃಂಭಿಸುವಂತಾಗಲು ದಲಿತ/ ಪ್ರಗತಿಪರ ಚಳವಳಿಗಳು ವಿಘಟಿತವಾಗಿ ಶಕ್ತಿಗುಂದಿರುವುದು ಒಂದು ಕಾರಣವಿರಬಹುದೆ?

ಬೇಡನೊಬ್ಬ ರಾಮಾಯಣ ಬರೆಯಲಾರ ಎಂದು ಮತ್ತೊಂದು ಕಡೆ ಹೀಗೆ ಹೇಳುತ್ತಾನೆ: "ಪಾಮರನಾದ ಬೇಡನೊಬ್ಬ ದಿಢೀರನೆ ಕಾವ್ಯ ಬರೆದ ರೀತಿ ಇದೆಂದು ಹೇಳುವುದು ಹಾಸ್ಯಾಸ್ಪದವೇ ಆಗುತ್ತದೆ... ಪಾಮರನಿಗೆ ಇದೆಲ್ಲ ಶಕ್ಯವೇ ಎಂಬುದನ್ನು ಎಂಥ ವಾಚಕನೂ ಊಹಿಸಿಕೊಳ್ಳಬಲ್ಲ." (ಪುಟ 40)

ನಿಲ್ಲಬೇಕು. "ವಾಲ್ಮೀಕಿ ಕೋಕಿಲ" ಎಂಬ ಪ್ರಶಸ್ತಿಯ ಕೋಗಿಲೆಯನ್ನು ಕಾಗೆಗಳೊಡನೆ ಸಮೀಕರಿಸುವ ದುಷ್ಟ ಯತ್ನ ನಿಲ್ಲಬೇಕು. ಇದು ಆದಾಗ ರಾಷ್ಟ್ರಾಭ್ಯುದಯ. ನನಗೂ ನಿಮಗೂ ನೆಮ್ಮದಿ ಎಂದು ವಿನಂತಿಸುವೆ."

ಇಲ್ಲಿ ಕೋಗಿಲೆ ಎಂದರೆ ಬ್ರಾಹ್ಮಣ, ಕಾಗೆ ಎಂದರೆ ಬೇಡ/ನಾಯಕ ಜಾತಿ ಎಂಬುದನ್ನು ಮತ್ತೊಮ್ಮೆ ಬಿಡಿಸಿ ಹೇಳುವ ಅಗತ್ಯವಿಲ್ಲ.


ಈ ಸಂದರ್ಭದಲ್ಲಿ ವಾಲ್ಮೀಕಿ ಜನಾಂಗದ 'ಸ್ವಾಭಿಮಾನಿ' ನಾಯಕ ಎಂದು ಸ್ವಯಂಘೋಷಿಸಿಕೊಂಡಿರುವ ಶ್ರೀರಾಮುಲು ಮತ್ತೆ ಬಿಜೆಪಿ ತೆಕ್ಕೆಗೆ ಜಾರಿದ್ದಾನೆ. ಆತನಿಗೆ


ಮೈಸೂರಿನ ವಾಲ್ಮೀಕಿ ನಾಯಕರ ಯುವ ವೇದಿಕೆ ಎಂಬ ಸಂಘಟನೆ ಜಾತಿವಾದಿ ಆಚಾರಿಯ ವಿಕೃತಿಯ ವಿರುದ್ಧ ಪ್ರತಿಭಟನೆ ಮಾಡಿರುವುದು ಸ್ವಾಗತಾರ್ಹ. ಈ ಸಂಘಟನೆಯ ಯುವ ಮುಖಂಡ ಲೋಕೇಶ್ ಎಂಬುವವರು ಇದೇ 25ನೇ ತಾರೀಕು ಮೈಸೂರಿನ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದಾರೆ. ಆದರೂ ಈ ಬಗ್ಗೆ ಪೊಲೀಸರಾಗಲಿ, ಸರ್ಕಾರವಾಗಲಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ವಿಕೃತ ಮನಸ್ಥಿತಿಯ ನಾರಾಯಣಾಚಾರಿ ಮಾತ್ರ ಮೈಸೂರಿನ ತಮ್ಮ ಅಭ್ಯರ್ಥಿ ಪ್ರತಾಪಸಿಂಹನಿಗೆ ಓಟು ಜಮಾ ಮಾಡುವ ಕಾಯಕದಲ್ಲಿ ತೊಡಗಿಸಿಕೊಂಡು ಆರಾಮಾಗಿದ್ದಾನೆ.


ರಾಜ್ಯದ ದಲಿತರು, ಹಿಂದುಳಿದವರು ಸಿಡಿದು ನಿಲ್ಲುವುದು ಯಾವಾಗ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ದಕ್ಷಿಣ ಕನ್ನಡ: ಪೂಜಾರಿ ಪ್ರವಾಹದಲ್ಲಿ ಕಂಗೆಟ್ಟ ಕಲ್ಲಡ್ಕ ಭಟ್ಟ!


ಕಲ್ಲಡ್ಕ


ಕಟೀಲ್


ಪೂಜಾರಿ

ದಕ್ಷಿಣ ಕನ್ನಡ ಲೋಕಸಭಾ ಚುನಾವಣೆ ಹಣಾಹಣಿ ಎಂದರೆ ಅದು ಪಕ್ಕಾ "ಧರ್ಮ" ಯುದ್ಧ! ಕಳೆದೆರಡು ದಶಕದಿಂದ ಈ ಕರಾವಳಿ ಒಣನಾಡುಗಳ ಹದದ ಕ್ಷೇತ್ರದಲ್ಲಿ ನಡೆದ ಪ್ರತಿ ಚುನಾವಣೆಯಲ್ಲೂ ಧರ್ಮಕಾರಣದ ಕರ್ಮದಲ್ಲೇ ನಡೆದಿದೆ. ಕ್ಷೇತ್ರದ, ರಾಜ್ಯದ ಅಥವಾ ದೇಶದ ಯಾವ ಅವಶ್ಯ ಈಶ್ಯೂಗಳ ಮೇಲೂ ಇಲ್ಲಿ ಸೆಣಸಾಣ ನಡೆದಿಲ್ಲ. ಈ ಬಾರಿಯೂ ಅಷ್ಟೇ ಹಿಂದೂತ್ವಕ್ಕೆ ನರಹಂತಕ ಮೋದಿ ಮುಖವಾಡ ತೊಡಿಸಲಾಗಿದೆ. ರಣಕಣದಲ್ಲಿ ಮೋದಿ ಮೇನಿಯಾನೇ ಮುಖ್ಯವಾಗಿದೆ ಬಿಜೆಪಿ-ಕಾಂಗ್ರೆಸ್ ಎರಡೂ ಕಡೆಯವರಿಗೆ. ಅಡಿಕೆ-ಮೀನು ಬೆಳೆಗಾರರ ಸಂಕಟ, ಕೋಮು ಭೂತದ ಹಾವಳಿ, ನದ್ರೋದಿ ಅಣುಸ್ಥಾವರ-ನೇತ್ರಾವತಿ ನದಿ ತಿರುವು ಯೋಜನೆಗಳ ಗುಮ್ಮ, ನೀರು-ರಸ್ತೆ ರೈಲು.... ಹೀಗೆ ಜನಜೀವನಕ್ಕೆ ಅನಿವಾರ್ಯವಾದ ಯಾವ ಬೇಕು-ಬೇಡಗಳೂ ಇಲೆಕ್ಷನ್ ವಿಷಯಗಳಾಗುತ್ತಿಲ್ಲ.

ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಭರ್ಜರಿ ಮುಖಭಂಗ ಅನುಭವಿಸಿದ ಆರೆಸ್ಸೆಸ್ ಡಾನ್ ಕಲ್ಲಡ್ಕ ಭಟ್ಟನಿಗೆ ಈ ಪಾರ್ಲಿಮೆಂಟ್ ಸಮರದಲ್ಲಿ ಗೆಲ್ಲಲೇಬೇಕಾಗಿದೆ. ಇಲ್ಲದಿದ್ದರೆ ಆತನ ಧರ್ಮಾಧಾರಿತ ದಂಧೆಗಳೆಲ್ಲ ಲಾಸ್ ಅನುಭವಿಸುತ್ತವೆ. ಅಲ್ಲಿಗೆ ಆತನೂ ಚಲಾವಣೆ ಕಳೆದುಕೊಂಡು ಕಲ್ಲಡ್ಕ ಪುರೋಹಿತ ಕೈಂಕರ್ಯಕ್ಕೆ ಮೀಸಲಾಗಬೇಕಾಗುತ್ತದೆ. ಹೀಗಾಗಿ ಕಲ್ಲಡ್ಕ ಭಟ್ಟನ ಪಟಾಲಮ್ ದಕ್ಷಿಣ ಕನ್ನಡ ಲೋಕಸಭಾ ಸ್ಥಾನ ಶತಯ-ಗತಾಯ ಉಳಿಸಿಕೊಳ್ಳಲೇಬೇಕೆಂಬ ಜಿದ್ದಿಗೆ ಬಿದ್ದಿದೆ. ಆದರೆ ಎಂಟೂ ಅಸೆಂಬ್ಲಿ ಕ್ಷೇತ್ರದಲ್ಲಿ ಒಣಗಿರುವ ಸಂಘಪರಿವಾರದ ಬೇರಿಗೆ ಜೀವ ತರಲು ಭಟ್ಟನ ಬಳಗಕ್ಕೆ ಸಾಧ್ಯವೇ ಆಗುತ್ತಿಲ್ಲ. ಆರೆಸ್ಸೆಸ್‌ನ ಹಿಂದೂತ್ವದ ಸೂತ್ರ-ಸಿದ್ಧಾಂತ-ರಾದ್ಧಾಂತದಿಂದ ರೋಸಿಹೋಗಿರುವ ಜನರ ಒಲಿಸಿಕೊಳ್ಳಲಾಗುತ್ತಿಲ್ಲ.

ಹಿಂದೂತ್ವದ ಗ್ಯಾಂಗ್ ಸ್ವ-ಲಾಭಕ್ಕಾಗಿ ಅಮಾಯಕರ ಬಲಿಕೊಟ್ಟು ಸೃಷ್ಟಿಸಿಕೊಂಡ ಆತಂಕ-ಅವಾಂತರ-ಅತಿರೇಕದ ಪರಿಸ್ಥಿತಿಯ ಭಯದಿಂದ ದಕ್ಷಿಣ ಕನ್ನಡಿಗರಿನ್ನೂ ಮುಕ್ತರಾಗಿಲ್ಲ. ಚರ್ಚ್ ಮೇಲಿನ ದಾಳಿ, ಪಬ್‌ನಲ್ಲಿ ಪಾಪದ ಹುಡುಗೀರ ಹಿಂಸಿಸಿದ್ದು, ಹೋಮ್ ಸ್ಟೇನಲ್ಲಿ ಹಿಂದೂ ಹುಡುಗಿಯರದೇ ಬಟ್ಟೆ ಬಿಚ್ಚಿಸಿ ವಿಕೃತಾನಂದ ಪಡೆದಿದ್ದು, ಹಿಂದೂ-ಮುಸ್ಲಿಮ್ ಹುಡುಗ-ಹುಡುಗಿಯರು ಮಾತಾಡಲೇಬಾರದೆಂಬ ಫತ್ವಾ ಮುಂತಾದ ಅಮಾನುಷ ಜೀವವಿರೋಧಿ ಕಾರ್ಯಾಚರಣೆಯಿಂದ ಜನಮಾನಸದಲ್ಲಿ ಆರೆಸ್ಸೆಸ್-ಭಜರಂಗದಳ-ಬಿಜೆಪಿ ಬಗ್ಗೆ ಹುಟ್ಟಿಕೊಂಡಿದ್ದ ತಾತ್ಸಾರ-ತಿರಸ್ಕಾರ ಇನ್ನೂ ಹಾಗೇ ಇದೆ. ಚೆಡ್ಡಿ ಪಡೆ ಅದೆಂಥ ಗಿಲೀಟಿನ ಮಾತಾಡಿದರೂ ಮಧ್ಯಮ ವರ್ಗದ ಯುವಕ-ಯುವತಿಯರಿಗೆ, ಸುಶಿಕ್ಷಿತರಿಗೆ, ಪ್ರಜ್ಞಾವಂತರಿಗೆ ಒಲಿಸಲಾಗುತ್ತಿಲ್ಲ.

ಇವತ್ತು ಸಂಘಪರಿವಾರದ ಅಟ್ಟಹಾಸ ಬರೀ ಕ್ರಿಶ್ಚಿಯನ್ ಮತ್ತು ಮುಸ್ಲಿಮ್‌ರನ್ನು ಮಾತ್ರ ಬಿಜೆಪಿ ವಿರುದ್ಧ ತಿರುಗಿಬೀಳುವಂತೆ ಮಾಡಿಲ್ಲ. ಶ್ರೀರಾಮಸೇನೆ, ಭಜರಂಗದಳ, ಆರೆಸ್ಸೆಸ್‌ನ ಮನುವಾದಿಗಳ ಕ್ರೌರ್ಯ-ಅನ್ಯಾಯ-ಅತ್ಯಾಚಾರಗಳನ್ನು ಸಹಿಸಿಕೊಂಡು ಸೈಲೆಂಟಾಗಿ ಬಿಜೆಪಿಯನ್ನು ಬೆಂಬಲಿಸುತ್ತ ಬಂದಿದ್ದ ಮಧ್ಯಮ ವರ್ಗದ ಹಿಂದೂ ಮಂದಿಯಲ್ಲೇ ದೊಡ್ಡ ಬೇಸರ-ಸಿಟ್ಟು ಮೂಡಿಸಿದೆ. ಜೊತೆಗೆ ಕಳೆದೈದು ವರ್ಷದಿಂದ ಕರ್ಮಗೇಡಿಯಾಗಿ ದಿನಗಳೆದ ಸಂಸದ ನಳಿನ್‌ಕುಮಾರ್ ಕಟೀಲ್ ಬಗ್ಗೆಯೂ ತಾತ್ಸಾರ-ತಿರಸ್ಕಾರದ ಭಾವನೆ ಬಂದಿದೆ. ಇವೆಲ್ಲ ಕಲ್ಲಡ್ಕನ ಹಿಂದೂತ್ವದ ಅಡ್ಡ ಆಟಕ್ಕೆ ಬ್ರೇಕ್ ಹಾಕಿ ಹೈರಾಣಾಗಿಸಿ ಬಿಟ್ಟಿದೆ! ಈ ಮೈನಸ್ ಅಂಶಗಳ ನಡುವೆ ಸಂಘಪರಿವಾರದ ಕ್ಯಾಂಡಿಡೇಟ್ ನಳಿನ್ ಇತ್ತ ವೈಯಕ್ತಿಕ ಚಾರಿಷ್ಮಾನೂ ಇಲ್ಲದೆ, ಅತ್ತ ಪಾರ್ಟಿ ಪ್ರಭೆಯೂ ಇಲ್ಲದೆ ಸೊರಗಿದ್ದಾನೆ, ಕಮಲದ ದಳಗಳು ಒಂದೊಂದಾಗಿ ಉದುರುತ್ತಿವೆ.

ಒಂಥರಾ ಹೇತ್ಲಾಂಡಿಯಂಥ ನಳಿನ್‌ಗೆ ಲೋಕಸಭಾ ಸದಸ್ಯನಾಗುವ ಯಾವ ಅರ್ಹತೆಯೂ ಇಲ್ಲ ಎಂಬುದು ಕಳೆದ ಅವಧಿಯಲ್ಲಿ ಆತನೇ ಸ್ವಯಂಸಾಬೀತು ಪಡಿಸಿಕೊಂಡಿದ್ದಾನೆ. ಜಿಲ್ಲೆಯ ಸಮಸ್ಯೆ-ಸುಖ-ಸಂಕಷ್ಟ ಯಾವುದೂ ಆತನ ಖಾಲಿ ಬುರುಡೆಗೆ ಹೊಳೆಯುತ್ತಿಲ್ಲ. ಮತಾಂಧ ದೊಂಬಿ-ಕಲಹ ಪ್ರಚೋದಕ ಮಾತುಗಾರಿಕೆಯ ನಳಿನ್‌ಗೆ ಜನಪರ ಯೋಚನೆಯೇ ಇಲ್ಲ. ಬಿಲ್ಲವರ ನಡುವೆ ತಾನು ಬಿಲ್ಲವ, ಬಂಟರ ಮಧ್ಯದಲ್ಲಿ ಬಂಟ ಎಂದು ಪೋಸು ಕೊಡುವ ನಳಿನ್‌ಗೆ ತನ್ನ ಹೆಸರಲ್ಲಿನ ಕೊನೆಯಲ್ಲಿರುವ "ಕಟೀಲ್" ಎಂಬ ಅಡ್ಡ ಹೆಸರೇ ವರವಾಗಿದೆ. ತಾನು ಬಂಟನೆಂದು ಹೇಳಿಕೊಳ್ಳಲು ಸಂಕೋಚ ಪಡುವ ನಳಿನ್ ಎದುರಾಳಿ ಜನಾರ್ದನ ಪೂಜಾರಿಯ ಸ್ವಜಾತಿ ಬಿಲ್ಲವರ ಯಾಮಾರಿಸುವ ಕುತಂತ್ರ ಮಾಡುತ್ತಿದ್ದಾನೆ. ಕಲ್ಲಡ್ಕನ ಆರೆಸ್ಸೆಸ್ ಗ್ಯಾಂಗ್‌ನ ಈ ಜಾತಿ ಟ್ರಿಕ್ಕುಗಳು ಈ ಬಾರಿ ಬಿಜೆಪಿಗೆ ಮುಳುವಾಗುವ ಲಕ್ಷಣ ಕಾಣಿಸುತ್ತಿದೆ. ಕಾಂಗ್ರೆಸ್ಸಿಗರು ನಳಿನ್‌ಕುಮಾರ್ "ಶೆಟ್ಟಿ" ಎಂದೇ ಪ್ರಚಾರ ಮಾಡುತ್ತ ಬಿಜೆಪಿಗೆ ತಿರುಗುಬಾಣ ಬಿಡುತ್ತಿದ್ದಾರೆ.

ಬಿಜೆಪಿಯ ಡಲ್ಲರ್ ನಳಿನ್‌ಗೆ ತದ್ವಿರುದ್ಧ ವ್ಯಕ್ತಿತ್ವ ಕಾಂಗ್ರೆಸ್‌ನ ಕ್ರಿಯಾಶೀಲ ಜನಾರ್ದನ ಪೂಜಾರಿಯದು. ತುಳುನಾಡಿನ ಮಣ್ಣಿನ- ಮಗನೆಂದೇ ಆತ ಚಿರಪರಿಚಿತ. ನಾಲ್ಕು ಬಾರಿ ಸಂಸದರಾದಾಗ ಅಥವಾ ನಾಲ್ಕು ಬಾರಿ ಸೋತಾಗಲೂ ಆತ ಜನ ಪರವಾಗೇ ಚಿಂತಿಸಿದ್ದಾರೆ. ಆತ ಕ್ಷೇತ್ರ ಒಳಿತಿಗಾಗಿ, ನೊಂದವರ-ಶೋಷಿತರ-ವಿಧವೆಯರ ಹಿತಕ್ಕಾಗಿ ಹಗಲಿರುಳೂ ರಿಸ್ಕ್ ತೆಗೆದುಕೊಳ್ಳುವ ನಿಜ ಜನನಾಯಕ. ಕೊಂಕು-ಕುತಂತ್ರ-ಕಲ್ಮಷ ಆತನಿಗೆ ಗೊತ್ತಿಲ್ಲ. ನೇರಾನೇರ ಆತ ಪುವರ್‌ಮನ್ಸ್ ಪೂಜಾರಿ ಎಂತಲೇ ಜನಜನಿತ. ಎಂತೆಂಥ ಅಧಿಕಾರ-ಸಾರ್ವಜನಿಕ ಕಾರ್ಯ-ಸಮಾರಂಭ-ಉತ್ಸವ ಮಾಡಿದರೂ ಕೈ-ಹೆಸರು ಕೊಳಕು ಮಾಡಿಕೊಂಡವರಲ್ಲ. ಕೋಮು ಕ್ರೌರ್ಯ ಮತಾಂಧ ಅಪನಂಬಿಕೆಯಲ್ಲಿ ಬಸವಳಿದಿರುವ ದಕ್ಷಿಣ ಕನ್ನಡಕ್ಕೆ ನೆಮ್ಮದಿ ತರಲು ಪೂಜಾರಿ ಸದಾ ಸಂಯಮದಲ್ಲಿ ಶ್ರಮಿಸುತ್ತ ಬಂದಿದ್ದಾರೆ.

ಈ ಎಲ್ಲ ಕಾರಣಗಳಿಂದ ದಕ್ಷಿಣ ಕನ್ನಡದಾದ್ಯಂತ ಜಂಟಲ್‌ಮನ್ ಪೂಜಾರಿ ಪರ ಅಂದರೆ, ನಾಲಾಯಕ್ ನಳಿನ್‌ಕುಮಾರ್ ಅಂಡ್ ಕಲ್ಲಡ್ಕ ಗ್ಯಾಂಗ್ ವಿರುದ್ಧ ಅಲೆ ಎದ್ದಿದೆ. ಈ ಅಲೆ ಮೋದಿ ಮೇನಿಯಾಕ್ಕಿಂತಲೂ ಪ್ರಬಲವಾಗಿದೆ. ಕಲ್ಲಡ್ಕ ಭಟ್ಟ ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಮಾಡಿದ ಅಡ್ಡಕಸುಬುಗಳು-ಕೂಡಿಹಾಕಿದ ಕಪ್ಪುಹಣ, ಕೋಮು ಕಿತಾಪತಿ ಮಾಡಿ ಅಮಾಯಕರ ಬಲಿ ಪಡೆದು ಸ್ವಾರ್ಥ ಸಾಧಿಸಿದ್ದೆಲ್ಲ ಈಗ ಬಿಜೆಪಿಗೆ ಮುಳುವಾಗಿ ಪರಿಣಮಿಸಿದೆ. ಬಿಜೆಪಿಯ ಒಳಗೊಳಗೇ ಭಿನ್ನಮತ ಹೊಗೆಯಾಡುತ್ತಿದೆ. ಆದರೆ ಕಾಂಗ್ರೆಸ್‌ನಲ್ಲಿ ಈ ಸಲ ಅಪರೂಪದ ಒಗ್ಗಟ್ಟು ಮೂಡಿದೆ. ಪೂಜಾರಿ ಪೂರ್ವಾಗ್ರಹಗಳಿಲ್ಲದೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತಿರುವುದು ಆತನ ಗೆಲುವಿನ ದಾರಿ ಸುಗಮಗೊಳಿಸಿದೆ. ಈ ಬಾರಿ ಧರ್ಮಸ್ಥಳ ದೇವದೂತರ "ಮ್ಯಾಜಿಕ್" ನಡೆಯುತ್ತಿಲ್ಲ. ಸೌಜನ್ಯ ಕೇಸಲ್ಲಿ ದೇವಧೂತರು ಹೆಸರು ಕೆಡಿಸಿಕೊಂಡಿರುವುದರಿಂದ ಜನರ ಆಕ್ರೋಶಕ್ಕೆ ತುತ್ತಾಗುವ ಭೀತಿಯಲ್ಲಿ ಬಿಜೆಪಿಗರು ಮಂಜುನಾಥನ ಒಡೆಯರನ್ನು ಹತ್ತಿರ ಸೇರಿಸದಂತಾಗಿದೆ.

ಸುಳ್ಯದಲ್ಲಿ ಒಂಚೂರು ಮುಂದಿರುವ ಬಿಜೆಪಿ ಕ್ಷೇತ್ರದ ಉಳಿದ ಏಳು ಅಸೆಂಬ್ಲಿ ವಿಭಾಗಗಳಲ್ಲಿ ಹಿಂದೆಬಿದ್ದಿದೆ. ಮೊಯ್ಲಿ ಕೈವಾಡದಿಂದ ಆತನ ಶಿಷ್ಯೋತ್ತಮ-ಮಂತ್ರಿ ಅಭಯಚಂದ್ರ ಜೈನ್‌ನ ಮುಲ್ಕಿ-ಮೂಡಬಿದಿರೆ ಒಂದರಲ್ಲಿ ಒಂಚೂರು ಹಿನ್ನಡೆ ಪೂಜಾರಿಗೆ ಆಗುವ ಅಪಾಯವಿದೆ. ಉಳಿದ ಆರು ಕಡೆಯಲ್ಲಿ ಕಾಂಗ್ರೆಸ್‌ಗೆ ಲೀಡ್ ಸಿಗಲಿದೆ. ದಕ್ಷಿಣ ಕನ್ನಡ ಎಂಟು ಎಮ್ಮೆಲ್ಲೆಗಳಲ್ಲಿ ಏಳು ಜನ ಕಾಂಗ್ರೆಸ್ಸಿಗರು. **2009** ಲೋಕಸಭಾ ಚುನಾವಣೆಯಲ್ಲಿ ಗೆದ್ದ ಬಿಜೆಪಿ **40,420** ಹೆಚ್ಚು ಮತ ಪಡೆದಿತ್ತು. ಆದರೆ **2013** ರ ಅಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಬಿಜೆಪಿಗಿಂತ **87,816** ಮತದ ಲೀಡ್ ಪಡೆದಿದೆ. ಇಡೀ ಕ್ಷೇತ್ರದಲ್ಲಿ ಪೂಜಾರಿ ಪರ ಅನುಕಂಪ ಅಂತರ್ಗಾಮಿಯಾಗಿ ಹಾರಿದಾಡುತ್ತಿದೆ. ಪುತ್ತೂರು-ಸುಳ್ಯದಲ್ಲಿ ಈ ಬಾರಿ ಪೂಜಾರಿ ದೊಡ್ಡ ಲೀಡ್ ಮಾಡಲಿದ್ದಾರೆ.

ನಿರ್ಣಾಯಕ ಸಂಖ್ಯೆಯಲ್ಲಿ ಮೂರು ಲಕ್ಷ ಮುಸ್ಲಿಮರು ಮತ್ತು **1.75** ಲಕ್ಷದಷ್ಟಿರುವ ಕ್ರೈಸ್ತರು ಸರಿಯಾಗಿ ಪೂಜಾರಿ "ಕೈ" ಹಿಡಿದರೆ ಆತನ ಗೆಲುವಿಗೆ ತೊಂದರೆಯಿಲ್ಲ. ಹಾಗೆಯೇ ಮೂರೂವರೆ ಲಕ್ಷದಷ್ಟಿರುವ ಬಿಲ್ಲವರು ಈ ಬಾರಿ ಸ್ವಜಾತಿ ಮೋಹದಿಂದ ಪೂಜಾರಿಯನ್ನು ನೋಡುತ್ತಿದ್ದಾರೆ. ಸತತ ನಾಲ್ಕು ಬಾರಿ ಪೂಜಾರಿ ಸೋಲಿಸಿದ ಪಶ್ಚಾತ್ತಾಪದಲ್ಲಿರುವ ಬಿಲ್ಲವರು ಇದಾತನ ಕೊನೆ ಹೋರಾಟವೆಂಬುದು ಅರ್ಥ ಮಾಡಿಕೊಂಡಿದ್ದಾರೆ. ಸಾಂಪ್ರದಾಯಿಕ ಹಿಂದೂ ಓಟ್‌ಬ್ಯಾಂಕ್‌ನಲ್ಲಿ ಖೋತಾ ಅನುಭವಿಸುತ್ತಿರುವ ಬಿಜೆಪಿ ಭಯದಿಂದ ಕಂಪಿಸುತ್ತಿದೆ. ಎಸ್‌ಡಿಪಿಐಗೆ ಜೆಡಿಎಸ್ ಬೆಂಬಲಿಸಿದರೂ ಪರಿಣಾಮ ಏನೂ ಆಗದು. ಬರೋಬ್ಬರಿ **23** ವರ್ಷಗಳ ಮತಾಂಧ ಗ್ರಹಣದಿಂದ ದಕ್ಷಿಣ ಕನ್ನಡ ಬಿಡುಗಡೆಯಾಗುವ ಸಂಕೇತಗಳು ಕಾಣಿಸುತ್ತಿವೆ.

● ನಹುಷ


ಬಂಗಾರಪ್ಪನ ಮಗಳಿಗಾಗಿ ಬೀದಿಲಿ ಕುಣಿಯೋದು ತಪ್ಪು ಸಾರ್

ಇದ್ದಕ್ಕಿದ್ದಂತೆ ಪರಮೇಶ್ವರ್ ದೇವೇಗೌಡರ ಮೇಲೆ ಮುರಿದುಕೊಂಡು ಬಿದ್ದರಲ್ಲಾ, ಇದರ ಮರ್ಮವೇನು ಎಂದು ಚಿಂತಿಸಿದವರಿಗೆಲ್ಲಾ ಸಿಕ್ಕುವ ಉತ್ತರಗಳು ಸ್ಪಷ್ಟವಾಗಿವೆಯಂತಲ್ಲಾ. ಪರಮೇಶ್ವರ್ ಗೆದ್ದಿದ್ದರೆ ಮುಖ್ಯಮಂತ್ರಿಗಿರಿಗೆ ಸೆಡ್ಡು ಹೊಡೆದು ಕೂರುತ್ತಿದ್ದರು. ಕನಿಷ್ಠ ಉಪಮುಖ್ಯಮಂತ್ರಿ ಸ್ಥಾನ ಮತ್ತು ಫಲವತ್ತಾದ ಖಾತೆಗಳೂ ಗ್ಯಾರಂಟಿಯಾಗಿ ಅವರ ಕೈಗೆ ಸಿಗುತ್ತಿದ್ದವು. ಆದರೆ ದೇವೇಗೌಡರ ಒಳ ಏಟು ಪರಮೇಶ್ವರನ ಮರ್ಮಸ್ಥಾನಕ್ಕೆ ಬಿದ್ದು ಈಗ ಏನೂ ಅಲ್ಲದ ಸ್ಥಿತಿಗೆ ಬಂದು ನಿಂತಿದ್ದಾರಂತಲ್ಲಾ. ಇದನ್ನ ನೆನೆಸಿಕೊಂಡಾಗಲೆಲ್ಲಾ ಕೆರಳುವ ಪರಮೇಶ್ವರ್ "ಯಾಕೆ ದೇವೇಗೌಡರಿನ್ನೂ ವಿಷ ಕುಡಿದಿಲ್ಲಾ? ಯಾಕೆ ಇನ್ನೂ ಕೂಡ ಮುಸ್ಲಿಮನಾಗಿ ಮತಾಂತರಗೊಂಡಿಲ್ಲ?" ಎಂಬಿತ್ಯಾದಿ ಮೂದಲಿಕೆ ಮಾತುಗಳನ್ನ ಆಡಿದಂತರಲ್ಲಾ. ಇದನ್ನು ಕೇಳಿಸಿಕೊಂಡ ಗೌಡರು ಕುಟಿಯಂಚಿನಲ್ಲಿ ನಕ್ಕು "ನಮ್ಮ ರಾಜಕಾರಣದ ಏಕೈಕ ಗುರಿಯೇನಿದ್ದರೂ ಕಾಂಗ್ರೆಸ್ಸನ್ನ ನಿರ್ನಾಮ ಮಾಡುವಂತಹ ಕಾರ್ಯಕ್ರಮವೇ ಹೊರತು, ಆ ಪರಮೇಶ್ವರನಂತಹ ಅಪ್ರಬುದ್ಧನಿಗೆ ಉತ್ತರ ಕೊಡುವುದಲ್ಲ!" ಎಂದರಂತಲ್ಲಾ.

ಆದರೂ ಸುಮ್ಮನಿರಬಾರದೆಂದು ದತ್ತನಿಗೆ ಫೋನ್ ಮಾಡಿ ಪರಮೇಶ್ವರ್‌ಗೆ ತಕ್ಕ ಉತ್ತರ ಕೊಡಲು ತಾಕೀತು ಮಾಡಿದರಂತಲ್ಲಾ, ಥೂತ್ತೇರಿ!!

* * *

ಸರಕಾರದ ಆಯಕಟ್ಟಿನ ಜಾಗದಲ್ಲಿದ್ದುಕೊಂಡು ಹೊಡೆದ ದುಡ್ಡನ್ನೆಲ್ಲಾ ತೆಗೆದುಕೊಂಡು ಹೋಗಿ 'ಮಧು ಚಂದ್ರ' ಸಿನಿಮಾಕ್ಕೆ ಸುರಿದು ಮಂಗನಂತಾಗಿದ್ದ ಶಿವರಾಮ ತನ್ನ ಹೆಸರಿನಲ್ಲಿ ಸೀಸೆ ಕಟ್ಟಿ ಶ್ಯಾನೆ ಹೆಸರು ಮಾಡಿದ ನಂತರ ರಾಜಕಾರಣಕ್ಕೂ ನುಗ್ಗಿದನಂತಲ್ಲಾ. ಇದರ ಪ್ರಯೋಗಾರ್ಥ ಛಲವಾದಿ ಸಮಾವೇಶ ಮಾಡಿ, ಪರಮೇಶ್ವರನನ್ನು ಕೆರಳಿಸಿದ್ದೂ ಅಲ್ಲದೆ, ಟಿಕೆಟ್ ಗಿಟ್ಟಿಸಿಕೊಂಡು ಎಂ.ಪಿ.ಯಾಗುವ ಕನಸು ಕಾಣುತ್ತಿದ್ದರಂತಲ್ಲಾ. ಆದರೆ ಕಾಂಗ್ರೆಸ್ಸಿನವರು ಕೆ. ಶಿವರಾಮನನ್ನು ಕ್ಯಾರೆ ಎನ್ನಲಿಲ್ಲವಂತಲ್ಲಾ. ಹತಾಶರಾಗಿ ಕಾಂಗ್ರೆಸ್ ಬಾಗಿಲ ಬಳಿ ನಿಂತವರಿಗೆಲ್ಲಾ "ಇಲ್ಲಿ ಬನ್ನಿ ಸಾರ್ ಬಿ.ಫಾರಂ ಕೊಡ್ತೀವಿ. ಬನ್ನಿ, ಅಲ್ಯಾಕೆ ನಿಂತಿದ್ದೀರಿ, ಬನ್ನಿ ಬ್ರದರ್" ಎಂದು ಕೂಗಿ ಕರೆವ ಜೆಡಿಎಸ್‌ನ ಕುಮಾರಣ್ಣಾ ಕಡೆಗೂ ಶಿವರಾಮನನ್ನ ಬಾಚಿ ತಬ್ಬಿಕೊಂಡು ಬಿಜಾಪುರಕ್ಕೆ ಅಟ್ಟಿದರಂತಲ್ಲಾ. ಹೀಗೆ ಸಿಕ್ಕಸಿಕ್ಕ 'ಅತೃಪ್ತರನ್ನೆಲ್ಲಾ ಹಿಡಿದು ನಾಡಿನ ಮೂಲೆಮೂಲೆಗೆ ಕಳುಹಿಸುತ್ತಿರುವ ಜೆಡಿಎಸ್ ನಾಯಕರ ರಾಜಕಾರಣದಲ್ಲಿ ತಮ್ಮ ಕ್ಯಾಂಡಿಡೇಟುಗಳು ಗೆದ್ದರೆಷ್ಟು, ಸೋತರೆಷ್ಟು, ಒಟ್ಟು ಕಾಂಗ್ರೆಸ್‌ಗಳು ಮಣ್ಣು ಮುಕ್ಕಿ ಆ ಸಿದ್ದರಾಮಯ್ಯ ಮನೆಗೆ ಹೋಗಬೇಕು. ಆ ನಂತರವೇನಿದ್ದರೂ ನಮ್ಮ ಆಟ ಶುರು ಎಂದು ಕೇಕೆ ಹಾಕಿದರಂತಲ್ಲಾ, ಥೂತ್ತೇರಿ!!



* * *

ಸದ್ಯಕ್ಕೆ ಯಾವ ಸಿನಿಮಾದಲ್ಲೂ ಕೆಲಸ ಮಾಡದೆ ಖಾಲಿ ಕುಳಿತಿದ್ದ ಶಿವರಾಜ್‌ಕುಮಾರ್ ತಮ್ಮ ಹೆಂಡತಿ ದೆಸೆಯಿಂದ ಸೊರಬ ಸಾಗರದ ಕಡೆ ತಿರುಗುತ್ತಾ ಹಾಡೇಳಿಕೊಂಡು ಡ್ಯಾನ್ಸ್ ಮಾಡುತ್ತಿದ್ದಾರೆಂಬ ಆಘಾತಕಾರಿ ಸುದ್ದಿ ಬಂದಿದೆಯಲ್ಲಾ, ಈ ಸಂಬಂಧವಾಗಿ ಸತ್ಯಾಸತ್ಯತೆಯನ್ನು ಅವರಿಂದಲೇ ಕೇಳಿ ತಿಳಿದುಕೊಂಡರೆ ಹೇಗೆಂದು ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಶಿವಪ್ಪಾ ಕಾಯೋ ತಂದೆ ಮೂರು ಲೋಕ ಸ್ವಾಮಿ ದೇವಾ..."

"ಹಲೋ ಯಾರು?"

"ನಾನು ಸಾರ್, ಯಾಹೂ ಅಂತ, ನಿಮ್ಮ ಅಭಿಮಾನಿ."

"ಅಭಿಮಾನಿಗಳು ಅಂದ್ರೆ ನನಗೆ ಪ್ರಾಣ."

"ನನಗೂ ಅಷ್ಟೆ ಸಾರ್. ನೀವು ಅದಕ್ಕಿಂತ್ಲೂ ನಿಮ್ಮ ಅಪ್ಪಾಜಿ ಅಂದ್ರೆ ಪ್ರಾಣ. ಅವರ ಮಗ ಅನ್ನೋ ಕಾರಣಕ್ಕೆ ನಿಮ್ಮ ಅಭಿಮಾನಿಯಾಗಿದ್ದೆ."

"ಆಗಿದ್ದೆ ಅಂದ್ರೆ ಈಗಿಲ್ವ?"

"ಇಲ್ಲ ಸಾರ್. ನೀವು ಜೆಡಿಎಸ್‌ನ ನಿಷ್ಠಾವಂತ ಕಾರ್ಯಕರ್ತ ಆದ ಕ್ಷಣದಿಂದ ನಿಮ್ಮ ಮೇಲಿದ್ದ ಅಭಿಮಾನ ಕಳಕೊಂಡೆ."

"ಛೆ, ಛೆ, ನಾನು ಜೆಡಿಎಸ್ ಕಾರ್ಯಕರ್ತ ಅಲ್ಲ, ಗೀತನಿಗೋಸ್ಕರ ಪ್ರಚಾರಕ್ಕೆ ಬಂದಿದ್ದಿನಿ."

"ಸರಿ ಸಾರ್, ಗೀತ ತನೆ ಹೊತ್ತ ಮಹಿಳೆ ಚೆನ್ನೆಯಡಿ ಚುನಾವಣೆಗೆ ನಿಂತಿದ್ದಾರೆ. ಅವರನ್ನ ಗೆಲ್ಲಿಸೋದಕ್ಕೆ ತಾವು ಹಾಡೇಳಿಕೊಂಡು ಗೋಡೆ ಮೇಲೆಲ್ಲಾ ಹತ್ತಿ ಕುಣಿತೀರಂತೆ. ಇದು ನಿಜಕ್ಕೂ ನಿಷ್ಠಾವಂತ ಕಾರ್ಯಕರ್ತನ ಕೆಲಸ ಅಲ್ವ?"

"ಅಲ್ಲ, ನನ್ನ ಹೆಂಡತಿ ಗೆಲ್ಲಿಸೋದು ನನ್ನ ಕರ್ತವ್ಯ, ಅಭಿಮಾನಿಗಳ ಒತ್ತಾಯಕ್ಕೆ ಹಾಡೇಳಿದ್ರೆ ತಪ್ಪಾ? ಡ್ಯಾನ್ಸ್ ಮಾಡಿದ್ರೆ ತಪ್ಪಾ?"

"ನೀವೊಬ್ಬ ಕಲಾವಿದರಾಗಿ ಪದ ಹೇಳಿಕೊಂಡು ಕುಣಿದ್ರೆ ತಪ್ಪಲ್ಲ. ಆದ್ರೆ ಜೆಡಿಎಸ್ ಪಾರ್ಟಿಲಿ ಹೆಂಡತಿಗೆ ಓಟು ಕೇಳಿಕೊಂಡು ಅಂಗೆ ಮಾಡಿದ್ರೆ ತಪ್ಪಲ್ಲವೆ?"

"ನನಗೇನೂ ಹಾಗನ್ನಿಸಿಲ್ಲ."

"ಎಲ್ಲಾ ಪಾರ್ಟಿಲೂ ಅಲ್ದೆ ಪಾರ್ಟಿಲಿ ಇಲ್ದೆಯಿರೋರೆಲ್ಲಾ ನಿಮ್ಮ ಅಭಿಮಾನಿಗಳಾಗಿದ್ದಾರೆ. ಡಾ. ರಾಜ್‌ಕುಮಾರ್ ಈ ನಾಡಿನ ಸೊತ್ತಾಗಿದ್ರು. ಅಂತವರ ಮಗ ಬಂಗಾರಪ್ಪನ ಮಗಳಿಗಾಗಿ ಬೀದಿಲಿ ಕುಣಿಯೋದು ತುಂಬ ಕನಿಕರಕ್ಕೆ ಯೋಗ್ಯವಾದ ಸಂಗತಿ ಸಾರ್."

"ಅದೇನೊ ನನಗೆ ಗೊತ್ತಿಲ್ಲ. ಎಲ್ಲಾ ಪಾರ್ಟಿಯಲ್ಲೂ ಕಲಾವಿದರಿದ್ದಾರೆ. ಅವರೆಲ್ಲಾ ತಮ್ಮ ಕಲೆ ಪ್ರದರ್ಶನ ಮಾಡಲ್ವ?"

"ಅಲ್ಲಿಗೆ ನೀವು ಜೆಡಿಎಸ್ ಅಂತ ಒಪ್ಪಿಕೊಂಡ್ರಿ."

"ಪುನಃ ಅದ್ನೆ ಹೇಳ್ತಿರಲ್ಲಾ, ನನ್ನ ಹೆಂಡತಿ ಜೆಡಿಎಸ್‌ನಿಂದ ನಿಂತಿದಾಳೆ. ಅವಳಿಗೋಸ್ಕರ ನಾನು ಅಭಿಮಾನಿಗಳು ಒತ್ತಾಯ ಮಾಡಿದ್ರಿಂದ ಹಾಗೆ ಮಾಡಿದೆ ಅಷ್ಟೆ."

"ನೀವೊಬ್ಬ ಮುಗ್ಧ ನಟನಾದ್ರಿಂದ ಯಾರದೊ ರಾಜಕಾರಣದ ಪಿತೂರಿಗೆ ಒಳಗಾಗಿದ್ದಿರಿ ಸಾರ್."

"ಇಲ್ಲ, ಹಾಗೇನೂ ಇಲ್ಲ. ಗೀತಾ ರಾಜಕಾರಣಕ್ಕೆ ಬರ್ತಿನಿ ಅಂದ್ಲು, ಸೊ, ಓ.ಕೆ. ಅಂದೆ. ಇಲ್ಲಿ ಬಂದು ನೋಡಿದ್ರೆ ಜನ ತುಂಬ ಬೆಂಬಲ ಕೊಡ್ತಾಯಿದಾರೆ."


"ಚುನಾವಣೆ ಖರ್ಚುವೆಚ್ಚ ಹೇಗೆ ಸಾರ್?"

"ಎಲ್ಲಾನೂ ನಾವೇ ನೋಡಿಕೊಳ್ತಾಯಿದ್ದೀವಿ."

"ಈಡಿಗ ಸಮಾಜದ ಟ್ರಸ್ಟ್‌ನಲ್ಲಿದ್ದ ಭೂಮಿ ಮಾರಿ

ಥೂತ್ತೇರಿ ▸ ಯಾಹೂ

ಧಾರವಾಡ: ಜೋಷಿ ಸೋಲಿಗೆ ಮುತಾಲಿಕನೇ ಮುಹೂರ್ತ




ಪ್ರಹ್ಲಾದ್ ಜೋಷಿ

ಕಳೆದ 23 ವರ್ಷಗಳಿಂದ ಸತತ ಐದು ಚುನಾವಣೆಗಳಲ್ಲಿ ಧಾರವಾಡ ಲೋಕಸಭಾ ಕ್ಷೇತ್ರವನ್ನು ...ಚಿದುಕೊಳ್ಳುತ್ತಲೇ ಬಂದಿದ್ದ ಕಾಂಗ್ರೆಸ್‌ಗೆ ಈ ಬಾರಿ ...ಲುವಿನ ರುಚಿ ದೊರಕುವ ಎಲ್ಲಾ ಸಾಧ್ಯತೆಗಳೂ ಇವೆ. ...991ರಲ್ಲಿ ದಿವಂಗತ ಡಿ.ಕೆ. ನಾಯ್ಕರ್ ಕಾಂಗ್ರೆ... ...ಭ್ಯರ್ಥಿಯಾಗಿ ಗೆದ್ದ ನಂತರದ ಎಲ್ಲಾ ಚುನಾವಣೆಗಳಲ್ಲೂ ...ಜೆಪಿಯೇ ಇಲ್ಲಿ ಜಯಭೇರಿ ಬಾರಿಸುತ್ತಾ ಬಂದಿದೆ. ...004 ಹಾಗೂ 2008 ರ ಚುನಾವಣೆಗಳಲ್ಲಿ ಪ್ರಹ್ಲಾದ್ ...ೋಷಿ ಗೆಲುವು ಸಾಧಿಸಿದ್ದರು. ಅದಕ್ಕೂ ಮುಂಚೆ ...ರವಾಡ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆಯಂತಿತ್ತು, 1951, ...957 ರಲ್ಲಿ ಡಿ.ಪಿ. ಕಲ್ಮಾಕರ್ ಕಾಂಗ್ರೆಸ್ ಅಭ್ಯರ್ಥಿಯಾಗಿ ...ಲುವು ದಾಖಲಿಸಿದ್ದಾರೆ. 1962 ರ ಚುನಾವಣೆಯಲ್ಲಿ ...ಂಗ್ರೆಸ್‌ನ ಸರೋಜಿನಿ ಮಹಿಷಿ ಗೆಲ್ಲುವ ಮೂಲಕ ...ರ್ನಾಟಕದ ಪ್ರಥಮ ಮಹಿಳಾ ಸಂಸದೆ ಎನಿಸಿದ್ದರು. ...ಂತರ ಮತ್ತೊಮ್ಮೆ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು ...ರೋಜಿನಿ ಮಹರ್ಷಿ 1971 ರಲ್ಲೂ ಎರಡನೇ ಬಾರಿ ...ದ್ದಿದ್ದರು. ಆನಂತರ 1982 ಮತ್ತು 1991 ರ ...ಚುನಾವಣೆಗಳಲ್ಲಿ ಜಯಭೇರಿ ಬಾರಿಸಿದ್ದು ಕಾಂಗ್ರೆಸ್‌ನ ...ಕೆ. ನಾಯ್ಕರ್ ಆನಂತರವಷ್ಟೇ 1996 ರ ಚುನಾವಣೆಯಲ್ಲಿ ...ಜೆಪಿಯ ವಿಜಯ್ ಸಂಕೇಶ್ವರ್‌ಗೆ ಕ್ಷೇತ್ರವನ್ನು 'ಕೈ' ಚೆಲ್ಲಿದ್ದು.

ತದನಂತರ ಬಿಜೆಪಿಯಲ್ಲಿ ಭುಗಿಲೆದ್ದ ಭಿನ್ನಮತದಿಂದಾಗಿ ...ನಂತ್ ಕುಮಾರ್ ಜೊತೆ ಮುನಿಸಿಕೊಂಡ ಸಂಕೇಶ್ವರ 2004ರ ಲೋಕಸಭಾ ಚುನಾವಣೆಯಲ್ಲಿ ತನ್ನದೇ 'ಕನ್ನಡ ನಾಡು' ಎನ್ನುವ ಪಾರ್ಟಿ ಕಟ್ಟಿಕೊಂಡು ಚುನಾವಣೆಗೆ ಇಳಿದರಾದರೂ ಮತದಾರ ಮತ್ತೊಮ್ಮೆ ಗೆಲ್ಲಿಸಿದ್ದು ಬಿಜೆಪಿ ಅಭ್ಯರ್ಥಿಯನ್ನೆ. ಆ ಬಾರಿ ಸಂಕೇಶ್ವರ್‌ಗೆ ಟಾಂಗ್ ನೀಡಲೆಂದೇ ಅನಂತ್ ಕುಮಾರ್ ತನ್ನ ಚೆಡ್ಡಿ ಶಿಷ್ಯ ಫಿನಾಯಿಲ್, ಕಸಬರಿಕೆ ಗಿರಾಕಿ ಪ್ರಹ್ಲಾದ್ ಜೋಶಿಯನ್ನು ಕಮಲದ ಅಭ್ಯರ್ಥಿಯನ್ನಾಗಿಸಿದ್ದರು. 2009ರ ಚುನಾವಣೆಯಲ್ಲೂ ಮರು ಆಯ್ಕೆ ಆಗುವ ಮೂಲಕ ಜೋಷಿ ಧಾರವಾಡ ಕ್ಷೇತ್ರವನ್ನು ಬಿಜೆಪಿ ತೆಕ್ಕೆಯಲ್ಲಿ ಉಳಿಸಿಕೊಂಡಿದ್ದ. ಆದರೆ ಈ ಸಲ ಜೋಷಿಯ ಗೆಲುವಿಗೆ ಅಡ್ಡಗಾಲು ಹಾಕಲು ಕಾಂಗ್ರೆಸ್ ತಯಾರಾಗಿ ಕೂತಿದೆ.

2014ರ ಕದನದಲ್ಲಿ ಒಟ್ಟು 17 ಜನ ಸ್ಪರ್ಧಿಗಳು ಕಣದಲ್ಲಿದ್ದಾರೆ. ಕಾಂಗ್ರೆಸ್‌ನಿಂದ ಹಾಲಿ ಧಾರವಾಡ ಗ್ರಾಮೀಣ ಶಾಸಕ ವಿನಯ್ ಕುಲಕರ್ಣಿ, ಬಿಜೆಪಿಯ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಷಿ, ಜೆಡಿಎಸ್‌ನಿಂದ ಹನುಮಂತಪ್ಪ ಬಂಕಾಪುರ ಇದ್ದಾರೆ. ಜೊತೆಗೆ 1996ರ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಹೇಮಂತಕುಮಾರ್ ಪಾಂಚಾಳ ಆಮ್‌ಆದ್ಮಿ ಪಕ್ಷದಿಂದ ಹಾಗೂ ಕಳಸಾ-ಬಂಡೂರಿ ನಾಲಾ ಹೋರಾಟ ಸಮಿತಿಯ ವಿಕಾಸ ಸೊಪ್ಪಿನ ಪ್ರಜಾರಂಗ ವೇದಿಕೆಯಿಂದ ಅಖಾಡದಲ್ಲಿದ್ದಾರೆ. ಇವರೆಲ್ಲರಲ್ಲದೆ ಶ್ರೀರಾಮಸೇನೆ ಎಂಬ ಮಂಗಗಳ ಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಸ್ಪರ್ಧೆಯಲ್ಲಿರೋದೆ ಜೋಷಿಯ ಸೋಲಿಗೆ ಮುಹೂರ್ತ ಇಟ್ಟಿದೆ.


ಜೋಷಿ ಹಾಗೂ ಮಾಜಿ ಮುಖ್ಯಮಂತ್ರಿ ಜಗದೀಶ್




ವಿನಯ್‌ಕುಲಕರ್ಣಿ




ತಮಟಗಾರ್



ಹೊರಟ್ಟಿ



ಜಬ್ಬಾರ್‌ಖಾನ್ ಹೊನ್ನಾಳಿ



ವಿಕಾಸ್ ಸೊಪ್ಪಿನ

ಶೆಟ್ಟರರ ಭೂ ಮಾರಾಟ, ಜಮಾಖಾನ ಮೈದಾನ ವಿವಾದ, ಒಂದೇ ಒಂದು ಆಶ್ರಯ ಮನೆ ನಿರ್ಮಿಸದ ಹೊಣೆಗೇಡಿತನ, ವಿಮಾನ ನಿಲ್ದಾಣ ಜಮೀನನ್ನು ತಮ್ಮ ಸಮೀಪದವರಿಗೆ ಮಾರಾಟ ಮಾಡಿದ್ದು, ರೈತರಿಗೆ ಪರಿಹಾರ ನೀಡದೆ ಹೋದದ್ದು, ಗುರು ಸಿದ್ದೇಶ್ವರ ಬ್ಯಾಂಕ್ ಹಗರಣಗಳು . . . ಇವೆಲ್ಲ ಈ ಬಾರಿ ಜೋಷಿಯ ಬುಡಕ್ಕೆ ಬಿಸಿನೀರು ಬಿಡಲಿವೆ.

ಜೋಷಿ ಸೋಲಿಗೆ ಮುತಾಲಿಕನೇ ಮುಹೂರ್ತ

ಬಿಜೆಪಿಗರ ಹೊಣೆಗೇಡಿತನ, ಭೂಕಬಳಿಕೆಯನ್ನು ಕಣ್ಣಾರೆ ಕಂಡ ಧಾರವಾಡದ ಜನ ಪ್ರಹ್ಲಾದ್ ಜೋಷಿಯನ್ನು ಮನೆಗೆ ಕಳಿಸಲು ಸಜ್ಜಾಗಿದ್ದರು. ಅದನ್ನು ಅರಿತ ಚೆಡ್ಡಿಗಳು ಗುಂಪು ಜೆಡಿಎಸ್‌ನ ಬಸವರಾಜ್ ಹೊರಟ್ಟಿಯೊಂದಿಗೆ ಒಳಒಪ್ಪಂದ ಮಾಡಿಕೊಂಡು ಜೋಷಿಯ ಸೋಲನ್ನು ತಪ್ಪಿಸಲು ತಂತ್ರ ರೂಪಿಸಿದ್ದರು. ಜೊತೆಗೆ ಅಲ್ಪಸಂಖ್ಯಾತರ ವಿರುದ್ಧ ಬೆಂಕಿ ಕಾರುವ ಕೋಮು ಕಿರಾತಕ ಪ್ರಮೋದ್ ಮುತಾಲಿಕನನ್ನೂ ಬುಟ್ಟಿಗೆ ಹಾಕಿಕೊಂಡರೆ ಗೆಲುವು ಸುಲಭ ಎಂಬ ಲೆಕ್ಕಾಚಾರವನ್ನೂ ಚೆಡ್ಡಿ ನಾಯಕರು ಹಾಕಿಕೊಂಡಿದ್ದರು.

ಅಸಲಿಗೆ ಈ ಮುತಾಲಿಕ್ ಕಟ್ಟಾ ಆರೆಸ್ಸೆಸ್ ಪ್ರೊಡಕ್ಟು. ಈ ಹಿಂದೆ ಇದೇ ಆರೆಸ್ಸೆಸ್ ನಾಯಕರು ಹುಂಬ ಪ್ರಮೋದ ಮುತಾಲಿಕ್‌ನನ್ನು ಕರ್ನಾಟಕದ ತುಂಬಾ ತಿರುಗಾಡಿಸಿ ಕಂಡಕಂಡಲ್ಲೆಲ್ಲಾ ಬೆಂಕಿ ಹಚ್ಚಿಸಿದ್ದರು. ಆತನಿಂದ ಎಲ್ಲಾ ರೀತಿಯಲ್ಲಿ ಉಪಯೋಗಿಸಿಕೊಂಡ ನಂತರ ಆರೆಸ್ಸೆಸ್ ನಾಯಕರು ಹಿಂದೂಭವನ ನಿರ್ಮಾಣದ ಹೆಸರಲ್ಲಿ ಮುತಾಲಿಕ್ ಚಂದಾ ಎತ್ತಿ ಸಂಘಟನೆಗೆ ಮೋಸ ಮಾಡಿದ್ದಾನೆ ಎಂದು ಆತನನ್ನು ಹೊರದಬ್ಬಿದ್ದರು. ಆಗ ಆರೆಸ್ಸೆಸ್ ಪಾಳಯದಿಂದ ಹೊರಬಂದ ಮುತಾಲಿಕ್ ಶ್ರೀರಾಮಸೇನೆ ಎಂಬ ತನ್ನದೇ ಕಪಿಸೈನ್ಯ ಕಟ್ಟಿಕೊಂಡು ಸಮಾಜದ ಶಾಂತಿ ಕದಡುತ್ತಲೇ ಮುಂದುವರಿದ. ಆತನ ಹಿಂಬಾಲಕ ಪುಂಡರು ಮಾಡಿದ ದೊಡ್ಡ ದಾಳಿಗಳಲ್ಲಿ ಮಂಗಳೂರಿನ ಪಬ್ ದಾಳಿಯೂ ಒಂದಾಗಿತ್ತು, ಆ ದಾಳಿ ದೇಶದಾದ್ಯಂತ ಪ್ರಚಾರ ಪಡೆದು ಮುತಾಲಿಕ್, ಆತನ ಶ್ರೀರಾಮ ಸೇನೆ ಮತ್ತು ಆತನನ್ನು ಪೋಷಿಸಿ ಬೆಳೆಸಿದ್ದ ಸಂಘ ಪರಿವಾರಕ್ಕೆ ತೀವ್ರ ಮುಖಭಂಗವಾಗಿತ್ತು.

ಅದೇನೇ ಇದ್ದರೂ ಕಳೆದ ಬಾರಿ ರಾ[illegible] ಸಿ ಅಧಿಕಾರ ಪಡೆದು ಮೆರೆದಾಡಿದ್ದು, ಈ ಬಾರಿ ನರಹಂತಕ ನರೇಂದ್ರ ಮೋದಿಯ ಕಪೋಲಕಲ್ಪಿತ 'ಅಲೆ'ಯಿಂದಾಗಿ ದೆಹಲಿಯಲ್ಲಿ ಅಧಿಕಾರ ಹಿಡಿಯುವ ಭ್ರಮೆ ಹೊಂದಿರುವುದು - ಇವೆರಡೂ ಜೊತೆಗೂಡಿ ಮುತಾಲಿಕನೂ ಸಂಸತ್ ಸೇರುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದ. ಆ ನಿಟ್ಟಿನಲ್ಲೇ ಆತ 2014ರ ಚುನಾವಣೆಯಲ್ಲಿ ಬೆಳಗಾವಿಯಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುವ ಕನಸ್ಸು ಕಾಣುತ್ತಿದ್ದ. ಆದರೆ ಆತ ಅದೆಷ್ಟೇ ಅಂಗಲಾಚಿದರೂ ಚೆಡ್ಡಿ ನಾಯಕರು ಅವನನ್ನು ಪಕ್ಷಕ್ಕೆ ಸೇರಿಸಿಕ್ಕೊಳ್ಳಲು ಹಸಿರು ನಿಶಾನೆ ತೋರಿಸಿರಲಿಲ್ಲ.

ಕೋಮುವಾದಿ ಮುತಾಲಿಕನಿಗೆ ಧಾರವಾಡದಲ್ಲೂ ಸಾಕಷ್ಟು ಪ್ರಭಾವ ಇರುವುದರಿಂದ ಮತ್ತು ಆತನನ್ನು ಜೊತೆಗೂಡಿಸಿಕೊಂಡರೆ ಕಾದಿರುವ ಸೋಲಿನಿಂದ ತಪ್ಪಿಸಿಕೊಳ್ಳಬಹುದೆಂಬ ಆಶೆಯಿಂದ ಜೋಷಿ ತರಾತುರಿಯಲ್ಲಿ ಮುತಾಲಿಕ್‌ನನ್ನು ಪಕ್ಷಕ್ಕೆ ಸೇರಿಸಿಕೊಂಡೇ ಬಿಟ್ಟ. ಆದರೆ ಪಬ್ ದಾಳಿ ಕುಖ್ಯಾತಿಯ ಮುತಾಲಿಕನನ್ನು ಬಿಜೆಪಿಗೆ ಸೇರಿಸಿಕೊಂಡರೆ ದೇಶದಾದ್ಯಂತ ಯುವ ಮತದಾರರ ಬೆಂಬಲ ತಪ್ಪಬಹುದೆಂಬ ಆತಂಕದಿಂದಾಗಿ ಮುತಾಲಿಕ್ ಬಿಜೆಪಿ ಸೇರಿದ ಕೆಲ ಗಂಟೆಗಳಲ್ಲೇ ದೆಹಲಿಯ ಚೆಡ್ಡಿ ನಾಯಕರು ಆತನನ್ನು ಹೊರದಬ್ಬಿದ್ದು ಈಗ ಎಲ್ಲರಿಗೂ ಗೊತ್ತು.


ತನಗಾದ ಹೀನಾಯ ಅವಮಾನದಿಂದ ಸಿಟ್ಟಿಗೆದ್ದ ಮುತಾಲಿಕ್ ಜೋಷಿಯನ್ನು ಸೋಲಿಸಲೆಂದೇ ಧಾರವಾಡದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ತೀರ್ಮಾನ ಘೋಷಿಸಿದ. ಜೋಷಿ ಸಣ್ಣಗೆ ಬೆವರಿದ್ದೇ ಆಗ!

ಯಾಕೆಂದರೆ ಧಾರವಾಡದ ಮಟ್ಟಿಗೆ ಈಗಾಗಲೇ ಬಿಜೆಪಿ ಒಡೆದ ಮನೆಯಂತಾಗಿದೆ. 'ಈದ್ಗಾ ಮೈದಾನ' ವಿವಾದದಲ್ಲಿ ಹೆಚ್ಚು ಕ್ರಿಯಾಶೀಲರಾಗಿದ್ದ ಮನೋಜ ಹಾನಗಲ್, ವೆಂಕಟೇಶ ಸವದತ್ತಿ ಮತ್ತು ಸುನೀಲ್ ಚಿಲ್ಲಾಳರಂತವರು ಈಗ ಜೋಷಿ ವಿರುದ್ಧ ತಿರುಗಿ ಬಿದ್ದಿದ್ದಾರೆ. ಜಮುಖಾನ ಮೈದಾನ ಕಬಳಿಕೆಯನ್ನು ವಿರೋಧಿಸಿ ಇವರೆಲ್ಲಾ 'ಗ್ರೌಂಡ ಬಚಾವೊ' ಸಮಿತಿ ರಚಿಸಿ ಬೀದಿಗಿಳಿದದ್ದು ಅವರ ಆಕ್ರೋಶಕ್ಕೆ ಸಾಕ್ಷಿ. ಜೋಷಿಯ ಸೋಲನ್ನು ಎದುರು ನೋಡುತ್ತಿರುವ ಅವರೆಲ್ಲಾ ಈಗ ಮುತಾಲಿಕ್‌ನ ಬೆಂಬಲಕ್ಕೆ ನಿಂತಿದ್ದಾರೆ.

ಜೋಷಿ ಹಾಗೂ ಶೆಟ್ಟರ್ ಟೀಮು ವಿಮಾನ ನಿಲ್ದಾಣಕ್ಕಾಗಿ ರೈತರ ಜಮೀನುಗಳನ್ನು ಕಬಳಿಸಿ ಅವರಿಗೆ ಸರಿಯಾದ ಪರಿಹಾರವನ್ನೂ ನೀಡದೆ ತಮ್ಮ ಸಂಬಂಧಿಕರಿಗೆ ಕಡಿಮೆ ಬೆಲೆಗೆ ಮಾರಿಕೊಂಡಿದ್ದರ ವಿರುದ್ಧ ಬೀದಿಗಿಳಿದಿರುವ ಸಂತ್ರಸ್ತರ ಪರವಾಗಿ ನಿಂತಿರೋದು ರಘೋತ್ತಮ ಮತ್ತು ಕುಲಕರ್ಣಿ ಎಂಬ ಬಿಜೆಪಿಯ ಪುಡಿ ನಾಯಕರೆ! ಇವರು ಈ ಚುನಾವಣೆಯಲ್ಲಿ ಜೋಷಿಯನ್ನು ಸೋಲಿಸಲು ಈಗಾಗಲೇ ಪಣ ತೊಟ್ಟಿದ್ದಾರೆ. ಜೋಷಿ, ಶೆಟ್ಟರ್ ಮತ್ತು ಅನಂತ್‌ಕುಮಾರ್‌ನ ಸರ್ವಾಧಿಕಾರಿ ಧೋರಣೆಯಿಂದ ರೋಸಿಹೋಗಿರುವ ಚೆಡ್ಡಿ ಕಾರ್ಯಕರ್ತರೂ ಈಗ ಒಂದಾಗಿ ಮುತಾಲಿಕ್ ಬೆನ್ನಿಗೆ ನಿಂತಿದ್ದಾರೆ. ಮುತಾಲಿಕ್‌ನನ್ನು ಪಕ್ಷಕ್ಕೆ ಎಳೆತಂದರೆ ಇಂತಹ ಭಿನ್ನಮತೀಯರನ್ನು ಸುಲಭವಾಗಿ ಪಳಗಿಸಿಕೊಳ್ಳಬಹುದೆಂಬ ಜೋಷಿಯ ಪ್ಲಾನೂ ಉಲ್ಟಾ ಹೊಡೆದಿದೆ. ಹಾಗಾಗಿ ಬಿಜೆಪಿಯ ಮಿನಿಮಮ್ ಗ್ಯಾರಂಟಿ ಮತಗಳೂ ಹಂಚಿಹೋಗುವುದರಲ್ಲಿ ಅನುಮಾನವೇ ಇಲ್ಲ.

ಕಾಂಗ್ರೆಸ್‌ನ ಒಗ್ಗಟ್ಟು

ಇಪ್ಪತ್ತಮೂರು ವರ್ಷಗಳಿಂದ ಕಾಡಿರುವ ಸೋಲಿನ ಕಹಿಗೆ ತಿಲಾಂಜಲಿ ನೀಡಿ ಕ್ಷೇತ್ರವನ್ನು ಪುನಃ 'ಕೈ' ವಶ ಮಾಡಿಕೊಳ್ಳಲು ಕಾಂಗ್ರೆಸ್ ಅದಕ್ಕೆ ಬೇಕಾದ ತಯಾರಿಯನ್ನೆಲ್ಲ ಮಾಡಿಕೊಂಡು ಕಾತರದಿಂದ ನಿಂತಿದೆ. ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರ ವಹಿಸುವ ಮುಸ್ಲಿಂ ಮತಗಳನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ಕೈ ಪಡೆ ಭರ್ಜರಿ ಕಸರತ್ತನ್ನೇ ನಡೆಸಿದೆ. ಮೂರು ಲಕ್ಷಕ್ಕೂ ಹೆಚ್ಚಿರುವ ಮುಸ್ಲಿಂ ಮತಗಳನ್ನು ಒಂದೆಡೆ ತರಲು ಹುಬ್ಬಳ್ಳಿ ಧಾರವಾಡ ಅಂಜುಮಾನ್ ಸಂಸ್ಥೆಯ ಹಾಲಿ, ಮಾಜಿ ಅಧ್ಯಕ್ಷರುಗಳಾದ ಎ.ಎಂ. ಹಿಂಡಸಗೇರಿ, ಜಬ್ಬಾರಖಾನ ಹೊನ್ನಳ್ಳಿ, ಈಸೂಫ ಸವಣೂರ, ಇಸ್ಮಾಯಿಲ್ ತಮಾಟಗಾರ ಮೊದಲಾದವರನ್ನೆಲ್ಲ ಒಗ್ಗೂಡಿಸಲಾಗಿದೆ.



ಮುತಾಲಿಕ್

ಕಾರಣಾಂತರದಿಂದ ಪಕ್ಷ ತೊರೆದು ಕೆಜೆಪಿಗೆ ವಲಸೆ ಹೋಗಿದ್ದ ಜಬ್ಬರ್‌ಖಾನ್ ಹೊನ್ನಳ್ಳಿಯನ್ನು ವಾಪಸ್ ಕರೆತಂದದ್ದು ಹಾಗೂ ಬಸವರಾಜ್ ಹೊರಟ್ಟಿಯ ಪುತ್ರಮೋಹಿತ ಪಾಳೆಗಾರಿಕೆಯ ವಿರುದ್ಧ ಬಂಡಾಯವೆದ್ದು ಜೆಡಿಎಸ್ ತೊರೆದ ಇಸ್ಮಾಯಿಲ್ ತಮಾಟಗಾರನನ್ನು ಪಕ್ಷಕ್ಕೆ ಭರಮಾಡಿಕೊಂಡದ್ದು ಇದೇ ಉದ್ದೇಶದಿಂದ. ಅಲ್ಲದೆ ಶಿಗ್ಗಾಂವಿಯ ಮಾಜಿ ಶಾಸಕ ಅಜ್ಜಂಪೀರ ಖಾದ್ರಿ ಕೂಡಾ ಒಂದಾಗಿದ್ದು ಈ ಚುನಾವಣಾ ವಿಶೇಷ. ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗದ ಹಿಂಡಸಗೇರಿ, ಹೊನ್ನಳ್ಳಿ, ಸವಣೂರ ಮೊದಲಾದವರು ಕೈ ಪಾಳಯದಲ್ಲಿ ಒಗ್ಗಟ್ಟಿನ ಮಂತ್ರ ಪಠಿಸುತ್ತಿರುವುದು ಮುಸ್ಲಿಂ ಮತ ವಿಭಜನೆ ತಡೆಗಟ್ಟುವಲ್ಲಿ ಗಮನಾರ್ಹ ಬೆಳವಣಿಗೆಯೇ ಸರಿ.

ಅದೇರೀತಿ ಜೆಡಿಎಸ್‌ನ ಮುಖಂಡ ಮಾಜಿ ಸಚಿವ ಪಿ.ಸಿ. ಸಿದ್ದನಗೌಡರ ಕಲಘಟಗಿ ತಾಲ್ಲೂಕಿನ ಘಟಕ ವಿಸರ್ಜಿಸಿ ಕಾಂಗ್ರೆಸ್ ಪಕ್ಷಕ್ಕೆ ಬಂದಿರೋದು ಕೈ ಬಲವನ್ನು ಮತ್ತಷ್ಟು ಹೆಚ್ಚಿಸಿದೆ. ಇದರ ಬೆನ್ನಿಗೇ ಬಿಜೆಪಿಯೊಂದಿಗೆ ಒಳಒಪ್ಪಂದ ಮಾಡಿಕೊಂಡು ನಾಮಕಾವಸ್ಥೆಗಾಗಿ ರಿಯಲ್ ಎಸ್ಟೇಟ್ ಕುಳ, ಕಾರ್ಪೊರೇಷನ್ ಎಲೆಕ್ಷನ್‌ನಲ್ಲಿ ಕಾರ್ಪೊರೇಟರ್ ಕೂಡ ಆಗಲು ಲಾಯಕ್ಕಲ್ಲದ ಹನುಮಂತಪ್ಪ ಬಂಕಾಪೂರನನ್ನು ಸ್ಪರ್ಧೆಗಿಳಿಸಿರುವ ಬಸವರಾಜ್ ಹೊರಟ್ಟಿಯ ರಾಜಕಾರಣಕ್ಕೆ ಬೇಸತ್ತು ಜೆಡಿಎಸ್‌ನ ಕಾರ್ಯಕರ್ತರು ಸಾಮೂಹಿಕವಾಗಿ ಕಾಂಗ್ರೆಸ್‌ಗೆ ವಲಸೆ ಬರುತ್ತಿದ್ದಾರೆ. ಇದು ಕಾಂಗ್ರೆಸ್ ಅಭ್ಯರ್ಥಿ ವಿನಯ ಕುಲಕರ್ಣಿ ಗೆಲುವಿಗೆ ಟಾನಿಕ್ ಒದಗಿಸಿದಂತಾಗಿದೆ.

ಮತ್ತೊಂದೆಡೆ ಹುಬ್ಬಳ್ಳಿ ಶಹರ, ಧಾರವಾಡ ಗ್ರಾಮೀಣ, ಕುಂದಗೋಳ ಹಾಗೂ ಕಲಘಟಗಿ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ ಶಾಸಕರುಗಳೇ ಅಧಿಕಾರದಲ್ಲಿರೋದು ಕಾಂಗ್ರೆಸ್‌ಗೆ ಇನ್ನೊಂದು ಪ್ಲಸ್ ಪಾಯಿಂಟ್. ಪ್ರಸಾದ್ ಅಬ್ಬಯ್ಯ, ಸಿ.ಎಸ್. ಶಿವಳ್ಳಿ, ಸಂತೋಷ್ ಲಾಡ್, ಶ್ರೀನಿವಾಸ್ ಮಾನೆ, ನಾಗರಾಜ ಛಬ್ಬಿ, ವೀರಣ್ಣ ಮತ್ತಿಕಟ್ಟಿ, ಡಾ. ಮಹೇಶ್ ನಾಲವಾಡ, ಧಾರವಾಡ ಬಾರ್ ಅಸೋಸಿಯೇಷನ್ ಅಧ್ಯಕ್ಷ ಕಾಮರೆಡ್ಡಿ ಮೊದಲಾದವರೆಲ್ಲಾ ಒಟ್ಟಾಗಿ ವಿನಯ ಕುಲಕರ್ಣಿ ಗೆಲುವಿಗೆ ಶ್ರಮಿಸುತ್ತಿದ್ದಾರೆ. ನೇಪಥ್ಯಕ್ಕೆ ಸರಿದಿದ್ದ ಧಾರವಾಡದ ಕಾಂಗ್ರೆಸ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಎಸ್.ಆರ್. ಮೋರೆ ಕೂಡಾ ಬೀದಿಗಿಳಿದು ಪ್ರಚಾರದಲ್ಲಿ ತೊಡಗಿಸಿಕೊಂಡಿರೋದು ವಿಶೇಷ.

ಒಟ್ಟಿನಲ್ಲಿ ಸ್ಥಳೀಯ ಭ್ರಷ್ಟಾಚಾರ, ಆಂತರಿಕ ಕಚ್ಚಾಟದಿಂದ ಸೋಲಿನ ದವಡೆಗೆ ಸಿಲುಕಿರುವ ಬಿಜೆಪಿಯ ಜೋಷಿಯನ್ನು ಕಾಂಗ್ರೆಸ್‌ನ ಒಗ್ಗಟ್ಟು ನೇಪಥ್ಯಕ್ಕೆ ತಳ್ಳುತ್ತಿರುವುದಂತೂ ಸತ್ಯ.

● ಹುಬ್ಬಳ್ಳಿಯಾಂವ

...ಧು ಹಣ ತಂದು ಖರ್ಚು ಮಾಡ್ತಯಿದಾನೆ ಅಂತ ...ಳ್ತಿರಲ್ಲ ಸಾರ್?"

"ಅದೇನೊ ನನಿಗೊತ್ತಿಲ್ಲ, ಆ ಕುಟುಂಬದ ಜಗಳಕ್ಕೂ ...ನಗೂ ಸಂಬಂಧ ಇಲ್ಲ."

"ಅಲ್ಲ ಸಾರ್, ಅವರ ಕುಟುಂಬದ ಜಗಳಕ್ಕೂ ನನಿಗೂ ...ಬಂಧ ಇಲ್ಲ ಅಂತಿರಿ. ಜೆಡಿಎಸ್‌ಗೂ ನನಿಗೂ ಸಂಬಂಧ ...ಲ್ಲ ಅಂತಿರಿ. ತೆರೆ ಮೇಲಿಂದ ಇಳದು ಬೀದಿಗೆ ಬಂದ ...ಲೆ ಇದಕ್ಕೆಲ್ಲಾ ಉತ್ತರ ಕೊಡಬೇಕು ಸಾರ್."

"ಕೊಡಬೇಕು ಅಂತ ಏನು ಇಲ್ಲ."

"ಹೋಗ್ಲಿ, ಗೆದ್ದ ಮೇಲೆ ಏನು ಮಾಡನ ಅಂತ ...ದ್ದಿರಿ ಸಾರ್?"

"ಗೆದ್ದ ಮೇಲೆ ಗೀತಾ ಡೆಲ್ಲಿಗೋಗ್ತಳೆ. ನಾನೂ ...ೋಗಬೇಕಾಗುತ್ತೆ, ಆಕೆ ಅಲ್ಲಿ, ನಾನಿಲ್ಲಿ ಇರಕ್ಕಾಗಲ್ಲ. ...ರಿಂದ ನಾನು ಡೆಲ್ಲಿಗೆಗೋಗ್ತಿನಿ."

"ಅಂಗಾದ್ರೆ, ಸಿನಿಮಾ ಕತೆಯೇನು ಸಾರ್."

"ತೊಂದ್ರೆಯೇನೂ ಆಗಲ್ಲ, ಬಂದು ಶೂಟಿಂಗ್ ...ಂಗಿಸಿಕೊಂಡು ಡೆಲ್ಲಿಗೊಗ್ತೀನಿ. ಗೀತಾ ಕೂಡ ಡೆಲ್ಲೀಲೇ ...ರಲ್ಲ, ಲೋಕಸಭೆ ಇದ್ದಾಗ ಹೋಗ್ತಾಳೆ. ಉಳದಂತೆ ...ಂಗಳೂರಲ್ಲಿ ಇರ್ತಾಳೆ."

"ಮತ್ತೆ ಅವರು ಶಿವಮೊಗ್ಗದಲ್ಲಿ ಮನೆ ಮಾಡಿ ಇಲ್ಲೇ ...ರ್ತಿನಿ ಅಂತರಲ್ಲಾ ಸಾರ್?"

"ಅವರಿಲ್ಲರಿತರೆ ನಾನೂ ಅಲ್ಲೇ ಇರತಿನಿ."

"ಅಂತು ನಿಮ್ಮ ಸಿನಿಮಾ ಕತೆ ಇಲ್ಲಿಗೆ ಮುಗಿತು ...ಲ್ಲ?"

"ಹಾಗೇನೂ ಇಲ್ಲ, ಸಿನಿಮಾದಲ್ಲೂ ನಟಿಸ್ತಿನಿ."

"ಅದೂ ಬೀದಿಲಿ ಕುಣಿಯೋ ಕಲಾವಿದನ್ನ ಜನ ...ಮೇಲೆ ನೋಡಲ್ಲಾ ಸಾರ್."


"ಹೌದಾ?"


"ಹೌದು ಸಾರ್."


ಥೂತ್ತೇರಿ!!!


ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಉತ್ತರ ಕನ್ನಡ: ದೇಶಪಾಂಡೆ ತಂತ್ರ; ನಡೆಯುತ್ತಿಲ್ಲ ಬಿಜೆಪಿ ಮಂತ್ರ



ಆರ್.ವಿ. ದೇಶಪಾಂಡೆ


ಕುಮಾರಸ್ವಾಮಿ


ಅನಂತ ಹೆಗಡೆ


ಮಧು ಬಂ


ಪ್ರಶಾಂತ ದೇಶಪಾಂಡೆ


ಶಿವಾನಂದ ನಾಯ್ಕ್

ಇನ್ನೇನು ಸಮರ ಶುರುವಾಗಬೇಕು ಎಂಬ ಕದನ ಕುತೂಹಲದ ಹಂತದಲ್ಲೇ ಹಠಾತ್ ಉತ್ತರ ಕನ್ನಡ ರಣರಂಗದ ಖದರೇ ಬದಲಾಗಿ ಹೋಗಿದೆ. ಜೆಡಿಎಸ್‌ನ ಸರ್ವಶಕ್ತ ಸೇನಾನಿ ತಾನೆಂದು ಕಾಂಗ್ರೆಸ್‌ನ ಪ್ರಶಾಂತ ದೇಶಪಾಂಡೆ ಮತ್ತು ಬಿಜೆಪಿಯ ಅನಂತ್ ಹೆಗಡೆಗೆ ತೊಡೆ ತಟ್ಟಿ ಕೆಣಕಿದ್ದ ಶಿವಾನಂದ ನಾಯ್ಕ್, ಕೊನೇಕ್ಷಣದಲ್ಲಿ ಯುದ್ಧ ಭೂಮಿಯಿಂದ ಹೇಡಿಯಂತೆ ಓಡಿಹೋಗಿದ್ದಾನೆ. ಜೆಡಿಎಸ್‌ನ ಪೊಳ್ಳು ಪರಾಕ್ರಮಿಯ ಪಲಾಯನದಿಂದ ಕಾಂಗ್ರೆಸ್-ಬಿಜೆಪಿ ರಣ ಕಲಿಗಳು ತಂತ್ರ-ಮಂತ್ರ ಬದಲಿಸಬೇಕಾಗಿ ಬಂದಿದೆ. ಒರಿಜಿನಲ್ ಚಡ್ಡಿ ಶಿವಾನಂದ ನಾಯ್ಕ್, ಸಮಸ್ತ ಶಸ್ತ್ರಾಸ್ತ್ರ ಚೆಲ್ಲಿ ಆಕ್ರಂದಿಸುತ್ತ ಮೂಲ ಗೂಡಾದ ಆರೆಸ್ಸೆಸ್-ಬಿಜೆಪಿ ಅಡ್ಡೆಗೆ ಮರಳಿದ್ದಾನೆ. ಅಲ್ಲಿಗೆ ತಾನೊಬ್ಬ ಬದ್ಧತೆ-ನಿಷ್ಠೆ-ಪ್ರಾಮಾಣಿಕತೆ ಇಲ್ಲದ ಗಂಡಾಗುಂಡಿ ಪುಢಾರಿ ಎಂಬುದನ್ನು ಸಾಬೀತುಪಡಿಸಿಕೊಂಡಿದ್ದಾನೆ.

ಜೆಡಿಎಸ್‌ನ ದೊರೆಗಳಾದ ಕುಮ್ಮಿ-ಮಧು ಬಂ ಮಾತಿನಂತೆ 'ಹಣಾಸ್ತ್ರ' ಸರಬರಾಜು ಮಾಡದೇ ಕಂಗೆಡಿಸಿದ್ದೇ ನಾಮಪತ್ರ ವಾಪಸ್ ಪಡೆಯಲು ಪ್ರಮುಖ ಕಾರಣ ಎನ್ನುತ್ತಿದ್ದಾನೆ ನಾಯ್ಕ್. ಆದರೆ ಜೆಡಿಎಸ್ ಕಡೆಯಿಂದ ಹೆಗಡೆ 'ಡೀಲ್'ಗೆ ನಾಯ್ಕ್ ಮಾರಾಟವಾಗಿದ್ದಾನೆಂಬ ಹೇಳಿಕೆಗಳು ಬರುತ್ತಿವೆ. ಏನೇ ಇರಲಿ, ಮೇಲ್ವರ್ಗದ ದಬ್ಬಾಳಿಕೆ, ಪುರೋಹಿತಶಾಹಿಕೆಗೆ ಬೇಸತ್ತಿದ್ದ ಹಿಂದುಳಿದವರು ಬಹುವಾಗಿ ನಂಬಿದ್ದ ನಾಯ್ಕ್‌ನ ನಿಗೂಢ ನಡೆಯಿಂದ ಇಡೀ ಕ್ಷೇತ್ರದಲ್ಲಿ ಗೊಂದಲ-ಗಲಾಟೆ ಎದ್ದಿದೆ. ಅಷ್ಟೇ ಅಲ್ಲ, ವಂಚಕನೆಂಬ ಬಿರುದು ಪಡೆದು ಜನರ ಆಕ್ರೋಶ-ಅಪನಂಬಿಕೆಗೆ ತುತ್ತಾಗಿರುವ ನಾಯ್ಕ್, ತನ್ನ ರಾಜಕೀಯ ಭವಿಷ್ಯಕ್ಕೆ ಸಂಚಕಾರ ತಂದುಕೊಂಡಿದ್ದಾನೆ. ಬಿಜೆಪಿಯಲ್ಲಿ ಬ್ರಾಹ್ಮಣರಿಂದ ತುಳಿಸಿಕೊಂಡು ಹೈರಾಣಾಗಿದ್ದ ನಾಯ್ಕ್, ಗತಿಯಿಲ್ಲದೇ ಅದೇ ಪಕ್ಷಕ್ಕೆ ಸೇರಿದ್ದು ಆತನ ರಾಜಕೀಯ-ಸಾಮಾಜಿಕ ಮತ್ತು ಮಾನಸಿಕ ಸ್ಥಿತಿ-ಗತಿ ಅನೇಕಾನೇಕ ವ್ಯಾಖ್ಯಾನಕ್ಕೆ ತುತ್ತಾಗುತ್ತಿವೆ...

ನಾಯ್ಕ್, ಮಾಜಿ ಮಂತ್ರಿ. ಜಿಲ್ಲೆಯ ಬಹುಸಂಖ್ಯಾತ ದೀವರ ಧೀರ. ಜತೆಗೆ ಬ್ರಾಹ್ಮಣಿಕೆಯ ಬಿಜೆಪಿಗಳಾದ ಕಾಗೇರಿ-ಅನಂತ್ಮಾಣಿ ವಗೈರೆಗಳ ಪಟಾಲಮ್‌ಗೆ ಸೆಡ್ಡು ಹೊಡೆದು ಆರ್ಭಟಿಸಿ ನಾಯ್ಕ್ ಜೆಡಿಎಸ್ ಸೇರಿದ್ದ ಹೀಗಾಗಿ ಕೆನರಾ ಅಖಾಡದಲ್ಲಿ ತ್ರಿಕೋನ ಕಾಳಗ ನಡೆವ ಪಿಚ್ ಕೂಡ ಅಣಿಯಾಗಿತ್ತು. ಅಷ್ಟೇ ಅಲ್ಲ, ಸ್ವಯಂಕೃತಾಪರಾಧದಿಂದ ರಣಾಂಗಣದಲ್ಲಿ ಒಬ್ಬ ರೌಡಿಯಾಗಿದ್ದ ಬಿಜೆಪಿಯ ಅನಂತ್ಮಾಣಿ ದಿನಗಳೆದಂತೆ ದುರ್ಬಲನಾಗುತ್ತ ಸಾಗಿದ್ದ ಹೀಗಾಗಿ ನಾಯ್ಕ್‌ನೇ ಕಾಂಗ್ರೆಸ್‌ಗೆ ಪ್ರಬಲ ಎದುರಾಳಿ ಎಂಬಂತ ಪರಿಸ್ಥಿತಿ ನಿರ್ಮಾಣವೂ ಆಗಿಹೋಗಿತ್ತು. ಅಂದರೆ ಮಾಣಿ ಮೂರನೇ ಸ್ಥಾನಕ್ಕೆ ತಲುಪಿದ್ದ.

ಆದರೆ ಈಗ ರಣರಂಗದ ವರಸೆಯೇ ಬದಲಾಗಿ ಹೋಗಿದೆ. ಆರ್.ವಿ. ದೇಶಪಾಂಡೆ ಮತ್ತು ಕೋಮು ಕ್ರಿಮಿ-ಭ್ರಷ್ಟ ಭೂಪ ಅನಂತ ಹೆಗಡೆ ಎದುರಾಬದುರಾ ನಿಂತು ಹೋರಾಡಬೇಕಾಗಿದೆ. ಕಳೆದ ಹತ್ತು ವರ್ಷದಿಂದ ಸಂಸದನಿದ್ದೂ ಇಲ್ಲದ ಸ್ಥಿತಿಯಲ್ಲಿ ಕಳೆದ ಉತ್ತರ ಕನ್ನಡಿಗರು ಮಾಣಿಯನ್ನು ಮತ್ತೆ ಪಾರ್ಲಿಮೆಂಟಿಗೆ ಕಳಿಸುವ ಮನಸ್ಥಿತಿಯಲ್ಲಿಲ್ಲ! ಬದಲಾವಣೆ ಬಯಸಿರುವ ಮತದಾರ ಕಾಂಗ್ರೆಸ್‌ನ ಪ್ರಶಾಂತ ದೇಶಪಾಂಡೆಯೇ ಬೆಟರ್ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಇನ್ನು ಉಳಿದ 9 ಕ್ಯಾಂಡಿಡೇಟ್‌ಗಳಲ್ಲಿ ಯಾರೂ ಮತದಾರರ ಮನ ಗೆಲ್ಲುತ್ತಿಲ್ಲ.

ಉತ್ತರ ಕನ್ನಡದ ದಕ್ಷಿಣತುದಿಯ ಭಟ್ಕಳದಿಂದ ಬೆಳಗಾವಿ ಜಿಲ್ಲೆಯ ಬುಡದಲ್ಲಿರುವ ಖಾನಾಪುರ-ಕಿತ್ತೂರಿನತನಕ ಓಡಾಡಿದರೆ ಕಾಣುವುದು-ಬಿಜೆಪಿಯ ಚೆಂದದ ಮುಖದ-ಕರಾಳ ಮನಸ್ಸಿನ ಅನಂತ್ಮಾಣಿ ಸೋಲಿನ ಚಂಡಮಾರುತಕ್ಕೆ ಸಿಲುಕಿ ತತ್ತರಿಸುತ್ತಿರುವುದು! ಅನಂತ್ಮಾಣಿಯನ್ನು ಆತನ ಕರ್ಮಗೇಡಿತನ, ಅಹಂಕಾರ, ಅಧಿಕ ಪ್ರಸಂಗವೇ ಚಿಂದಿ ಚಿತ್ರಾನ್ನವಾಗಿಸಿ ಬಿಟ್ಟಿದೆ. ಹತಾಶನಾದ ಮಾಣಿಗೆ ಈ ಬಾರಿಯ ಹಿಂದೂತ್ವ-ಮೋದಿ ಮೇನಿಯಾ ಯಾವುದೂ ಕೆಲಸಕ್ಕೆ ಬಾರದಂತಾಗಿದೆ. ಅಂದರೆ ಆತನ ಜನದ್ರೋಹ-ಕರ್ಮಗೇಡಿತನ-ಅಹಂಕಾರ-ಅವಾಂತರಗಳ ಪಾಪದ ಫಲವೇ ದೊಡ್ಡದಾಗಿ ಕಾಡುತ್ತಿದೆ. ಎಂಟು ಅಸೆಂಬ್ಲಿ ಸೆಗ್ಮೆಂಟುಗಳ ಪೈಕಿ ಒಂದರಲ್ಲೂ ಆತನಿಗೆ ನಂಬಿಗಸ್ಥ ಬೆಂಬಲಿಗರ ಪಡೆ ಕಟ್ಟಿ ಪ್ರಚಾರಕ್ಕೆ ಬಿಡಲಾಗಿಲ್ಲ.

ಅನಂತ್ಮಾಣಿ ಜತೆ ಕಿತ್ತಾಡಿ ಕೆಜೆಪಿ-ಜೆಡಿಎಸ್ ಸೇರಿದ್ದ ಶಿವಾನಂದ ನಾಯ್ಕ್ ಮರಳಿ ಬಿಜೆಪಿಗೆ ಬಂದರೂ ಆತನ ದೀವರ ಸಮಾಜದ ಓಟು ಬಿಜೆಪಿಗೆ ಸಿಗುವ ಸೂಚನೆಗಳಿಲ್ಲ. ನಾಯ್ಕ್ ಬಿಜೆಪಿ ಬಂದಿರುವುದರಿಂದ ಪಾರ್ಟಿಗೆ ಲಾಭಕ್ಕಿಂತ ಹಾನಿಯೇ ಜಾಸ್ತಿ ಎಂದು ಮೂಲ ಬಿಜೆಪಿಯ ನಾಮಧಾರಿ ಮುಂದಾಳುಗಳು ಮೂದಲಿಸುತ್ತಿದ್ದಾರೆ. ಬಿಜೆಪಿ ಒಳಗಿದ್ದೂ ನಾಯ್ಕ್ ತನ್ನ ಹಿತಶತ್ರು ಅನಂತ್ಮಾಣಿಗೆ ಬತ್ತಿ ಇಡದೇ ಬಿಡಲಾರ. ಇದು ಆತನ ಶೂದ್ರತ್ವದ ಒಳಮರ್ಮ. ಹಿಂದೆಲ್ಲಾ ಅನಂತ್ಮಾಣಿಯ ನಕಲಿ ದೇಶಭಕ್ತಿ, ಅಸಲೀ ಹೊಡಿ-ಬಡಿ ಬುದ್ಧಿಗೆ ಮರುಳಾಗಿ ಸಾರಾಸಗಟಾಗಿ ಬಿಜೆಪಿಗೆ ಮತ ಹಾಕುತ್ತಾ ಬಂದಿದ್ದ ದೀವರಿಗೆ ಈಗ ಈತನ ಸಹವಾಸವೇ ಸಾಕಾಗಿದೆ. ಈತ ಹಿಂದುಳಿದವರಿಂದ ಮತ ಪಡೆದು ಸ್ವ-ಜಾತಿ ಬ್ರಾಹ್ಮಣರ ಉದ್ಧಾರಕ್ಕಷ್ಟೇ ಕಿತಾಪತಿ ಮಾಡುವ ಮಸಲತ್ತುಗಾರನೆಂಬುದು ಹಿಂದುಳಿದವರಿಗೆ ಖಾತ್ರಿಯಾಗಿದೆ. ಇದು ಆತನಿಗೆ ದೀವರಂಥ ಪ್ರಜ್ಞಾವಂತ ಹಿಂದುಳಿದವರ ಮತದಲ್ಲಿ ಖೋತಾ ಖಂಡಿತ ಮಾಡಲಿದೆ.

2009ರ ಎಲೆಕ್ಷನ್‌ನಲ್ಲಿ ಮಾಣಿಗೆ ಉತ್ತರ ಕನ್ನಡದ 6 ಅಸೆಂಬ್ಲಿ ಕ್ಷೇತ್ರಗಳಲ್ಲಿ ಹಿನ್ನಡೆಯಾಗಿತ್ತು. ಆದರೆ ಬೆಳಗಾವಿಯ ಖಾನಾಪುರ-ಕಿತ್ತೂರಲ್ಲಿದ್ದ ಯಡ್ಡಿಯ ಒಲವಿನ ಲಿಂಗಾಯತರಿಂದಾಗಿ ಮಾಣಿ ಬಚಾವಾಗಿದ್ದ. ಇದನ್ನು ಮೊನ್ನೆ ಖಾನಾಪುರದಲ್ಲಿ ಪ್ರಚಾರ ಭಾಷಣ ಮಾಡುವಾಗ ಮಾಣಿ ನೆನಪಿಸಿಕೊಂಡಿದ್ದಾನೆ. ಬೆಳಗಾವಿ ಭಾಗದ ಜನರ ಮರುಳುಗೊಳಿಸಲು "ಖಾನಾಪುರ-ಕಿತ್ತೂರಿನ ಜನ ಒಳ್ಳೆಯ ನಂಬಿಗಸ್ಥರು... ಉತ್ತರ ಕನ್ನಡಿಗರು ಹೂಹಾರ ಹಾಕಿ-ಸನ್ಮಾನ ಮಾಡಿ ಬೆನ್ನಿಗೆ ಚೂರಿ ಹಾಕೋ ಪೈಕಿಯವರು... ಕಳೆದ ಬಾರಿ ನನಗೆ ಉತ್ತರ ಕನ್ನಡಿಗರು ಬೆಂಬಲಿಸದಿದ್ದರೂ ಖಾನಾಪುರ-ಕಿತ್ತೂರಿನವರು ಗೆಲ್ಲಿಸಿದ್ದಾರೆ..." ಎಂದು ಬೊಗಳಿದ್ದಾನೆ. ಈ ಕಂತ್ರಿ ಮಾತುಗಾರಿಕೆ ಆತನಿಗೆ ಎರಡೂ ಕಡೆ ಗುನ್ನ ಹಾಕುವುದು ಖಾತ್ರಿ. ಉತ್ತರ ಕನ್ನಡಿಗರು ಈ ಹೇಳಿಕೆಯಿಂದ ಮತ್ತಷ್ಟು ಕೆರಳಿದ್ದಾರೆ; ಬೆಳಗಾವಿ ಭಾಗದ ಜನರಿಗೆ ಈತನ ಎತ್ತಿ ಕಟ್ಟುವ ಆಟ ಅರ್ಥವಾಗಿದೆ. ಇದು ಮಾಣಿಗೆ ಮೈನಸ್.

ಬಿಜೆಪಿ ಒಳಗಿನವರೇ ಮಾಣಿಗೆ ಅಡ್ಡಗಾಲು ಹಾಕಿ ಕುಂತಿದ್ದಾರೆ. ಕಾಗೇರಿ, ವಿ.ಎಸ್. ಪಾಟೀಲ್, ಶಿವಾನಂದ ನಾಯ್ಕ್... ಮುಂತಾದವರು ಮಾಣಿಯನ್ನು ಸೋಲಿಸುವ ಛಲಕ್ಕೆ ಬಿದ್ದಿದ್ದಾರೆ. ಇದ್ದದ್ದರಲ್ಲೇ ಸಮಾಧಾನ ಎಂದರೆ ರಾಮಚಂದ್ರಾಪುರಮಠ ಮತ್ತು ಶಿರಸಿ ಸ್ವರ್ಣವಲ್ಲಿ ಮಠದ ಹವ್ಯಕ ಸ್ವಾಮೀಜಿಗಳು ತಮ್ಮ ಜನಿವಾರ ಸಂಜಾತನ ಪರ ರಹಸ್ಯ ಫರ್ಮಾನು ಹೊರಡಿಸಿದ್ದಾರೆ. ಇದು ಬಿಜೆಪಿಗೆ ತಿರುಗುಬಾಣವಾಗಲಿದೆ. ಏಕೆಂದರೆ, ಹೈಗರ ಮಠಾಧೀಶರ ಜಾತಿಯತೆ ಜೋರಾದಂತೆಯ ಶೂದ್ರಾದಿಗಳು ಕಾಂಗ್ರೆಸ್ ಪರ ನಿಲ್ಲುವುದು ಸಹಜ ರಾಜಕೀಯ ಜಿದ್ದಾಜಿದ್ದಿಯಂತಾಗಿದೆ. ಕೆನರಾ ಕ್ಷೇತ್ರದಲ್ಲಿ, ಅರಣ್ಯ ಅತಿಕ್ರಮಣ, ಬಂಗಲೆ ನಿರ್ಮಾಣ, ಕದಂಬ ಚಾರಿಟೇಬಲ್ ಬಿಸ್ನೆಸ್, ಕಮೀಷನ್ ದಂಧೆ, ಹೆಂಡತಿಯನ್ನು ಪಿಎ ಮಾಡಿಕೊಂಡು ಸರ್ಕಾರಿ ಹಣ ನುಂಗಿದ್ದು, ಹುಸಿ ಹಿಂದೂತ್ವ.... ಮುಂತಾದ ಪಾಪ-ಪಾತಕದಿಂದ ಮಾಣಿ ಈ ಬಾರಿ ಗೆಲ್ಲಲು ಏಳು ಕೆರೆಯ ನೀರು ಕುಡಿಯಬೇಕಾಗಿದೆ.

ಅತ್ತ ಕಾಂಗ್ರೆಸ್‌ನ ಕ್ಯಾಂಡಿಡೇಟ್ ಪ್ರಶಾಂತ ದೇಶಪಾಂಡೆ ಪರ ಆತನ ಮಂತ್ರಿ ಅಪ್ಪನೂ ಸೇರಿದಂತೆ ಕಾಂಗ್ರೆಸ್‌ನ ನಾಲ್ಕು ಶಾಸಕರಿದ್ದಾರೆ. ಭಟ್ಕಳದ ಮಂಡಾಳು ವೈದ್ಯ ಮತ್ತು ಕಾರವಾರದ ಸತೀಶ್ ಸೈಲ್ ಪಕ್ಷೇತರ ಎಮ್ಮೆಲ್ಲೆಗಳಾದರೂ ಅವರಿಬ್ಬರ ಬೆಂಬಲ-ನಿಷ್ಠೆ ಯಾವಾಗಲೂ ದೇಶಪಾಂಡೆ ಸಾಹೇಬರಿಗೆ. ಹೇಳಿಕೇಳಿ ಶಿರಸಿಯ ಬಿಜೆಪಿ ಶಾಸಕ ಕಾಗೇರಿ ಲಾಗಾಯ್ತಿನಿಂದಲೂ ಅನಂತ್ಮಾಣಿಯ ವೈರಿ. ಜೆಡಿಎಸ್‌ನ ಶಿವಾನಂದ ನಾಯ್ಕ್ ಕಣದಿಂದ ಕಣ್ಮರೆಯಾಗಿರುವುದು ಕಾಂಗ್ರೆಸ್‌ನ ಅಪ್ಪ-ಮಗನಿಗೇ ಲಾಭದಾಯಕವಾಗಿದೆ.

ಜೆಡಿಎಸ್ ಸ್ಪರ್ಧೆಯಲ್ಲಿದ್ದರೆ ದೇಶಪಾಂಡೆಯ ಎದುರಾಳಿ ಮ್ಯಾಗಿಯ ಜಾತಿ ಬಂಧುಗಳಾದ ಕ್ರಿಶ್ಚಿಯನ್ನರು ಮತ್ತು ಒಂದಿಷ್ಟು ಮುಸ್ಲಿಮರು ದೇಶಪಾಂಡೆಗೆ ಕೈಕೊಡುವ ಸಾಧ್ಯತೆಯಿತ್ತು. ಈಗ ಅನಿವಾರ್ಯವಾಗಿ ಅಲ್ಪಸಂಖ್ಯಾತರೆಲ್ಲ ಕಾಂಗ್ರೆಸ್‌ಗೆ ಮತ ಹಾಕಬೇಕಾಗಿದೆ. ಇಲ್ಲದಿದ್ದರೆ ನರಹಂತಕ ಮೋದಿಯ ಶಿಷ್ಯ ಅನಂತ್ಮಾಣಿ ಗೆಲ್ಲುತ್ತಾನೆಂಬ ಭಯ ಇವರಿಗೆ ಕಾಡುವುದು ಸಹಜ. ಮ್ಯಾಗಿ ಫ್ಯಾಕ್ಟರ್ ಕಾಂಗ್ರೆಸ್‌ಗೆ ಹಾನಿ ಮಾಡಲಾರದು. ಏಕೆಂದರೆ ಮ್ಯಾಗಿ ಬ್ರಿಗೇಡ್‌ಗೆ ಮತದಾರ ಸೆಳೆವ ಅಥವಾ ಬದಲಿಸುವ ತಾಕತ್ತು ಇಲ್ಲ. ಮ್ಯಾಗಿ ಹಿಂದಿರುವವರೆಲ್ಲ ಮುಖೇಡಿಗಳು. ಹೀಗಾಗಿ ಕಾರವಾರ, ಹಳಿಯಾಳ, ಖಾನಾಪುರ, ಕಿತ್ತೂರು, ಭಟ್ಕಳ ಅಸೆಂಬ್ಲಿ ಕ್ಷೇತ್ರದಲ್ಲಿ ಮರಿ ದೇಶಪಾಂಡೆ ಭರ್ಜರಿ ಲೀಡ್ ಪಡೆಯಲಿದ್ದಾನೆ. ಉಳಿದೆ ಕಡೆಯೂ ಮಾಣಿ ಕಾಂಗ್ರೆಸ್‌ಗಿಂತ ಮುಂದೇನೂ ಇಲ್ಲ ಬಿಡಿ.

ಬಿಜೆಪಿಗಿಂತ ಕಾಂಗ್ರೆಸ್ ಈ ಸಲ ಸಂಘಟನಾತ್ಮಕವಾಗಿ ಬಲವಾಗಿದೆ. ಪ್ರತಿ ತಾಲ್ಲೂಕಲ್ಲೂ ದೇಶಪಾಂಡೆಗೆ ನಂಬಿಗಸ್ಥ ಬಳಗವಿದೆ. ಸ್ಥಳೀಯ ಸಂಸ್ಥೆಗಳಲ್ಲೂ ಕಾಂಗ್ರೆಸ್‌ನದೇ ತೂಕ ಜಾಸ್ತಿ. ದೇಶಪಾಂಡೆ ಖಾನ್‌ದಾನ್ ಪರ ಅಲೆಯಿಲ್ಲದಿದ್ದರೂ ಎದುರಾಳಿ ಅನಂತ್ಮಾಣಿ ವಿರುದ್ಧ ಸುನಾಮಿ ಎದ್ದಿದೆಯಲ್ಲ?! ಈ ಸುನಾಮಿ ಮರಿ ದೇಶಪಾಂಡೆಯನ್ನು ಪಾರ್ಲಿಮೆಂಟ್‌ಗೆ ತಲುಪಿಸುವುದು ಗ್ಯಾರಂಟಿ. ಒಟ್ಟಿನಲ್ಲಿ ಕಂಡ-ಕಂಡವರ ತಲೆ ಮೇಲೆ ಕೈಯಿಟ್ಟು ಬೂದಿ ಮಾಡಲು ಹವಣಿಸುತ್ತಿದ್ದ ಅಭಿನವ ಭಸ್ಮಾಸುರ ಅನಂತ್ಮಾಣಿ ಈಗ ತನ್ನ ತಲೆ ಮೇಲೆ ಕೈ ಇಟ್ಟುಕೊಂಡಿದ್ದಾನೆ!

ತತ್ಪರಿಣಾಮವಾಗಿ ಬಿಜೆಪಿಯಲ್ಲಿ ಭಿನ್ನಮತದ ಬೆಂಕಿ ಭುಗಿಲೆದ್ದಿದೆ. ಈ ಅಗ್ನಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಅನಂತ್ಮಾಣಿ ಬೂದಿಯಾಗುತ್ತಿದ್ದಾನೆ. ಮತ ಎಣಿಕೆಯ ಮೇ 16ರಂದು ಈ ಬೂದಿಯನ್ನು ಬಿಜೆಪಿಗರೇ ಗೋಕರ್ಣದ ಕೋಟಿ ತೀರ್ಥದಲ್ಲಿ ವಿಸರ್ಜಿಸಿ 'ವೈದಿಕ ವಿಧಿ-ವಿಧಾನ' ನೆರವೇರಿಸಲು ಕಾದು ಕುಳಿತಿದ್ದಾರೆ!!

● ಶುದ್ದೋಧನ

ಚುನಾವಣಾ ಹೈಕುಗಳು

1

ಕರ್ನಾಟಕದಲ್ಲಿ ನಮ್ ಸಿದ್ರಾಮಯ್ಯ ನೀಡ್ತಾರೆ ಬಡವರಿಗೆ ಮನೆ,
ಒಂದ್ ರೂಪಾಯಿಗೆ ಅಕ್ಕಿ ಮತ್ತು ಗೋದಿ
ಗುಜರಾತ್‌ನಲ್ಲಿ ಟಾಟಾ ಅದಾನಿ ಅಂಬಾನಿಗಳಿಗೆ ಫ್ರೀಯಾಗಿ ಕೊಡ್ತಾನೆ
ಬಡವರಿಂದ ಕಿತ್ಕೊಂಡ ಜಾಗವನ್ನ ಮೋದಿ!


2


ಮೋದಿ ಸುತ್ತಾಡ್ತಾರ ಇಡೀ ದೇಶ
ಎಲ್ಲೆಲ್ಲೂ ಅವರದ್ದೇ ಗಾಳಿ
ಆಲೂಗಡ್ಡಿ ತಿನ್ನೋದು
ಸ್ವಲ್ಪ ಕಡಿಮೆ ಮಾಡೋಕ್ ಹೇಳಿ.

3


ಗುಜರಾತಿನಿಂದ ಬೀಸುತ್ತಿರುವ ಗಾಳಿಯ ತುಂಬೆಲ್ಲ
ನರೋಡಾ ಪಾಟಿಯಾದ ಸತ್ತರ ವಾಸನೆ!

● ಶಶಿಧರ್ ಹೆಮ್ಮಾಡಿ





ಬುದ್ಧಿಜೀವಿಗಳ ಫ್ಯಾಸಿಸ್ಟ್ ಪಾಲಿಟಿಕ್ಸ್




ಎಲೆಕ್ಷನ್ ಅರ್ಭಟದ ಮಧ್ಯೆ ಗಿರೀಶ್ ಕಾರ್ನಾಡ್ ಎಂಬ ಆನೆ ಪಟಾಕಿಯ ಸದ್ದು!


ಸಂಶೋಧಕ ಚಿದಾನಂದಮೂರ್ತಿ ಮೊದಲಾಗಿ ವಿಚಾರವಾದಿ ಕೋಟಿಗಾನಹಳ್ಳಿ ರಾಮಯ್ಯ ಸೇರಿದಂತೆ ಸಾಹಿತಿ ದಿಗ್ಗಜ ಚಂಪಾ; ಇತ್ಯಾದಿ ಒಂದು ಗುಂಪಿನ ಬುದ್ಧಿಜೀವಿಗಳೆಲ್ಲ ಏಕಾಏಕಿ ಗಿರೀಶ್ ಕಾರ್ನಾಡರ ವಿರುದ್ಧ ತಿರುಗಿಬಿದ್ದಿದ್ದಾರೆ. ನಿನ್ನೆಮೊನ್ನೆಯ ತನಕ ಆಮ್‌ಆದ್ಮಿ ಪಕ್ಷದೊಂದಿಗಿದ್ದು ಈಗ ಇದ್ದಕ್ಕಿದ್ದಂತೆ ನರೇಂದ್ರ ಮೋದಿ ಪರ ವಕಾಲತ್ತು ಆರಂಭಿಸಿದ ರಾಜೀವ್ ಚಂದ್ರಶೇಖರ್ ಒಡೆತನದ ಸುವರ್ಣ ಟೀವಿ ಇಂಥ ಗಿರೀಶ್ ಕಾರ್ನಾಡ್ ವಿರೋಧಿಗಳನ್ನೆಲ್ಲ ಕಲೆ ಹಾಕಿ ಕಾರ್ನಾಡ್ ವಿರೋಧಕ್ಕೊಂದು ವೇದಿಕೆಯನ್ನೂ ಕಟ್ಟಿಕೊಟ್ಟಿದೆ.


ಎಲ್ಲರ ಆಕ್ಷೇಪವೂ ಒಂದೇ. ಓರ್ವ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಯಾಗಿ ಕಾರ್ನಾಡ್ ನಂದನ್ ನಿಲೇಕಣಿ ಪರ ಪ್ರಚಾರಕ್ಕಿಳಿದದ್ದೇ ತಪ್ಪು. ಕೇವಲ ನಿಲೇಕಣಿಯನ್ನು ಬೆಂಬಲಿಸಿದ್ದರೆ ಸುಮ್ಮನಿರಬಹುದಿತ್ತು. ಆದರೆ ಕಾಂಗ್ರೆಸ್ ಬೆಂಬಲಿಸುವ ಮಟ್ಟಕ್ಕೆ ಕಾರ್ನಾಡ್ ಇಳಿಯಬಾರದಿತ್ತು. ಕಾರ್ನಾಡ್ ಓರ್ವ ಢೋಂಗಿ ಬುದ್ಧಿಜೀವಿ ಎಂಬುದು ಚಂಪಾ ಮೂದಲಿಕೆಯಾದರೆ ವಿಚಾರವಾದಿ ಕೋಟಿಗಾನಹಳ್ಳಿ ರಾಮಯ್ಯ ಕಾರ್ನಾಡ್‌ರನ್ನು ಅವಕಾಶವಾದಿ ಎಂದು ಹೀಯಾಳಿಸುತ್ತಾರೆ. ಇದೆಲ್ಲಕ್ಕೂ ಮುನ್ನ ಸಂಶೋಧಕ ಚಿದಾನಂದಮೂರ್ತಿ ಕಾರ್ನಾಡ್ ಕಾಂಗ್ರೆಸ್ ಪ್ರೇಮದ ವಿರುದ್ಧ ಹರಿಹಾಯ್ದರೆ ಅದಕ್ಕೆ ನಾಟಕ ಶಿರೋಮಣಿ ಮಾಸ್ಟರ್ ಹಿರಣ್ಣಯ್ಯ ತನ್ನದೇ ಆದ ಧಾಟಿಯಲ್ಲಿ ಧ್ವನಿಗೂಡಿಸಿದ್ದಾರೆ.


ಸದ್ಯ ಇವರೆಲ್ಲರ ಗುರಿ ಕೇವಲ ಗಿರೀಶ್ ಕಾರ್ನಾಡ್ ಮಾತ್ರವಲ್ಲ, ಅನಂತಮೂರ್ತಿ ಸೇರಿದಂತೆ ಕರ್ನಾಟಕದ ವಿಚಾರವಾದಿ-ಬುದ್ಧಿಜೀವಿ ವರ್ಗಕ್ಕೇ ತಲೆಕೆಟ್ಟಿದೆಯೆಂಬಂತೆ ಬಲಪಂಥೀಯ ದಿಗ್ಗಜರೆಲ್ಲ ಬೊಬ್ಬೆ ಹಾಕುತ್ತಿದ್ದಾರೆ.


ಅಷ್ಟಕ್ಕೂ ಗಿರೀಶ್ ಕಾರ್ನಾಡ್ ಮಾಡಿದ 'ಅಪರಾಧ' ವೇನೆಂದರೆ ಯುಗಾದಿ ಹಬ್ಬದ ಮರುದಿನದಿಂದ ಒಂದಷ್ಟು ಸಾಹಿತಿಗಳನ್ನು ಕಟ್ಟಿಕೊಂಡು ನಂದನ್ ನಿಲೇಕಣಿ ಪರವಾಗಿ ಪ್ರಚಾರಕ್ಕಿಳಿದದ್ದು. ಮತ್ತೊಬ್ಬ ಸಾಹಿತಿ ಮರುಳ ಸಿದ್ದಪ್ಪನವರನ್ನು ಜೊತೆ ಹಾಕಿಕೊಂಡು ಬಸವನಗುಡಿಯ ಕೃಷ್ಣರಾವ್ ಪಾರ್ಕಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ನಿಲೇಕಣಿ ಪರವಾಗಿ ಕರಪತ್ರ ಹಂಚುತ್ತ ಪ್ರಚಾರಕ್ಕಿಳಿದ ಗಿರೀಶ್ ಕಾರ್ನಾಡ್‌ರನ್ನು ಕೆಲ ಬಿಜೆಪಿಸ್ಸಿಸ್ ಕಾರ್ಯಕರ್ತರು ಅಟಕಾಯಿಸಿಕೊಳ್ಳುತ್ತಾರೆ. ಬೆನ್ನಲ್ಲೇ ಸುವರ್ಣ ಟೀವಿ ವರದಿಗಾರರೊಬ್ಬರು ಬೆಂಬತ್ತಿ ಬಂದು ಕಾಂಗ್ರೆಸ್ ಬೆಂಬಲಿಸಿದ್ದನ್ನು ಪ್ರಶ್ನಿಸುತ್ತಾರೆ.


ಅನಂತಮೂರ್ತಿ


ಮರುಳಸಿದ್ದಪ್ಪ


ಕೋಟಿಗಾನಹಳ್ಳಿ ರಾಮಯ್ಯ


ಚಂಪಾ


ಜಿ.ಕೆ.ಗೋವಿಂದರಾವ್

ಟೀವಿಯಲ್ಲಿ ವರದಿಯಾದಂತೆ ಕಾರ್ನಾಡ್ ಸ್ಪಷ್ಟವಾಗೇ ತಾನು ಕಾಂಗ್ರೆಸ್ಸನ್ನು ಬೆಂಬಲಿಸುತ್ತಿದ್ದೇನೆಂದು ಅದಕ್ಕೆ ಕಾರಣವನ್ನೂ ಉಚ್ಚರಿಸುತ್ತಾರೆ. ನಂದನ್ ನಿಲೇಕಣಿಯಂಥವರು ರಾಜಕೀಯಕ್ಕೆ ಬರುವುದು ಸಮಾಜದ ಆರೋಗ್ಯದ ದೃಷ್ಟಿಯಿಂದ ಉತ್ತಮ ಬೆಳವಣಿಗೆಯೆ. ಆಮ್ ಆದ್ಮಿ ಪಕ್ಷ ಮತ್ತು ಜೆಡಿಎಸ್ ಬಗ್ಗೆ ನನಗೆ ಸಿಂಪಥಿ ಇದೆಯಾದರೂ ಅವುಗಳ ಸ್ಪರ್ಧೆಯಿಂದಾಗಿ ಕಾಂಗ್ರೆಸ್ ಗೆಲ್ಲಲು ಅಡ್ಡಗಾಲಾಗಬಾರದು. ಮೋದಿ ಒಬ್ಬ ಸರ್ವಾಧಿಕಾರಿ ಮತ್ತು ಫ್ಯಾಸಿಸ್ಟ್. ಫ್ಯಾಸಿಸ್ಟ್ ಶಕ್ತಿಗಳು ಯಾವುದೇ ನಾಗರಿಕ ಸಮಾಜಕ್ಕೂ ಗಂಡಾಂತರಕಾರಿ. ಮೋದಿಯ ಗುಜರಾತ್ ಮಾದರಿ ದೇಶವನ್ನು ವ್ಯಾಪಿಸುವ ಅಪಾಯವನ್ನು ಮನಗಂಡೇ ನಾನು ಕಾಂಗ್ರೆಸ್ ಬೆಂಬಲಿಸುತ್ತಿದ್ದೇನೆ...!

ಇದು ಗಿರೀಶ್ ಕಾರ್ನಾಡ್ ತನ್ನ ನಿಲೇಕಣಿಯ ಸಮರ್ಥನೆಗೆ ಬಳಸಿದ ವಾದ ಸರಣಿ. ಜೊತೆಗಿದ್ದ ಮರುಳಸಿದ್ದಪ್ಪ ಕೂಡ ಭ್ರಷ್ಟಾಚಾರಕ್ಕಿಂತ ಫ್ಯಾಸಿಸ್ಟ್ ಶಕ್ತಿಗಳೇ ಹೆಚ್ಚು ಅಪಾಯಕಾರಿ ಎಂಬುದನ್ನು ಒತ್ತಿ ಹೇಳಿದ್ದರು.

ಹಾಗಾದರೆ ನಿಲೇಕಣಿಗಿಂತಲೂ ಆಮ್ ಆದ್ಮಿ ಪಕ್ಷವನ್ನು ಬೆಂಬಲಿಸಬಹುದಿತ್ತಲ್ಲವೇ? ಎಂದು ಟೀವಿ ವರದಿಗಾರ ಕೇಳಿದ ಮರುಪ್ರಶ್ನೆಗೆ ಕಾರ್ನಾಡ್ ಉತ್ತರ ಕೂಡ ಸ್ಪಷ್ಟವಾಗಿತ್ತು. ಆಮ್‌ಆದ್ಮಿ ಪಕ್ಷಕ್ಕೇನಾದರೂ ಗೆಲ್ಲುವ ಸಾಮರ್ಥ್ಯವಿದ್ದಿದ್ದರೆ ನಾನೇಕೆ ಕಾಂಗ್ರೆಸ್ಸನ್ನು ಬೆಂಬಲಿಸುತ್ತಿದ್ದೆ? ಮೋದಿ ಎಂಬ ಅಪಾಯ ಎದುರಿಗಿರುವಾಗ ದೇಶವನ್ನು ನಾಗರ್‌ಯುದ್ಧದಿಂದ ಜನಾಂಗೀಯ ರಕ್ತಪಾತದಿಂದ ಬಚಾವು ಮಾಡುವುದೇ ಬುದ್ಧಿವಂತಿಕೆಯ ಲಕ್ಷಣವೇ ಹೊರತು ಆಮ್‌ಆದ್ಮಿ ಪಾರ್ಟಿಯ ನೆಪದಲ್ಲಿ ನಾವು ಆಷಾಢಭೂತಿಗಳಾಗಬಾರದು. ಆತ್ಮವಂಚನೆ ಮಾಡಿಕೊಳ್ಳಬಾರದು...!

ಇಲ್ಲಿ ಗಿರೀಶ್ ಕಾರ್ನಾಡ್ ಉದ್ದೇಶ ಎಂಥ ದಡ್ಡನಿಗಾದರೂ ಸ್ಪಷ್ಟವಾಗಿ ಅರ್ಥವಾಗುವಂತಿತ್ತು. ಆದರೆ 'ಅಕಟಕಟಾ ಅವಕಾಶವಾದ' ಎಂಬ ಶೀರ್ಷಿಕೆಯಡಿ ವಿಶೇಷ ಚರ್ಚೆಯನ್ನೇ ಶುರುವಿಟ್ಟ ರಾಜೀವ್ ಚಂದ್ರಶೇಖರ್‌ರ ಟೀವಿ ಚಾನಲ್ ತನ್ನ ಉದ್ದೇಶಕ್ಕೆ ಬಳಸಿಕೊಂಡದ್ದು ದಿಗ್ಗಜ ಚಂಪಾ ಮತ್ತು ವಿಚಾರವಾದಿ ಕೋಟಿಗಾನಹಳ್ಳಿ ರಾಮಯ್ಯನವರನ್ನು. ಓರ್ವ ಜ್ಞಾನಪೀಠ ಪ್ರಶಸ್ತಿ ವಿಜೇತರಾಗಿ ಗಿರೀಶ್ ಕಾರ್ನಾಡ್ ಆಮ್ ಆದ್ಮಿ ಪಕ್ಷವನ್ನು ಬಿಟ್ಟು ನಿಲೇಕಣಿ ಮತ್ತು ಕಾಂಗ್ರೆಸ್ಸನ್ನು ಬೆಂಬಲಿಸಿದ್ದು ಎಷ್ಟರಮಟ್ಟಿಗೆ ಸರಿ ಎಂಬುದೇ ಚರ್ಚಾವಸ್ತುವಾಯ್ತು.

ತಮಾಷೆಯೆಂದರೆ ಚಂಪಾ ಕೋಮುವಾದವನ್ನು ವಿರೋಧಿಸುತ್ತಾರೆ. ನರೇಂದ್ರ ಮೋದಿಯನ್ನೂ ಖಂಡಿಸುತ್ತಾರೆ. ಫ್ಯಾಸಿಸ್ಟ್ ರಕ್ತಪಾತದ ವಿರುದ್ಧ ನರಹಂತಕ ಹಿಟ್ಲರ್‌ಗೂ ನರೇಂದ್ರ ಮೋದಿಗೂ ದೊಡ್ಡ ಅಂತರವೇನಿಲ್ಲ ಎಂಬುದನ್ನೂ ಸ್ಪಷ್ಟಪಡಿಸುತ್ತಾರೆ. ಮೋದಿ ಸರ್ಕಾರದ ಅಪಾಯವನ್ನೂ ಅರ್ಥೈಸುತ್ತಾರೆ. ಆದರೆ ಗಿರೀಶ್ ಕಾರ್ನಾಡ್ ಓರ್ವ ಜ್ಞಾನಪೀಠ ಪ್ರಶಸ್ತಿ ವಿಜೇತರಾಗಿ ಕಾಂಗ್ರೆಸ್ ಬೆಂಬಲಿಸಿದ್ದನ್ನು ಮಾತ್ರ ಪ್ರಶ್ನಿಸುತ್ತಾರೆ. ಇನ್ನೂ ಮುಂದುವರಿದು ಚಂಪಾ, ಗಿರೀಶ್ ಕಾರ್ನಾಡ್ ನಿಜಕ್ಕೂ ಜ್ಞಾನಪೀಠ ಪ್ರಶಸ್ತಿಗೆ ಯೋಗ್ಯರಾ? ಎಂದೇ ಪ್ರಶ್ನಿಸುತ್ತಾರೆ.

ಇದೇ ವಾದವನ್ನು ತನ್ನದೇ ವಿತಂಡಶೈಲಿಯಲ್ಲಿ ಕೋಟಿಗಾನಹಳ್ಳಿ ರಾಮಯ್ಯ ಕೆಣಕುತ್ತಾರೆ. ಅವರ ಸಮಸ್ಯೆಯಿರುವುದು ಕಾರ್ನಾಡರ ಜಾತಿಯಲ್ಲಿ. ಅವರು ಬ್ರಾಹ್ಮಣರಾಗಿದ್ದರಿಂದಲೇ ಆಮ್ ಆದ್ಮಿ ಪಕ್ಷವನ್ನು ಬೆಂಬಲಿಸುವ ಬದಲಾಗಿ ನಂದನ್ ನಿಲೇಕಣಿ ನೆಪದಲ್ಲಿ ಕಾಂಗ್ರೆಸ್ಸನ್ನು ಬೆಂಬಲಿಸುತ್ತಿದ್ದಾರೆಂಬುದು ರಾಮಯ್ಯನವರ ಆರೋಪ. ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ಸಮಾನ ಶತ್ರುಗಳಾದ್ದರಿಂದ ಕಾರ್ನಾಡ್ ಫ್ಯಾಸಿಸ್ಟ್ ವಿರೋಧದ ನೆಲೆಯಿಂದ ಕಾಂಗ್ರೆಸ್ಸನ್ನು ಬೆಂಬಲಿಸುವುದು ಸರಿಯಲ್ಲ ಎನ್ನುತ್ತಾರೆ.

ಇಲ್ಲಿ ಚಿದಾನಂದ ಮೂರ್ತಿ ಮತ್ತು ಮಾಸ್ಟರ್ ಹಿರಣ್ಣಯ್ಯ ಗಿರೀಶ್ ಕಾರ್ನಾಡ್‌ರನ್ನು ವಿರೋಧಿಸುವುದಕ್ಕೂ ಚಂಪಾ ಮತ್ತು ಕೋಟಿಗಾನಹಳ್ಳಿ ಥರದವರು ವೈಚಾರಿಕ ನೆಲೆಗಟ್ಟಿನಲ್ಲಿ ಕಾರ್ನಾಡರನ್ನು ಟೀಕಿಸುವುದಕ್ಕೂ ವ್ಯತ್ಯಾಸವಿದೆ. ಏಕೆಂದರೆ ಚಿದಾನಂದ ಮೂರ್ತಿ ಮತ್ತು ಮಾಸ್ಟರ್ ಹಿರಣ್ಣಯ್ಯ ಅನಾದಿಕಾಲದಿಂದಲೂ ಸಂಘ ಪರಿವಾರದಲ್ಲಿ ಗುರುತಿಸಿಕೊಂಡಿದ್ದಾರೆ. ಆದರೆ ಚಂಪಾ ಹಾಗಲ್ಲ. ತತ್ವಶಃ ಕೋಮುವಾದವನ್ನು ವಿರೋಧಿಸಿಕೊಂಡೇ ಬಂದವರು. ಹೇಳಿಕೇಳಿ ಕ್ರಾಂತಿಯೋಗಿ ಬಸವಣ್ಣನವರ ವಚನ ಪ್ರತಿಪಾದಕರು. ವಿಪರ್ಯಾಸವೆಂದರೆ ಕಾರ್ನಾಡ್ ಕಾಂಗ್ರೆಸ್ ಮತ್ತು ನಿಲೇಕಣಿಯನ್ನು ಬೆಂಬಲಿಸಿದ್ದರಲ್ಲಿ ಏನು ತಪ್ಪಿದೆ ಎಂಬ ಪ್ರಶ್ನೆಗೆ ಅವರಲ್ಲೇ ನಿಖರ ಉತ್ತರವಿಲ್ಲ.

ನಾನು ಕೂಡ ಫ್ಯಾಸಿಸ್ಟ್ ಮತ್ತು ಕೋಮುವಾದಿ ಶಕ್ತಿಗಳನ್ನು ಆ ಕಾಲದಿಂದಲೂ ವಿರೋಧಿಸಿಕೊಂಡೇ ಬಂದವನು. ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆ ಯಾವುದಾದರೂ ಒಂದನ್ನು ಆಯ್ಕೆ ಮಾಡಲೇಬೇಕಾದ ಪಕ್ಷದಲ್ಲಿ ನಾನು ಕಾಂಗ್ರೆಸ್ಸನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಕಾಂಗ್ರೆಸ್ ಜಾತ್ಯತೀತ ಪಕ್ಷ. ಆದರೆ ಆಮ್ ಆದ್ಮಿ ಪಕ್ಷ ಮತ್ತು ಜೆಡಿಎಸ್‌ಗಳು ಕಾಂಗ್ರೆಸ್ ಗೆಲುವಿಗೆ ಅಡ್ಡಗಾಲಾಗುತ್ತವೆ ಅಥವಾ ಅನಂತ್‌ಕುಮಾರ್ ಗೆಲ್ಲಲು ನೆರವಾಗುತ್ತವೆ ಎಂದು ಸ್ಪರ್ಧಿಸಲೇಬಾರದು ಎಂದು ಕಾರ್ನಾಡ ಹುಕುಂ ಮಾಡುವುದನ್ನು ನಾನು ವಿರೋಧಿಸುತ್ತೇನೆ ಎನ್ನುತ್ತಾರೆ ಚಂಪಾ.

ಅದರರ್ಥ ಗಿರೀಶ್ ಕಾರ್ನಾಡ್ ಮಾತಿನ ದಾಟಿ ಚಂಪಾರಿಗೆ ಇಷ್ಟವಾಗಲಿಲ್ಲ. ಆದರೆ ಕೋಟಿಗಾನಹಳ್ಳಿ ರಾಮಯ್ಯ ಕಾರ್ನಾಡ್‌ರನ್ನು ಬೇರೆಯದೇ ಕಾರಣಕ್ಕೆ ವಿರೋಧಿಸುತ್ತಾರೆ. ಅವರ ಪ್ರಕಾರ ಕಾರ್ನಾಡ್ ಆಮ್ ಆದ್ಮಿ ಪಕ್ಷವನ್ನು ಬೆಂಬಲಿಸಬೇಕಿತ್ತು!

ಆ ಪ್ರಕಾರವೇ ಕಾರ್ನಾಡ್ ಆಮ್ ಆದ್ಮಿ ಪಕ್ಷವನ್ನು ಬೆಂಬಲಿಸಿದ್ದರೆ ಪರಿಣಾಮ ತಾನೇ ಏನಾಗುತ್ತಿತ್ತು?

ಹೆಚ್ಚೆಂದರೆ ಆಪ್‌ಗೆ ಸಾವಿರ ಮತಗಳು ಅಧಿಕವಾಗಿ ಬೀಳಬಹುದಿತ್ತೇ ಹೊರತು ಅದು ಫಲಿತಾಂಶದ ಮೇಲೆ ಏನಾದರೂ ಪರಿಣಾಮ ಬೀರಲು ಸಾಧ್ಯವಿತ್ತೆ? ಕಳೆದ ಅನೇಕ ಲೋಕಸಭಾ ಚುನಾವಣೆಯಲ್ಲಿ ನಡೆದಂತೆ ಬಿಜೆಪಿ ಅಥವಾ ಅನಂತ್‌ಕುಮಾರ್ ನಿರಾಯಾಸವಾಗಿ ಗೆದ್ದು ಕಾಂಗ್ರೆಸ್‌ನ ಒಂದಷ್ಟು ಮತಗಳು ಕೇಜ್ರಿವಾಲ್ ಪಕ್ಷಕ್ಕೆ ಬರುತ್ತಿತ್ತೇ ಹೊರತು ಬೇರೆ ಯಾವುದೇ ಬದಲಾವಣೆ ಆಗದೆಂಬುದನ್ನು ಅರಿತೇ ಕಾರ್ನಾಡ್ ನಿಲೇಕಣಿ ಪರ ಪ್ರಚಾರಕ್ಕಿಳಿದಿದ್ದಾರೆಂಬ ಕಹಿ ಸತ್ಯವನ್ನು ಕೋಟಿಗಾನಹಳ್ಳಿ ಥರದ ವಿಚಾರವಾದಿಗಳು ಅರ್ಥೈಸಿಕೊಳ್ಳುತ್ತಿಲ್ಲ.

ಬಹುಶಃ ಕಾರ್ನಾಡ್ ನಿಲೇಕಣಿ ಬೆಂಬಲಕ್ಕೆ ನಿಂತಿದ್ದನ್ನು ಕಂಡು ಅಸೂಯೆಗೆ ಬಿದ್ದೇ ಅದರ ವಿರುದ್ಧ ಕಾರ್ಯಕ್ರಮ ಮಾಡಹೊರಟ ಟೀವಿ ಚಾನಲ್‌ನ ಹಂಗಿಗೆ ಬಿದ್ದು ಇಂಥ ವಿಚಾರವಾದಿಗಳು ಕೂಡ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮಾತಾಡುತ್ತಿರಬಹುದೇನೊ.

ಫ್ಯಾಸಿಸ್ಟ್, ಕೋಮುವಾದಿ ರಕ್ತ ರಾಜಕಾರಣದ ನೆಲೆಗಟ್ಟಿನಲ್ಲೇ ಕರ್ನಾಟಕದ ಸಾಹಿತಿ, ಬುದ್ಧಿಜೀವಿ, ಹೋರಾಟಗಾರರೆಲ್ಲ ಬಿಜೆಪಿಯನ್ನು ವಿರೋಧಿಸುವುದು ಮತ್ತು ಅದಕ್ಕೆ ಬೇರೆ ಯಾವುದೇ ಪರ್ಯಾಯವಿಲ್ಲ ಎಂಬ ಒಂದೇ ಕಾರಣಕ್ಕೆ ಕಾಂಗ್ರೆಸ್ಸನ್ನು ಬೆಂಬಲಿಸುತ್ತಿದ್ದಾರೆ ನಿಜ. ಆದರೆ ಕೋಮುವಾದ ಮತ್ತು ಫ್ಯಾಸಿಸ್ಟ್ ಎಂಬ ಶಬ್ದ ಕೇಳಿದ್ದೇ ತಡ, ಕೇಸರಿ ಮೀಡಿಯಾಗಳ ಪಂಡಿತರಿಂದ ಬರುವ ಏಕೈಕ ಪ್ರತಿಕ್ರಿಯೆಯೆಂದರೆ ಅದು ಭ್ರಷ್ಟಾಚಾರ. ಕಾಂಗ್ರೆಸ್ ಭ್ರಷ್ಟಾಚಾರಕ್ಕಿಂತಲೂ ಮೋದಿಯ ಕೋಮುವಾದವೇ ಹೆಚ್ಚು ಸಹ್ಯವಲ್ಲವೆ? ಎಂಬುದು ಇಂಥವರ ಯಥಾವತ್ ಪ್ರಶ್ನೆ.

ಹಾಗೆ ಕಾಂಗ್ರೆಸ್ ಭ್ರಷ್ಟಾಚಾರವನ್ನು ಪ್ರಶ್ನಿಸುವ ಇದೇ ಮೀಡಿಯಾ ಪುಂಗವರಿಗೆ ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದಾಗ ಬಿಜೆಪಿ ನಡೆಸಿದ ಭ್ರಷ್ಟಾಚಾರ, ಮುಖ್ಯಮಂತ್ರಿ ಯಡಿಯೂರಪ್ಪ ಸಮೇತ ಗಾಲಿ ಜನಾರ್ದನ ರೆಡ್ಡಿ, ಕೃಷ್ಣಯ್ಯಶೆಟ್ಟಿ, ಕಟ್ಟಾ ನಾಯ್ಡು ಸೇರಿದಂತೆ ಒಂದು ಹಿಂಡು ಮಂತ್ರಿಗಳು ಭ್ರಷ್ಟಾಚಾರ ಮತ್ತು ಲೂಟಿಯ ಕಾರಣಕ್ಕೆ ಜೈಲು ಪಾಲಾಗಿದ್ದು ನೆನಪಾಗುವುದಿಲ್ಲ!

ಇನ್ನೂ ಫಜೀತಿಯೆಂದರೆ ಬಿಜೆಪಿ ನಾಯಕ ಅನಂತ್‌ಕುಮಾರ್ ವಾಜಪೇಯಿ ಸಂಪುಟದಲ್ಲಿ ಮಂತ್ರಿಯಾಗಿದ್ದಾಗ ಹದಿನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆಂದು ಖುದ್ದು ಪ್ರಮೋದ್ ಮುತಾಲಿಕ್‌ನಂಥ ಹಿಂದೂ ಉಗ್ರನೇ ಪತ್ರಿಕಾಗೋಷ್ಠಿ ಕರೆದು ಆರೋಪ ಮಾಡಿರುವಾಗ ಕೇವಲ ಕಾಂಗ್ರೆಸ್ ಭ್ರಷ್ಟಾಚಾರವನ್ನಷ್ಟೇ ಪ್ರಶ್ನಿಸುವ ಮಾಧ್ಯಮ ಪಂಡಿತರ ಇಬ್ಬಂದಿಯನ್ನು ನಂಬುವವರ್‍ಯಾರು?

ಈ ಹಿನ್ನೆಲೆಯಲ್ಲೇ ಗಿರೀಶ್ ಕಾರ್ನಾಡ್ ಮಾತುಗಳಿಗೆ ಅರ್ಥ ಬರುತ್ತದೆ. ಕಾರ್ನಾಡ್ ವಾದವನ್ನು ಮುಂದುವರಿಸಿದಂತೆ ಮತ್ತೊಬ್ಬ ಜ್ಞಾನಪೀಠ ಪ್ರಶಸ್ತಿ ವಿಜೇತ ಯು.ಆರ್. ಅನಂತ್‌ಮೂರ್ತಿ, ವಿಮರ್ಶಕ ಜಿ.ಕೆ. ಗೋವಿಂದ ರಾವ್, ಸಾಹಿತಿ ಎಸ್.ಜಿ. ಸಿದ್ದರಾಮಯ್ಯ, ವಸುಂಧರಾ ಭೂಪತಿ ಮುಂತಾದವರೆಲ್ಲ ಪತ್ರಿಕಾಗೋಷ್ಠಿ ಕರೆದು ಮೋದಿ ಅಪಾಯದ ವಿರುದ್ಧ ಕಾಂಗ್ರೆಸ್ಸನ್ನು ಬೆಂಬಲಿಸುತ್ತೇವೆಂದು ಘೋಷಿಸಿದ್ದಾರೆ. ಕನ್ನಡದ ಇಬ್ಬರು ಜ್ಞಾನಪೀಠ ಪ್ರಶಸ್ತಿ ವಿಜೇತರೂ ಕಾಂಗ್ರೆಸ್ ಬೆಂಬಲಕ್ಕೆ ನಿಂತಿರುವುದು ಕೇವಲ ನಂದನ್ ನಿಲೇಕಣಿ ಕಾರಣಕ್ಕೋ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಂಗಿಗೋ ಮಾತ್ರವೇ ಆಗಿದ್ದರೆ ಆ ಮಾತು ಬೇರೆ.

ಮೋದಿ ಎಂಬ ಅನಾಹುತ ಮೀಡಿಯಾ ಪ್ರಚಾರದ ಪ್ರಖರದಲ್ಲಿ ಆಪ್ಯಾಯಮಾನವಾಗಿ ಕಂಗೊಳಿಸಬಹುದು. ಆದರೆ ಪರಿಣಾಮದಲ್ಲಿ ಅದರ ವಿನಾಶ ಅರ್ಥವಾಗುವ ಹೊತ್ತಿಗೆ ಕಾಲವೇ ಮಿಂಚಿಹೋಗಬಹುದು. ಅನಂತ್‌ಮೂರ್ತಿ, ಕಾರ್ನಾಡ್ ನಿಲುವನ್ನು ವಿರೋಧಿಸುವವರಿಗೆ ವಿವೇಕ ಹೇಳುವವರ್‍ಯಾರು?

● ರಾ. ಸೋಮನಾಥ್


ನಿಲೇಕಣಿ ಪರ ಪ್ರಚಾರದಲ್ಲಿ ಕಾರ್ನಾಡ್

ಶಿವಮೊಗ್ಗ: ಯಡ್ಡಿ ಬುಡಕ್ಕೆ ಕಾಂಗ್ರೆಸ್ ಕೊಳ್ಳಿ

ಮಂಜುನಾಥ್ ಭಂಡಾರಿ





'ನನಗೆ ಸರಿಯಾದ ಎದುರಾಳಿಗಳೇ ಇಲ್ಲ, ಬಂಗಾರಪ್ಪ ವಿರುದ್ಧ ಗೆಲ್ಲೋದಕ್ಕೆ ನನ್ನ ಮಗ ಪಟ್ಟ ಅರ್ಧದಷ್ಟು ಕಷ್ಟವನ್ನೂ ನಾನು ಪಡಬೇಕಾಗಿಲ್ಲ' ಎಂದೆಲ್ಲ ಹೂಂಕರಿಸಿದ್ದ ಯಡ್ಡಿಯ ಬುಡಕ್ಕೀಗ ಕಾಂಗ್ರೆಸ್ ಬೆಂಕಿಯ ಧಗೆ!

ಗೀತಾ ಶಿವರಾಜ್‌ಕುಮಾರ್ ಪರವಾಗಿ ಸಿನಿಮಾ ಮಂದಿ ಏನೇ ಕೇಕೆ ಹಾಕಿದರೂ ಅದರಿಂದ ತನಗೇನೂ ಆಪತ್ತಿಲ್ಲ ಎಂಬ ಭಂಡ ಧೈರ್ಯದಿಂದಲೇ ನಿರಾಳವಾಗಿದ್ದ ಯಡ್ಡಿಗೆ ಮುಟ್ಟಿ ನೋಡಿಕೊಳ್ಳುವಂಥ ಪೆಟ್ಟು ಕೊಟ್ಟಿದ್ದು ಶಿವಮೊಗ್ಗದ ಕಾಂಗ್ರೆಸ್ ಅಭ್ಯರ್ಥಿ ಮಂಜುನಾಥ್ ಭಂಡಾರಿ!

ಕುಮಾರ್ ಬಂಗಾರಪ್ಪಗೆ ಕಾಂಗ್ರೆಸ್ ಟಿಕೆಟ್ ತಪ್ಪಿದ್ದರಿಂದ ಬಿಜೆಪಿಯ ನೆಮ್ಮದಿಗೆ ಭಂಗವಿಲ್ಲ, ಹೇಗೂ ಮೋದಿ ಅಲೆ ಇದೆಯಾದ್ದರಿಂದ ಶಿವಮೊಗ್ಗದ ಮಟ್ಟಿಗೆ ಯಡ್ಡಿ ಕಷ್ಟಪಡಬೇಕಾಗಿಲ್ಲ, ಅಂತಾ ಬಂಗಾರಪ್ಪನವರನ್ನೇ ತನ್ನ ಮಗನ ಕೈಯಿಂದ ಮಣ್ಣು ಮುಕ್ಕಿಸಿದ್ದ ಯಡಿಯೂರಪ್ಪಗೆ ಈಗ ಬಂಗಾರಪ್ಪನವರ ಮಕ್ಕಳನ್ನೋ, ಶಿಷ್ಯರನ್ನೋ ಸೋಲಿಸುವುದು ಯಾವ ಲೆಕ್ಕ, ಜೊತೆಗೆ ಕೆಜೆಪಿ ಮತ್ತು ಬಿಜೆಪಿ ಒಂದಾಗಿದ್ದರಿಂದಾಗಿ ಯಾರೇನೇ ಬೊಬ್ಬೆಯಿಟ್ಟರೂ ಬಿಜೆಪಿಯನ್ನು ಮಣಿಸಲಾಗುವುದಿಲ್ಲ; ಇತ್ಯಾದಿ ದರ್ಪ, ದುರಹಂಕಾರಕ್ಕೆಲ್ಲ ಸರಿಸಾಟಿಯಾದ ಉತ್ತರ ಕೊಟ್ಟಿದ್ದು ಕೂಡ ಮಂಜುನಾಥ್ ಭಂಡಾರಿಯೆ.

ಏಕೆಂದರೆ ಶಿವಮೊಗ್ಗದ ಮಟ್ಟಿಗೆ ಭಂಡಾರಿಯ ತಾಕತ್ತು, ಕಾರ್ಯತಂತ್ರಗಳೇ ನಿಗೂಢ ಮತ್ತು ಊಹಿಸಲಸಾಧ್ಯ. ಅಬ್ಬರವಿಲ್ಲ, ಅರ್ಭಟವಿಲ್ಲ, ಆರೆಸ್ಸೆಸ್ ಷಡ್ಯಂತ್ರ ಮತ್ತು ವ್ಯವಸ್ಥಿತ ಜಾಲಕ್ಕೆ ಏಟಿಗೆ ಎದುರೇಟು ನೀಡುವ ಶಕ್ತಿಯಿರುವುದು ಭಂಡಾರಿಗೆ ಮಾತ್ರ ಎಂಬುದನ್ನು ಅರಿತೇ ಕಾಂಗ್ರೆಸ್ ಹೈಕಮಾಂಡ್ ಯಡ್ಡಿ ವಿರುದ್ಧ ಭಂಡಾರಿಯನ್ನು ಅಖಾಡಕ್ಕಿಳಿಸಿದ್ದಕ್ಕೆ ಬೇರೆಯದೇ ಕಾರಣವಿತ್ತು. ಅದು ಬಂಗಾರಪ್ಪನವರ ಮಗಳು ಗೀತಾ ಶಿವರಾಜ್‌ಕುಮಾರ್ ಜೆಡಿಎಸ್‌ನಿಂದ ಸ್ಪರ್ಧೆಗಿಳಿದ ಅನಿರೀಕ್ಷಿತ ಪರಿಸ್ಥಿತಿ.

ಭಂಡಾರಿ

ಬಹುಶಃ ಗೀತಾ ಜೆಡಿಎಸ್‌ನಿಂದ ನಿಲ್ಲದೇ ಹೋಗಿದ್ದರೆ ಕಾಂಗ್ರೆಸ್ ಪಾಲಿಗೆ ಕುಮಾರ್ ಬಂಗಾರಪ್ಪ ಅನಿವಾರ್ಯ ಆಯ್ಕೆಯಾಗಬೇಕಿತ್ತು. ಸೊರಬದಲ್ಲಿ ಒಂದಷ್ಟು ಜಾತಿ ಬೆಂಬಲಿಗರ ಹೊರತಾಗಿ ಕುಮಾರ್‌ಗೆ ಕಾಂಗ್ರೆಸ್ಸಿನಲ್ಲಾಗಲಿ, ಶಿವಮೊಗ್ಗದ ರಾಜಕಾರಣದಲ್ಲಾಗಲಿ ದೊಡ್ಡ ಮಟ್ಟದ ಬೆಂಬಲವಾಗಲಿ ಜನಪ್ರಿಯತೆಯಾಗಲಿ ಇಲ್ಲ. ಕಳೆದ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲೇ ಕೊಟ್ಟಿದ್ದ ಪಾರ್ಟಿ ಫಂಡನ್ನು ಕುಮಾರ್ ಚುನಾವಣೆಗೆಂದು ಉಪಯೋಗಿಸಲಿಲ್ಲ. ಇಂಥಾ ಜಿಪುಣನನ್ನು ಕಟ್ಟಿಕೊಂಡು ಏಗುವುದು ಕಷ್ಟ ಎಂದು ಗೊತ್ತಿದ್ದೇ ಬಹುತೇಕ ಕಾಂಗ್ರೆಸ್ ಕಾರ್ಯಕರ್ತರ್ಯಾರೂ ಕುಮಾರ್ ಬೆನ್ನಿಗೆ ನಿಲ್ಲಲಿಲ್ಲ. ಮೇಲುನೋಟಕ್ಕಿದು ಜೆಡಿಎಸ್ ಪರವಾಗಿ ಈಡಿಗರ ಓಟ್ ಬ್ಯಾಂಕ್ ಒಡೆಯದಿರಲಿ ಎಂಬ ಕಾರಣಕ್ಕೆ ಯಡ್ಡಿ ವಿರುದ್ಧ ನಡೆಸಿದ ಒಳತಂತ್ರವೆಂದೇ ಅನೇಕರು ಭಾವಿಸಿದರಾದರೂ ವಾಸ್ತವ ಮಾತ್ರ ಬೇರೆಯದೇ ಆಗಿತ್ತು.

ಆಸಲಿಗೆ ಶಿವಮೊಗ್ಗದ ಮಟ್ಟಿಗೆ ಬಿಜೆಪಿ ವಿರುದ್ಧ ಸೆಣಸಾಡುವ ತಾಕತ್ತು ಮತ್ತು ಪ್ರಾಮಾಣಿಕತೆ ಹೆಚ್ಚಿದ್ದದ್ದು ಮಂಜುನಾಥ್ ಭಂಡಾರಿಯಲ್ಲೇ!

ರಾಜ್ಯ ಯುವ ಕಾಂಗ್ರೆಸ್ ಮುಖಂಡರಾಗಿ, ದೆಹಲಿ ಮಟ್ಟದಲ್ಲಿ ಪಕ್ಷದ ಸಂಘಟನೆಯಲ್ಲಿ ಪಳಗಿ, ಅಧಿಕಾರವಿಲ್ಲದಿದ್ದಾಗ್ಯೂ ಪಕ್ಷದ ಕಾರ್ಯಕರ್ತರನ್ನು ಕಾಪಾಡಿಕೊಂಡು ಬಿಜೆಪಿ ದುರಾಡಳಿತದ ವಿರುದ್ಧ ಹೋರಾಡಿಕೊಂಡೇ ಬಂದಿದ್ದ ಭಂಡಾರಿ 2009ರ ಬಂಗಾರಪ್ಪ ಸೋಲಿಗೆ ಸರಿಯಾದ ಪ್ರತೀಕಾರ ಸಾಧಿಸುವ ಸಕಲ ತಯಾರಿಯನ್ನೂ ಮಾಡಿಕೊಂಡಿದ್ದೇ ಇಷ್ಟೆಲ್ಲಕ್ಕೂ ಕಾರಣವಾಗಿತ್ತು. ಮೇಲುನೋಟಕ್ಕೆ ಬಂಗಾರಪ್ಪ ಮಗಳು ಗೀತಾ ಜೆಡಿಎಸ್‌ನಿಂದ ಶಿವಮೊಗ್ಗಕ್ಕೆ ಧುಮುಕಿದ್ದೇ ದೊಡ್ಡ ಸುದ್ದಿಯಾಗಿತ್ತು ನಿಜ. 2009ರ ಚುನಾವಣೆಯಲ್ಲಿ ಮಗ ರಾಘವೇಂದ್ರನನ್ನು ನಿಲ್ಲಿಸಿ ಬಂಗಾರಪ್ಪನವರನ್ನು ಸೋಲಿಸಿದ್ದಕ್ಕೆ ಈ ಸಾರಿ ಈಡಿಗರೆಲ್ಲ ನಿಸ್ಸಂಶಯವಾಗಿ ಮಗಳು ಗೀತಾರನ್ನು ಬೆಂಬಲಿಸುತ್ತಾರೆಂಬ ಲೆಕ್ಕಾಚಾರ ಕೂಡ ಸರಿಯಾಗೇ ಇತ್ತು.

2009ರ ಕಪಟ

ಆದರೆ 2009ರಲ್ಲಿ ಮಗ ರಾಘು ವಿರುದ್ಧ ಬಂಗಾರಪ್ಪ ಸೋತಾಗಲೂ ಇದೇ ಈಡಿಗರೆಲ್ಲ ಸಾರಾಸಗಟಾಗಿ ಬಂಗಾರಪ್ಪನವರನ್ನು ಬೆಂಬಲಿಸಿದ್ದರಲ್ಲ! ಸಾರಾಸಗಟಾಗಿ ಈಡಿಗರ ಮತ ಪಡೆದೂ ಬಂಗಾರಪ್ಪ ಸೋತರೆಂದರೆ ಈಗ ಮಗಳು ಗೀತಾ ತಾನೆ ಯಾವ ಮಾಯೆಯಿಂದ ಯಡ್ಡಿಯನ್ನು ಮಣಿಸಲು ಸಾಧ್ಯ? ಅದೂ ಜೆಡಿಎಸ್ ಮೂಲಕ?

ಹಾಗೆ ನೋಡಿದರೆ 2009ರಲ್ಲಿ ಬಂಗಾರಪ್ಪ ವಿರುದ್ಧ ಯಡ್ಡಿ ಮಗ ರಾಘು ಗೆದ್ದದ್ದು 50 ಸಾವಿರ ಮತಗಳ ಭಾರೀ ಅಂತರದಿಂದಲೇ. ಬಂಗಾರಪ್ಪ ಆವತ್ತು 4 ಲಕ್ಷದ 22 ಸಾವಿರದಷ್ಟು ಮತ ಪಡೆದರೆ ಯಡ್ಡಿ ಮಗ ರಾಘು ಸರಿಸುಮಾರು 4 ಲಕ್ಷದ 70 ಸಾವಿರದಷ್ಟು ಓಟು ಗಿಟ್ಟಿಸಿದ್ದ. ಆಗ ಜೆಡಿಎಸ್ ಬಂಗಾರಪ್ಪನವರನ್ನು ಬೆಂಬಲಿಸಿತ್ತು. ಕಾಂಗ್ರೆಸ್ ಮತ್ತು ಜೆಡಿಎಸ್ ಎರಡೂ ಸೇರಿದರೂ ಸೋಲಿಸಲಾಗದ ಬಿಜೆಪಿಯನ್ನು ಇವತ್ತು ಕಾಂಗ್ರೆಸ್ ಮತ್ತು ಜೆಡಿಎಸ್ ಬೇರೆಬೇರೆಯಾಗಿ ನಿಂತು ಸೋಲಿಸುವುದುಂಟೆ?

ಇಂಥಾದ್ದೊಂದು ಪ್ರಶ್ನೆ ಸಹಜವಾಗೇ ಉದ್ಭವಿಸುತ್ತದೆ ನಿಜ. ಆದರೆ ಆಗಿನ ಪರಿಸ್ಥಿತಿಗೂ ಈಗಿನ ಸ್ಥಿತಿಗತಿಗೂ ಅಜಗಜಾಂತರ ವ್ಯತ್ಯಾಸವಿದೆ. ಆಗ ಬಿಜೆಪಿ ಸರ್ಕಾರವಿತ್ತು, ತಂದೆ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದರು. ಪೊಲೀಸ್ ಬಲವನ್ನು ಬಳಸಿಕೊಂಡೇ ಯಡ್ಡಿ ರೊಕ್ಕ ಹಂಚಿದ್ದುಂಟು. ದುಡ್ಡಿನ ಆಮಿಷಕ್ಕೆ ಬಿದ್ದ ಭದ್ರಾವತಿ ಶಾಸಕ ಅಪ್ಪಾಜಿಗೌಡ ಆವತ್ತು ಯಡ್ಡಿ ಪರ ನಿಂತು ಬಿಜೆಪಿಗೆ ಓಟು ಹಾಕಿಸಿದ್ದು, ಹರತಾಳು ಹಾಲಪ್ಪ ಮತ್ತು ಬೇಳೂರು ಗೋಪಾಲಕೃಷ್ಣ ಆಗಿನ್ನೂ ಶಾಸಕರಾಗಿದ್ದರಿಂದ ದೊಡ್ಡ ಮಟ್ಟದಲ್ಲಿ ಈಡಿಗರ ಓಟನ್ನು ಬಿಜೆಪಿ ಪರ ಸೆಳೆದದ್ದು, ಸಾಲದ್ದಕ್ಕೆ ಒಂದು ಗುಂಪಿನ ಮುಸ್ಲಿಮರೇ ಯಡ್ಡಿ ಪರ ಓಟು ಹಾಕಿದ್ದೆಲ್ಲವೂ ಬಂಗಾರಪ್ಪ ಮತ್ತು ಕಾಂಗ್ರೆಸ್ ಪಾಲಿಗೆ ಮುಳುವಾಗಿತ್ತು.

ಲಿಂಗಾಯತರ ಪ್ರಾಬಲ್ಯ!

ಆದರೆ ಈಗಿನ ಪರಿಸ್ಥಿತಿ ಹಾಗಿಲ್ಲ. ಶಿವಮೊಗ್ಗ ಲೋಕಸಭಾ ಕ್ಷೇತ್ರದ ಒಟ್ಟು 8 ವಿಧಾನಸಭಾ ಕ್ಷೇತ್ರಗಳ ಪೈಕಿ ಶಿಕಾರಿಪುರದ ಹೊರತಾಗಿ ಬೇರೆಲ್ಲೂ ಬಿಜೆಪಿ ಗೆದ್ದಿಲ್ಲ. ಮಿಕ್ಕಂತೆ ಶಿವಮೊಗ್ಗ ಗ್ರಾಮಾಂತರ, ಸೊರಬ ಮತ್ತು ಭದ್ರಾವತಿಯಲ್ಲಿ ಗೆದ್ದ ಮೂವರೂ ಜೆಡಿಎಸ್ ಶಾಸಕರೇ. ಈ ಬಾರಿ ಕಾಂಗ್ರೆಸ್ ಬೇರೆಲ್ಲ ಪಕ್ಷಗಳಿಗಿಂತಲೂ ಸಮರ್ಥ ಮತ್ತು ಅನುಕೂಲಕರ ಸ್ಥಿತಿಯಲ್ಲಿದೆ. ತೀರ್ಥಹಳ್ಳಿಯಿಂದ ಕಾಂಗ್ರೆಸ್ ಶಾಸಕರಾಗಿ ಗೆದ್ದ ಕಿಮ್ಮನೆ ರತ್ನಾಕರ್ ಸದ್ಯ ಶಿವಮೊಗ್ಗದ ಉಸ್ತುವಾರಿ ಮಂತ್ರಿ. ಸಾಗರದಿಂದ ಗೆದ್ದು ಕಾಗೋಡು ತಿಮ್ಮಪ್ಪ ಸ್ಪೀಕರ್ ಪದವಿಗೇರಿದ್ದಾರೆ. ಶಿವಮೊಗ್ಗದ ನಗರದ ಪ್ರಸನ್ನಕುಮಾರ್ ಮತ್ತು ಬೈಂದೂರು ಶಾಸಕ ಗೋಪಾಲ ಪೂಜಾರಿ ಸೇರಿದರೆ ಕಾಂಗ್ರೆಸ್ ಶಾಸಕರ ಸಂಖ್ಯೆ ನಾಲ್ಕಾಗುತ್ತದೆ.

ಇದು ಕಾಂಗ್ರೆಸ್ ಅಭ್ಯರ್ಥಿ ಮಂಜುನಾಥ್ ಭಂಡಾರಿಗಿರುವ ಅತೀ ದೊಡ್ಡ ಅನುಕೂಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಆಯಾ ಪಕ್ಷಗಳು ಪಡೆದ ಒಟ್ಟು ಮತಗಳಿಗೆ ಹೋಲಿಸಿದರೆ ಬಿಜೆಪಿ ಮತ್ತು ಕೆಜೆಪಿ ಒಂದಾಗಿರುವುದರಿಂದ ಕೆಜೆಪಿ ಗಿಟ್ಟಿಸಿದ 2.12 ಲಕ್ಷ ಮತ್ತು ಬಿಜೆಪಿ ಗಳಿಸಿದ 95 ಸಾವಿರ ಮತಗಳು ಸೇರಿಬಿಟ್ಟರೆ ಸಲೀಸಾಗಿ ಬಿಜೆಪಿ ಮೂರು ಲಕ್ಷಕ್ಕೂ ಅಧಿಕವಾಗಲೇಬೇಕು. ಹಾಗೇ ಕಾಂಗ್ರೆಸ್ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗಳಿಸಿದ 2.80 ಲಕ್ಷ ಮತ್ತು ಜೆಡಿಎಸ್ ಪಡೆದ 2.60 ಲಕ್ಷ ಮತಗಳು ಈಗಲೂ ಅದೇ ಪ್ರಮಾಣದಲ್ಲಿ ಬೀಳುತ್ತವಾ?

ಶಿವಮೊಗ್ಗ ಲೋಕಸಭಾ ಕ್ಷೇತ್ರದ ಒಟ್ಟು 15 ಲಕ್ಷದಷ್ಟು ಮತದಾರರ ಪೈಕಿ ಅತೀದೊಡ್ಡ ಸಂಖ್ಯೆಯಲ್ಲಿರುವುದು ಈಡಿಗರೆ. ಸರಿಸುಮಾರು 2.80 ಲಕ್ಷ ಈಡಿಗ ಮತಗಳಲ್ಲದೆ ಎರಡನೇ ದೊಡ್ಡ ಗುಂಪಾದ ಲಿಂಗಾಯತ ಮತದಾರರ ಸಂಖ್ಯೆ 2.50 ಲಕ್ಷ, 2 ಲಕ್ಷದಷ್ಟು ಮುಸ್ಲಿಮರು, 1.80 ಲಕ್ಷದಷ್ಟು ಬ್ರಾಹ್ಮಣರು, ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಸೇರಿದ 2.30 ಲಕ್ಷ ಮತಗಳು, 1.50 ಲಕ್ಷದಷ್ಟಿರುವ ಒಕ್ಕಲಿಗರು, 30 ಸಾವಿರ ಕುರುಬರು, 40 ಸಾವಿರ ಬಂಟರು;

▶▶ 12

ಗಾಡಿಕೊಪ್ಪದ ಶರಾವತಿ ಡೆಂಟಲ್ ಕಾಲೇಜು



ಮಧು ಅಕ್ಕನನ್ನು ಬಾವಿಗೆ ತಳ್ಳಿ ಆಳ ನೋಡಿದ್ದು!



ಗೀತಾ ಪರ ಶಿವಣ್ಣನ ಪ್ರಚಾರ

ಒಂದು ಹಂತದಲ್ಲಿ ವಿಪರೀತ ನಿರೀಕ್ಷೆ ಹುಟ್ಟಿಸಿದ್ದ ಗೀತಾ ಶಿವರಾಜ್‌ಕುಮಾರ್ ಸ್ಪರ್ಧೆಗೀಗ ಹಿಂದಿನ ತೀವ್ರತೆಯಿಲ್ಲ. ರಾಜ್ ಕುಟುಂಬದ ಸೊಸೆ, ಬಂಗಾರಪ್ಪ ಮಗಳು, ಶಿವರಾಜ್‌ಕುಮಾರ್ ಪತ್ನಿ ಇತ್ಯಾದಿ ಏನೇ ಹೆಗ್ಗಳಿಕೆ ಗೀತಾ ಬೆನ್ನಿಗಿದ್ದರೂ ಶಿವಮೊಗ್ಗದ ಮಟ್ಟಿಗದು ಪ್ರಯೋಜನಕ್ಕೆ ಬರಬೇಕಲ್ಲ?

ಮೊದಮೊದಲು ಜೆಡಿಎಸ್ ಮತ್ತು ಗೀತಾ ಪರವಾಗಿ ವಿಚಿತ್ರ ಅಲೆಯಿತ್ತು ನಿಜ. ಈಡಿಗರೆಲ್ಲ ಒಗ್ಗಟ್ಟಾಗಿಯೇ ಗೀತಾರನ್ನು ಬೆಂಬಲಿಸುತ್ತಾರೆಂಬ ನಿರೀಕ್ಷೆಯೂ ಇತ್ತು. ಶಿವಮೊಗ್ಗ ಗ್ರಾಮಾಂತರದ ಶಾಸಕಿ ಶಾರದಾ ಪೂರ್‍ಯಾನಾಯಕ್, ಭದ್ರಾವತಿ ಅಪ್ಪಾಜಿ ಮತ್ತು ಸೊರಬದ ಮಧು ಬಂಗಾರಪ್ಪ ಸೇರಿ ಮೂವರೂ ಜೆಡಿಎಸ್ ಶಾಸಕರು ನಿಂತರೆಂದರೆ ಯಡ್ಡಿ ವಿರುದ್ಧ ಒಂದು ಕೈ ನೋಡೇಬಿಡುತ್ತಾರೆಂಬ ಭರವಸೆಯೂ ಮೂಡಿತ್ತು.

ಆದರೆ ಗೀತಾ, ಮಧು ಇಷ್ಟೆಲ್ಲವನ್ನೂ ಸಿನಿಮೀಯವಾಗಿ ಪರಿಗಣಿಸಿಬಿಟ್ಟರು. ಹೇಗೂ ಶಿವಣ್ಣನನ್ನು ನೋಡಲು ಜನ ಬಂದೇಬರುತ್ತಾರೆ. ಶಿವಣ್ಣನ ಮರ್ಜಿಗೆ ಬಿದ್ದು ನಟ ಪ್ರೇಮ್ ಸೇರಿದಂತೆ ಇನ್ನೂ ಕೆಲ ನಟ-ನಟಿಯರು ಶಿವಮೊಗ್ಗಕ್ಕೆ ಬಂದರೆಂದರೆ ಸಾವಿರಾರು ಜನ ಖಂಡಿತ ಸೇರುತ್ತಾರೆ. ಈ ರೀತಿ ಸಿನಿಮಾ ನಟರು, ಹೀರೋ-ಹೀರೋಯಿನ್‌ಗಳೆಲ್ಲ ಸೇರಿದರೆಂದರೆ ಸಹಜವಾಗೇ ಜೆಡಿಎಸ್ ಮತ್ತು ಗೀತಾ ಪರ ಅಲೆಯೇಳುತ್ತದೆ ಎಂಬುದು ಜೆಡಿಎಸ್ ಲೆಕ್ಕಾಚಾರ.

ಯಡವಟ್ಟಾಗಿದ್ದೇ ಇಲ್ಲಿ. ಸಿನಿಮಾನಟರನ್ನು ನೋಡಲೆಂದು ಸೇರುವವರೆಲ್ಲ ಮತದಾರರೆಂದೂ ಸೇರಿದ ಸಹಸ್ರಾರು ಮಂದಿಯೆಲ್ಲ ಮತಗಳಾಗಿ ಪರಿವರ್ತನೆಯಾಗುತ್ತಾರೆಂದು ಏನು ಗ್ಯಾರಂಟಿ?

ಸಿನಿಮಾ ಗುಂಗಿಗೆ ಬಿದ್ದ ಗೀತಾ ಶಿವರಾಜ್‌ಕುಮಾರ್‌ಗೆ ಚುನಾವಣಾ ತಂತ್ರಗಾರಿಕೆ ಗೊತ್ತಿಲ್ಲ. ಮಧು ಬಂಗಾರಪ್ಪ ತಂದೆಯಂತೆ ಹುಟ್ಟು ಹೋರಾಟಗಾರನಲ್ಲ. ಮತಗಳಿಕೆಯ ನಿಪುಣನೂ ಅಲ್ಲ. ಹುಟ್ಟಾ ಹುಂಬುತನ ಮತ್ತು ಆತುರಗೇಡಿಬುದ್ಧಿಯಿಂದಾಗಿ ಮಧು ತನ್ನದೇ ಈಡಿಗ ಸಮೂಹದ ಆತ್ಮವಿಶ್ವಾಸವನ್ನೂ ಗಳಿಸಲಾಗಲಿಲ್ಲ. ಹೀಗಾಗಿ ಈಡಿಗರಲ್ಲೇ ಒಗ್ಗಟ್ಟು ಸಾಧ್ಯವಾಗಲಿಲ್ಲ. ಯಾವತ್ತು ಈಡಿಗರಲ್ಲೇ ಬಿಜೆಪಿ, ಕಾಂಗ್ರೆಸ್, ದಳ ಎಂದು ಮೂರು ವಿಭಾಗಗಳಾದವೋ ಸಹಜವಾಗೇ ಜೆಡಿಎಸ್ ಬೆಂಬಲಕ್ಕೆ ನಿಲ್ಲಬೇಕಿದ್ದ ಮುಸ್ಲಿಮರಿಗೂ ಧೈರ್ಯ ಸಾಲಲಿಲ್ಲ.

ಈ ಎಲ್ಲಾ ಬೆಳವಣಿಗೆಗಳು ಪರೋಕ್ಷವಾಗಿ ವರದಾನವಾಗಿದ್ದು ಕಾಂಗ್ರೆಸ್ ಅಭ್ಯರ್ಥಿ ಮಂಜುನಾಥ್ ಭಂಡಾರಿಗೆ. ಇತ್ತೀಚಿನ ಮಾಹಿತಿಗಳೇ ಹೇಳುವಂತೆ ಬಿಜೆಪಿ ಗೆಲ್ಲುವುದನ್ನು ಸಹಿಸದ ಕೆಲ ಜೆಡಿಎಸ್ ಮುಖಂಡರು ಕೂಡ ಕಾಂಗ್ರೆಸ್ ಬಾವುಟ ಹಿಡಿದಿದ್ದಾರೆ. ಗೀತಾ ಶಿವರಾಜ್‌ಕುಮಾರ್ ಬಂಗಾರಪ್ಪನವರ ಮಗಳಿರಬಹುದು, ಆದರೆ ಗೆದ್ದ ನಂತರ ಶಿವಮೊಗ್ಗದಲ್ಲೇ ಹೇಗೆ ಉಳಿಯಲು ಸಾಧ್ಯ? ಸಣ್ಣಪುಟ್ಟ ಕಷ್ಟ ಹೇಳಿಕೊಳ್ಳುವುದಕ್ಕೂ ಜನ ಅವರನ್ನು ಹುಡುಕಿಕೊಂಡು ಬೆಂಗಳೂರಿಗೆ ಹೋಗಲು ಸಾಧ್ಯವೇ? ಅಷ್ಟಕ್ಕೂ ಸಿನಿಮಾ ಮಂದಿ ರಾಜಕಾರ್ಣಿಯಾಗಿ ಅಹೋರಾತ್ರಿ ಜನರ ಕಷ್ಟಕಾರ್ಪಣ್ಯಕ್ಕೆ ಸ್ಪಂದಿಸುವುದು ಎಲ್ಲಾದರೂ ಉಂಟಾ?

ಇಂಥ ಪ್ರಶ್ನೆಗಳೇ ಕಾಂಗ್ರೆಸ್ ಸಾಧ್ಯತೆಯನ್ನು ನಿಚ್ಚಳವಾಗಿಸಿವೆ. ಸಿನಿಮಾ ನಟರನ್ನು ನೋಡಲು ಬಂದವರೆಲ್ಲ ಮತಗಳಾಗಿ ರೂಪುಗೊಳ್ಳುವುದು ಸಾಧ್ಯವಿಲ್ಲ ಎಂಬ ಕಾಮನ್‌ಸೆನ್ಸ್ ಕೂಡ ಇಲ್ಲದ ಮಧು ಬಂಗಾರಪ್ಪ ಅಕ್ಕನನ್ನು ಬಾವಿಗೆ ತಳ್ಳಿ ಆಳ ನೋಡಲು ಹೊರಟಂತಿದೆ!

ಮಂಡ್ಯ: ಇಲ್ಲದ ಮೋದಿ ಅಲೆಗೆ ಶಿವಲಿಂಗಯ್ಯನ ಜೇಬು ಬಲಿ!

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ...ರ್ಯಾ ಹಾಗೂ ಜೆಡಿಎಸ್‌ನ ಪುಟ್ಟರಾಜು ನಡುವೆ ನೇರ ...ಣಾಹಣಿ ನಡೆಯುತ್ತಿದ್ದು, ಬಿಜೆಪಿ ಅಭ್ಯರ್ಥಿ ...ವಲಿಂಗಯ್ಯನಿಗೆ ಥರ್ಡ್ ಪ್ಲೇಸ್ ನಿಕ್ಕಿಯಾಗಿ ಹೋಗಿದೆ. ...ಲ್ಲಿರುವ ಹಣಬಲದಿಂದಲೇ ರಾಜಕೀಯ ಅಧಿಕಾರವನ್ನು ...ಡುಕೊಳ್ಳುತ್ತಿರುವ ಶಿವಲಿಂಗಯ್ಯ ಕೋಟಿ ಕೋಟಿ ...ತ್ತ ಚೆಲ್ಲಿ ಕೋಮುವಾದಿ ಪಕ್ಷವಾದ ಬಿಜೆಪಿಯಿಂದ ...ದ್ದಿ ಎಂಪಿಯಾಗುವ ಹಗಲುಕನಸು ಕಾಣುತ್ತಿದ್ದಾನೆ.

...ತತ್ವ, ಸಿದ್ಧಾಂತ, ಬದ್ಧತೆ ಯಾವೊಂದು ಇಲ್ಲದ ...ಲಿಂಗಯ್ಯ ಕೋಮುವಾದಿ ಬಿಜೆಪಿ ಸೇರಿದ್ದನ್ನು ಕಂಡ ...ಯ ಜನ ಪಕ್ಕಾ ಅವಕಾಶವಾದಿ ಎಂದು ಜರಿಯುತ್ತಿದ್ದರೆ, ... ತೊಟ್ಟು ಲಾಠಿ ತಿರುಗಿಸುತ್ತಾ ಹತ್ತಾರು ವರ್ಷ ...ಷಿಯನ್ನು ಕಟ್ಟಿಬೆಳೆಸಿದ ಕಾರ್ಯಕರ್ತರು ಇವನ್ನೆಲ್ಲಿಂದ ...ಮ ವಕ್ಕರಿಸಿದ ಅಂತ ಶಾಪ ಹಾಕುತ್ತಿದ್ದಾರೆ. 'ದೇಶಾದ್ಯಂತ ...ಸುವ ನರೇಂದ್ರ ಮೋದಿ ಅಲೆಯಲ್ಲಿ ನೀವು ಖಂಡಿತಾ ...ತ್ತೀರಿ' ಎನ್ನುತ್ತಾ ತಲೆ ಸವರಿ ಮೂರು ಮುಕ್ಕಾಲಷ್ಟಿರುವ ... ಪಡೆ ಶಿವಲಿಂಗಯ್ಯನಲ್ಲಿರುವ ಹಡಬಿಟ್ಟಿ ದುಡ್ಡನ್ನು ...ಳಿಸಲು ನಿಂತಿದೆ.

ಯಾರೀತ ಶಿವಲಿಂಗಯ್ಯ

...ಮಂಡ್ಯದ ತಾವರೆಗೆರೆಯ ಲೇಟ್ ಬೋರೇಗೌಡ ...ಯವರ ಮಗನಾದ ಶಿವಲಿಂಗಯ್ಯ 20 ವರ್ಷಗಳ ...ದೆ ಏನೇನೂ ಇರದಿದ್ದ ಆಸಾಮಿ. 63 ವರ್ಷ ವಯಸ್ಸಿನ ...ಲಿಂಗಯ್ಯ ಈಗ ನೂರಾರು ಕೋಟಿಗಳ ಒಡೆಯ. ...74ರಲ್ಲಿ ಮಂಡ್ಯದ ಪೀಇಎಸ್ ಇಂಜಿನಿಯರಿಂಗ್ ...ಲೇಜಿನಲ್ಲಿ ಪದವಿ ಪಡೆದು ಎಂಎಸ್ ಮಾಡಿದ ...ಲಿಂಗಯ್ಯ ಅಮೆರಿಕದಲ್ಲಿ ಪಿಎಚ್‌ಡಿ ಮಾಡಿಕೊಂಡು ...ಮ ತಾನೇ ಓದಿದ್ದ ಇಂಜಿನಿಯರಿಂಗ್ ಕಾಲೇಜಿನಲ್ಲಿ ...ಸ್ಟೆಂಟ್ ಪ್ರೊಫೆಸರ್ ಆಗಿ ಸೇರಿಕೊಂಡ.

...ಆದಿಚುಂಚನಗಿರಿಯ ಬಾಲಗಂಗಾಧರ ಸ್ವಾಮಿ ಜೊತೆ ... ಚಿಕ್ಕಮಗಳೂರಿನಲ್ಲಿ ಆದಿಚುಂಚನಗಿರಿ ಇಂಜಿನಿ...ರಿಂಗ್ ಕಾಲೇಜು ಸ್ಥಾಪಿಸಿ ಅದಕ್ಕೆ ಪ್ರಾಂಶುಪಾಲರೂ ...ದ್ದ ಶ್ರೀರಂಗಪಟ್ಟಣದ ಸಬ್ಬನಕುಪ್ಪೆಯ ಎಸ್.ಡಿ. ...ನಾಜ್‌ರ ಮಗಳಾದ ಮೀರಾಳನ್ನು ಮೆಚ್ಚಿ ಮದುವೆ ...ದಾಗ ಶಿವಲಿಂಗಯ್ಯನ ಬಳಿ ಅಂತಹ ಆಸ್ತಿಯೇನೂ ...ಲ್ಲ.

...1995ರವರೆಗೂ ಇದೇ ಪರಿಸ್ಥಿತಿ ಇತ್ತು. ಅತ್ತ ...ಲಿಂಗಯ್ಯ ಚೇತಕ್ ಸ್ಕೂಟರ್ ಏರಿಕೊಂಡು ಪೀಇಎಸ್ ...ಲೇಜಿಗೆ ತೆರಳಿ ಪಾಠ ಹೇಳುತ್ತಿದ್ದರೆ, ಇತ್ತ ಮಡದಿ ...ರಾ ಶಿವಲಿಂಗಯ್ಯ ಲೂನಾ ಏರಿ ಪೀಇಎಸ್ ಕಾನೂನು ...ಲೇಜಿನ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆ ಹೇಳಿಕೊಡು...ರು. ಈ ಮಧ್ಯೆ ಶಿವಲಿಂಗಯ್ಯನನ್ನು ಡೆಪ್ಯೇಶನ್ ಮೇಲೆ ...ರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ...ರ್ಯದರ್ಶಿಯಾಗಿ ನೇಮಿಸಲಾಗಿತ್ತು. ಅಲ್ಲೊಂದಷ್ಟು ...ದ ರುಚಿ ಕಂಡ ಶಿವಲಿಂಗಯ್ಯ ನಿಧಾನವಾಗಿ ಅದೇ ...ಸರ ಮಾಲಿನ್ಯ ಮಂಡಳಿ ಛೇರ್‌ಮನ್ ಗದ್ದುಗೆಗೇ ...ಸಿದ್ದ. ಛೇರ್ಮನ್ ಆಗಿದ್ದೇ ತಡ ಆತನ ಮನೆಯಲ್ಲಿ ... ತಾಂಡವವಾಡತೊಡಗಿದಳು. ತನ್ನ ಮೂರು ವರ್ಷಗಳ ...ಧಿ ಮುಗಿಯುವುದರೊಳಗಾಗಿ ಮಂಡಳಿಯನ್ನೇ ಮಾಲಿನ್ಯ ...ಸಿಟ್ಟ ಶಿವಲಿಂಗಯ್ಯ ಸಿಕ್ಕಾಪಟ್ಟೆ ರೊಕ್ಕ ಬಾಚಿಕೊಂಡ ...ದೆ ಅದೇ ದುಡ್ಡನ್ನು ಶಿಕ್ಷಣ ಸಂಸ್ಥೆ, ಕಲ್ಯಾಣಮಂಟಪ, ...ವೇಶನ, ಜಮೀನು ಇತ್ಯಾದಿ ವ್ಯವಹಾರಗಳಲ್ಲಿ ತೊಡಗಿಸಿ ...ಕೋಟ್ಯಾಂತರ ರೊಕ್ಕ ಮಾಡಿಕೊಂಡ.

ಮೀರಾ ಎಂಬ ನಾಜೂಕಮ್ಮ

...ಶಿವಲಿಂಗಯ್ಯನ ಮಡದಿ ಮೀರಾ ಮೇಡಂ ಬಲು ...ಜೂಕಿನ ಹೆಂಗಸು. 1995ರಲ್ಲಿ ಹಳೆ ಲೂನಾ ಮೇಲೆ ...ಎಸ್ ಕಾನೂನು ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದ ...ರಾ ಪತಿಯ ಹಣದಲ್ಲಿ ಮಂಡ್ಯ ಕಂಪ್ಯೂಟರ್ ಸೆಂಟರ್ ...ಪಿ ಸಾಕಷ್ಟು ಹಣ ಮಾಡಿದರು. ಸರ್ಕಾರದ ವಿವಿಧ ...ಖೆಗಳ ನೌಕರರಿಗೆ, ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ...ಪ್ಯೂಟರ್ ಶಿಕ್ಷಣ ಕೊಡಿಸುವ ಸ್ಕೀಂಗಳನ್ನು ತಮಗೇ ...ಜೂರು ಮಾಡಿಕೊಂಡು ದುಡ್ಡು ಮಾಡಿದರು. ರೆಡ್‌ಕ್ರಾಸ್ ... ರೋಟರಿ, ಸ್ಕೌಟ್ಸ್ ಅಂಡ್ ಗೈಡ್ಸ್, ಲಯನ್ಸ್, ... ಅಂಗವಿಕಲರ ಪುನರ್ವಸತಿ ಕೇಂದ್ರ, ಎಸ್‌ಬಿ ...ಮೀಣಾಭಿವೃದ್ಧಿ ಸಂಸ್ಥೆ ಮೊದಲಾದ ಹತ್ತಾರು ...-ಸಂಸ್ಥೆಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ-... ನಾನಾ ವಿವಿಧ ಹುದ್ದೆಗಳಲ್ಲಿರುವ ಮೀರಾ ಮೇಡಂ ...ತ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರೂ ...ದ್ದಾರೆ. ರೆಡ್‌ಕ್ರಾಸ್ ಹಾಗೂ ಎಸ್.ಬಿ. ಗ್ರಾಮೀಣಾಭಿವೃದ್ಧಿ ...ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ...ಜನೆಗಳ ಹಣ ಹರಿದುಬರುತ್ತದೆ. ರೆಡ್‌ಕ್ರಾಸ್ ಸಂಸ್ಥೆಗೆ ...ಧಿಕಾರಿಗಳೇ ಅಧ್ಯಕ್ಷರಾಗಿದ್ದು, ಮೀರಾ ಮೇಡಂ ...ಪಾಧ್ಯಕ್ಷೆ.

...ಪೋಲಿಯೋ ಅಭಿಯಾನ, ರಕ್ತದಾನ ಶಿಬಿರ ಸೇರಿದಂತೆ



ವಿವಿಧ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳುವ ರೆಡ್‌ಕ್ರಾಸ್ ಸಂಸ್ಥೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ಹಣ ಕೊಡುತ್ತದೆ. ಪ್ರತಿ ಆರು ತಿಂಗಳು, ವರ್ಷಕ್ಕೊಮ್ಮೆ ಹತ್ತಾರು ಲಕ್ಷ ಹಣ ಬಿಲ್ ಮಾಡುವ ಮೇಡಂ ಮೀರಾ, ರಾಮ-ಕೃಷ್ಣನ ಲೆಕ್ಕ ತೋರಿಸುತ್ತಾರೆಂಬುದು ಆರೋಗ್ಯ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿಗಳ ದೂರು. ಅದಕ್ಕಾಗಿಯೇ ಮೀರಾ ಮೇಡಂ ರೆಡ್‌ಕ್ರಾಸ್‌ಗೆ ಹೊಸ ಸದಸ್ಯತ್ವ ಮಾಡಿಕೊಳ್ಳುತ್ತಿಲ್ಲ ಎಂಬುದು ಜನಸಾಮಾನ್ಯರ ಆರೋಪವಾಗಿದೆ.

ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಮನೆಗೆ ಆಹ್ವಾನಿಸಿ ಬೆಳ್ಳಿತಟ್ಟೆಯಲ್ಲಿ ತಾವೇ ಸ್ವತಃ ಅತಿಥಿ ಸತ್ಕಾರ ಮಾಡುವ ಮೀರಾ ಮೇಡಂ ಅಧಿಕಾರಿಗಳಿಗೆ ದುಬಾರಿ ಗಿಫ್ಟ್ ಕೊಟ್ಟು ತಮ್ಮ ಪರವಿರುವಂತೆ ನೋಡಿಕೊಳ್ಳುತ್ತಾರೆ. ಜಿಲ್ಲೆಯ ಅಧಿಕಾರಿಗಳ ಬಗ್ಗೆ ಮೀರಕ್ಕನಿಗೆ ತುಸು ಹೆಚ್ಚೇ ಪ್ರೀತಿ. ಮೇಡಂ ಅಧ್ಯಕ್ಷತೆಯಲ್ಲಿ ಕೆ.ಆರ್.ಪೇಟೆ ಹಾಗೂ ಮಂಡ್ಯದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹತ್ತಕ್ಕೂ ಹೆಚ್ಚು ಅಧಿಕಾರಿಗಳಿಗೆ ವೇದಿಕೆ ಕಲ್ಪಿಸುವ ಮೂಲಕ ಮೀರಾ ಮೇಡಂ ಸಾಹಿತ್ಯ ಸಮ್ಮೇಳನವನ್ನು ಸಂಪೂರ್ಣ ಅಧಿಕಾರಿಗಳ ಸಮ್ಮೇಳನವನ್ನಾಗಿ ಮಾಡಿ ಸಾರ್ವಜನಿಕರ ಆಕ್ರೋಶಕ್ಕೆ




ಗುರಿಯಾಗಿ, ಅಧಿಕಾರಿಗಳ ಪ್ರೀತಿಗೆ ಪಾತ್ರರಾಗಿದ್ದರು.

ರಾಜಕಾರಣಿಗಳ ಕೃಪಾಕಟಾಕ್ಷ ಗಳಿಸುವುದರಲ್ಲಿ ಈಯಮ್ಮ ಎತ್ತಿದ ಕೈ. ಕಸಾಪ ಚುನಾವಣೆಯಲ್ಲಿ ಗೆಲ್ಲಲು







ಎಸ್.ಬಿ. ಎಜುಕೇಷನ್ ಟ್ರಸ್ಟ್





ಆಗಿನ ಶಾಸಕ ಎಂ.ಶ್ರೀನಿವಾಸ್‌ರ ಬೆಂಬಲ ಪಡೆದ ಮೀರಾ ಮೇಡಂ ಗೆದ್ದು ಕಸಾಪ ಅಧ್ಯಕ್ಷೆಯಾದ ನಂತರ ಅದಕ್ಕೆ ಋಣಿಯಾಗದೆ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಪತಿ ಶಿವಲಿಂಗಯ್ಯನವರನ್ನು 4ನೇ ಸ್ಥಾನದಲ್ಲಿ ಗೆಲ್ಲಿಸಿಕೊಂಡು, ಮಾಜಿ ಶಾಸಕ ಎಂ.ಶ್ರೀನಿವಾಸ್‌ರನ್ನು 5ನೇ ಸ್ಥಾನಕ್ಕೆ ತಳ್ಳಿ ಅವರನ್ನೇ ಬೇಸ್ತು ಬೀಳಿಸಿದ್ದರು. ನಮ್ಮ ಕುಟುಂಬಕ್ಕೆ ರಾಜಕಾರಣ ಇಷ್ಟವಿಲ್ಲ ಎಂದು ಕಸಾಪ ಚುನಾವಣೆಯ ಸಂದರ್ಭದಲ್ಲಿ ಹೇಳಿದ್ದ ಮಾತನ್ನು ಕಂಡು ಗೆಲ್ಲಲು ಸಹಾಯ ಮಾಡಿದ ಎಂ.ಶ್ರೀನಿವಾಸ್ ಕೊನೆಗೆ ಒಕ್ಕಲಿಗ ಸಂಘದ ಚುನಾವಣೆಯಲ್ಲಿ ಮೀರಾ ಮೇಡಂ ಕೈಕೊಟ್ಟದ್ದನ್ನು ಇನ್ನೂ ಅರಗಿಸಿಕೊಳ್ಳಲಾಗಿಲ್ಲ. ರಾಜಕಾರಣ ಬೇಡಬೇಡ ಎನ್ನುತ್ತಲೇ ಪತಿ ಶಿವಲಿಂಗಯ್ಯನವರನ್ನು ಒಕ್ಕಲಿಗ ಸಂಘದ ಚುನಾವಣೆಯಲ್ಲಿ ಗೆಲ್ಲಿಸಿದ ಮೀರಾ ಮೇಡಂ ಅವರನ್ನು ಒಕ್ಕಲಿಗರ ಸಂಘದ ಉಪಾಧ್ಯಕ್ಷರನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಈಗ ಮೇಡಂಗೆ ಅರ್ಜೆಂಟಾಗಿ ಪತಿ ಶಿವಲಿಂಗಯ್ಯನವರನ್ನು ಎಂಪಿಯಾಗಿ ನೋಡಬೇಕೆಂಬ ಆಸೆಯಿದ್ದು, ಅದಕ್ಕಾಗಿ ಬಿಜೆಪಿ ಕದತಟ್ಟಿ ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ. ಇದುವರೆಗೂ ಜೆಡಿಎಸ್ ನಾಯಕರ ಜೊತೆ ಚೆನ್ನಾಗಿದ್ದ ಮೀರಾ ಮೇಡಂ ಕಳೆದ ವಿಧಾನಸಭಾ ಚುನಾವಣೆಯಲ್ಲಿ ದೇವೇಗೌಡರಿದ್ದ ವೇದಿಕೆಯಲ್ಲೂ ಕಾಣಿಸಿಕೊಂಡಿದ್ದರು. ಆದರೆ ಪಕ್ಕಾ ಅವಕಾಶವಾದಿಗಳಾದ ಮೀರಾ ಹಾಗೂ ಶಿವಲಿಂಗಯ್ಯ ಈಗ ಬಿಜೆಪಿ ಸೇರಿದ್ದಾರೆ. ಒಂದೇ ಒಂದು ದಿನವೂ ಪಕ್ಷದ ಬಾವುಟ ಹಿಡಿಯದ, ಪ್ರಚಾರ ಸೇರಿದಂತೆ ಯಾವ ಕೆಲಸ ಮಾಡದ ಶಿವಲಿಂಗಯ್ಯನಿಗೆ ರೊಕ್ಕಸ್ಥನೆಂಬ ಏಕೈಕ ಕಾರಣಕ್ಕೆ ಬಿಜೆಪಿ ಟಿಕೆಟ್ ಕೊಟ್ಟಿದೆ.

ರಾಜೀನಾಮೆ ನೀಡಲಿ

ಪಕ್ಷಾತೀತ, ಜಾತ್ಯತೀತ, ಧರ್ಮಾತೀತವಾಗಿ ಕೆಲಸ ಮಾಡುವ ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷೆಯಾಗಿರುವ ಮೀರಾ ಶಿವಲಿಂಗಯ್ಯ ಒಂದು ಪಕ್ಷದ ಪರವಾಗಿ ಕೆಲಸ ಮಾಡುವುದು ನೈತಿಕವಾಗಿ ಸರಿಯಲ್ಲ ಎಂಬುದು ಸಾಹಿತ್ಯಾಭಿಮಾನಿಗಳ ಆಕ್ರೋಶದ ನುಡಿ. ಬಿಜೆಪಿ ಅಭ್ಯರ್ಥಿಯಾಗಿರುವ ಪತಿ ಶಿವಲಿಂಗಯ್ಯ ಪರ ಮೀರಾ ಮೇಡಂ ಪ್ರಚಾರ ನಡೆಸುವುದಾದರೆ ರಾಜೀನಾಮೆ ಕೊಟ್ಟು ನಡೆಸಲಿ. ಕಸಾಪ ಜಿಲ್ಲಾಧ್ಯಕ್ಷೆಯಾಗಿ ಈ ರೀತಿ ಮಾಡುವುದು

▶▶| 12

ಮೀರಾ-ಶಿವಲಿಂಗಯ್ಯನ ಆಸ್ತಿ-ಪಾಸ್ತಿ



ಇಪ್ಪತ್ತು ವರ್ಷಗಳ ಹಿಂದೆ ಏನೇನೂ ಇರದಿದ್ದ ಮೀರಾ ಮತ್ತು ಶಿವಲಿಂಗಯ್ಯ ಬಳಿ ಈಗ ಇರುವ ಆಸ್ತಿ ನೂರಾರು ಕೋಟಿಗಳಾಗುತ್ತದೆ. ಗಂಡ-ಹೆಂಡತಿ ಚುನಾವಣೆಯಲ್ಲಿ ಸಲ್ಲಿಸಿದ ಆಸ್ತಿವಿವರ ಕೇಳಿಯೇ ಜಿಲ್ಲೆಯ ಜನರು ದಂಗು ಬಡಿದುಹೋಗಿದ್ದಾರೆ. ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪಟ್ಟಿಯಲ್ಲಿ ಅಧಿಕೃತವಾಗಿ 13 ಕೋಟಿ ಆಸ್ತಿಯನ್ನು ಘೋಷಿಸಿರುವ ಶಿವಲಿಂಗಯ್ಯ ಮತ್ತು ಮೀರಾ ದಂಪತಿಗಳು ಇನ್ನು ಅನಧಿಕೃತವಾಗಿ ಶೇಖರಿಸಿರುವ ಆಸ್ತಿಗಳ ವಿವರ ಕಣ್ಣಾರೆ ಕಂಡಿರುವ ಮಂಡ್ಯ ಜನರು ಎಲಾ ಇವರಾ ಅಂತ ಬಾಯಿಯ ಮೇಲೆ ಬೆರಳಿಟ್ಟುಕೊಂಡಿದ್ದಾರೆ.

ಬಜಾಜ್ ಚೇತಕ್ ಸ್ಕೂಟರ್ ಮೇಲೆ ತಿರುಗುತ್ತಿದ್ದ ಶಿವಲಿಂಗಯ್ಯನ ಬಳಿ ಸ್ಕೋಡಾ ಕಾರಿದ್ದರೆ, ಲೂನಾ ಮೇಲೆ ತಿರುಗುತ್ತಿದ್ದ ಮೀರಾ ಮೇಡಂ ಇನ್ನೋವಾ ಕಾರಿನ ಒಡತಿ. ಚರ-ಸ್ಥಿರ ಆಸ್ತಿಗಳ ವಿವರ ಕೇಳಿದರೆ ಇಷ್ಟೊಂದು ಆಸ್ತಿಯ ಹಿಂದಿರುವ ಗುಟ್ಟು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಛೇರ್‌ಮನ್ ಹಾಗೂ ಕೆಆರ್‌ಇಡಿಎಲ್ ನಿಗಮ ಅಧ್ಯಕ್ಷ ಸ್ಥಾನ ಎಂಬುದು ಗೊತ್ತಾಗುತ್ತದೆ. ಭ್ರಷ್ಟಾಚಾರ ಮಾಡದಿದ್ದರೆ ಇಷ್ಟೊಂದು ಹಣ ಇಷ್ಟು ಬೇಗ ಹೇಗೆ ಗಳಿಸಲು ಸಾಧ್ಯ ಅಲ್ಲವೇ?

ಶಿವಲಿಂಗಯ್ಯನವರ ಬಳಿ 300 ಗ್ರಾಂ. ಚಿನ್ನ ಇದ್ದರೆ, ಮೀರಾ ಮೇಡಂ ಬಳಿ 2 ಕೆ.ಜಿ.ಚಿನ್ನ, 50 ಕೆಜಿ ಬೆಳ್ಳಿ ಇದೆ. ಮಂಡ್ಯ ತಾಲ್ಲೂಕಿನ ಚೀರನಹಳ್ಳಿ ಬಳಿ 3 ಎಕರೆ, ಶ್ರೀರಂಗಪಟ್ಟಣ ಗೌಡಹಳ್ಳಿಯಲ್ಲಿ 4.19 ಎಕರೆ ಮತ್ತು ತಂದೆ ನಾಗರಾಜು ಕೊಟ್ಟ 3.19 ಎಕರೆ, ಮದ್ದೂರು ತಾಲ್ಲೂಕಿನಲ್ಲಿ 2 ಎಕರೆ, ಮಂಡ್ಯ ತಾಲ್ಲೂಕಿನಲ್ಲಿ 19 ಕುಂಟೆ, ಗುತ್ತಲುನಲ್ಲಿ 1 ಎಕರೆ, ಮಳವಳ್ಳಿ ತಾಲ್ಲೂಕಿನ ಬೆಳಕವಾಡಿಯಲ್ಲಿ 11.30 ಎಕರೆ ಜಮೀನು ಇದೆ. ಮಂಡ್ಯದ ತಾವರೆಗೆರೆಯಲ್ಲಿ ಮನೆ, ನಿವೇಶನ, ಬೆಂಗಳೂರಿನ ವಿಜಯನಗರದಲ್ಲಿ, ಮಂಡ್ಯದ ಬೇಲೂರು, ಮರಕಾಡುದೊಡ್ಡಿಗಳಲ್ಲಿ ಕೋಟ್ಯಂತರ ಮೊತ್ತದ ನಿವೇಶನಗಳಿವೆ ಎಂಬುದಾಗಿ ತೋರಿಸಿದ್ದಾರೆ. ಮಂಡ್ಯದಲ್ಲಿರುವ ಹತ್ತಾರು ವಾಣಿಜ್ಯ ಕಟ್ಟಡಗಳ ಮೌಲ್ಯ ಕೋಟಿ ಕೋಟಿ ಬೆಲೆ ಬಾಳುತ್ತವೆ. ಇನ್ನು ಗ್ರೀನ್ ಪ್ಯಾಲೇಸ್, ಎಸ್.ಬಿ. ಸಮುದಾಯ ಭವನ, ಮಾಂಡವ್ಯ ಐಟಿಐ, ಜ್ಞಾನಸಾಗರ ಕ್ಯಾಂಪಸ್, ಗೀತಾಂಜಲಿ ಪ್ರೌಢಶಾಲೆ ಇವೆಲ್ಲಾ ಟ್ರಸ್ಟ್ ಹೆಸರಿನಲ್ಲಿದ್ದು, ಇವುಗಳ ಮೌಲ್ಯವೇ ಕೋಟಿ ಕೋಟಿ ದಾಟುತ್ತದೆ. ಇದಲ್ಲದೆ ಅಮೆರಿಕ ಹಾಗೂ ಆಸ್ಟ್ರೇಲಿಯಾಗಳಲ್ಲೂ ಆಸ್ತಿ ಮಾಡಿದ್ದಾರೆ.

1997ರಲ್ಲಿ ತಮ್ಮ ಮೊದಲ ಮಗಳಾದ ಡಾ.ಹೇಮಾ ಮದುವೆಯನ್ನು ಅಡಂಬರದಿಂದ ಮಾಡಿದ್ದನ್ನು ಬಹುಶಃ ಮಂಡ್ಯದ ಜನ ಇವತ್ತಿಗೂ ನೆನಪಿಸಿಕೊಳ್ಳುತ್ತಾರೆ. ಮಂಡ್ಯದ ಕಾಳಿಕಾಂಬ ಕಲ್ಯಾಣ ಮಂಟಪದಲ್ಲಿ ಹಾಕಲಾಗಿದ್ದ ಭರ್ಜರಿ ಪೆಂಡಾಲ್, ತರತರದ ಭಕ್ಷ್ಯ - ಭೋಜನಗಳು, ಕಲ್ಯಾಣಮಂಟಪದಿಂದ ಮೈಸೂರು-ಬೆಂಗಳೂರು ರಸ್ತೆಯವರೆಗೂ ಹಾಕಿದ್ದ ಚಪ್ಪರ, ಲೈಟಿಂಗ್ಸ್ ಕಂಡ ಜನ ಇದುವರೆಗೂ ಇಂತಹ ಮದುವೆ ನೋಡಿಯೇ ಇಲ್ಲ ಎಂದು ಬೆರಗಿನಿಂದ ನೋಡಿದ್ದರು. ಆಗ ಜೆ.ಎಚ್.ಪಟೇಲ್ ಸರ್ಕಾರದಲ್ಲಿ ಹಣಕಾಸು ಮಂತ್ರಿಯಾಗಿದ್ದ ಸಿದ್ಧರಾಮಯ್ಯ ಮೈಸೂರಿಗೆ ತೆರಳುವಾಗ ರಸ್ತೆಯಲ್ಲಿ ಹಾಕಿದ್ದ ಲೈಟಿಂಗ್ಸ್, ಚಪ್ಪರ ಕಂಡೇ 'ಯಾರಿದ್ರೀ ಈ ಮದುವೆ' ಎಂದು ಕೇಳಿದ್ದಲ್ಲದೆ ಅದರ ಮೇಲೆ ನಿಗಾವಹಿಸಿ ಎಂದಿದ್ದನ್ನು ಮಂಡ್ಯದ ಜನ ಇವತ್ತಿಗೂ ನೆನಪಿಟ್ಟುಕೊಂಡಿದ್ದಾರೆ.


ಯಡ್ಡಿ ಬುಡಕ್ಕೆ ಕೊಳ್ಳಿ

10 ⏮

ಹೀಗೆ ತರಹೇವಾರಿ ಜಾತಿ ಜನಾಂಗಗಳ ಮತದಾರರ ಪೈಕಿ ಅವರವರದ್ದೇ ಹಿತಾಸಕ್ತಿಗನುಗುಣವಾಗಿ ಓಟು ಹಾಕುವುದಂತೂ ಸತ್ಯವೆ.

ಅಹಿಂದ ರಣತಂತ್ರ

ಸಾರಾಸಗಟಾಗಿ ಲಿಂಗಾಯತರು, ಬ್ರಾಹ್ಮಣರು ಬಿಜೆಪಿಗೆ ಓಟು ಕೊಡುತ್ತಾರೆಂದೇ ಯಡ್ಡಿ ಲೆಕ್ಕ ಹಾಕಿರಬಹುದು. ಲಿಂಗಾಯತರು, ಬ್ರಾಹ್ಮಣರು ಬಿಜೆಪಿಯನ್ನು ಬೆಂಬಲಿಸಿ, ಈಡಿಗರು, ಒಕ್ಕಲಿಗರೆಲ್ಲ ಜೆಡಿಎಸ್ ಬೆನ್ನಿಗೆ ನಿಂತರೆಂದರೆ ಸಹಜವಾಗೇ 30 ಸಾವಿರದಷ್ಟಿರುವ ಕುರುಬರು, 40 ಸಾವಿರದಷ್ಟಿರುವ ಬಂಟರು ಮತ್ತು 2.30 ಲಕ್ಷದಷ್ಟಿರುವ ಎಸ್‌ಸಿ, ಎಸ್ಟಿ ಮತಗಳೆಲ್ಲ ಕಾಂಗ್ರೆಸ್ ಪಾಲಾಗುತ್ತವೆ. ಇನ್ನು 2 ಲಕ್ಷದಷ್ಟಿರುವ ಮುಸ್ಲಿಮರ ಪೈಕಿ ಶೇ.80ರಷ್ಟು ಅಂದರೆ ಕನಿಷ್ಠ ಒಂದೂವರೆ ಲಕ್ಷವಾದರೂ ಕಾಂಗ್ರೆಸ್ ಪಾಲಾಗುವುದು ಶತಸ್ಸಿದ್ಧ.



ಈಡಿಗರು ಮತ್ತು ಒಕ್ಕಲಿಗರು ಒಗ್ಗಟ್ಟಾಗಿ ಜೆಡಿಎಸ್ ಬೆನ್ನಿಗೆ ನಿಲ್ಲಲೂಬಹುದು. ಈ ಹಿಂದೆ ಬಂಗಾರಪ್ಪ ನಿಂತಿದ್ದಾಗಲೂ ಬಹುತೇಕ ಈಡಿಗರೆಲ್ಲ ಕಾಂಗ್ರೆಸ್ ಬೆಂಬಲಿಸಿದ್ದರೆ ಲಿಂಗಾಯತರು ಏಕಮುಖವಾಗಿ ಯಡ್ಡಿ ಬೆನ್ನಿಗೆ ನಿಂತಾಗಿತ್ತು. ಆ ಪ್ರಕಾರ ಹಣಾಹಣಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆಯಷ್ಟೇ ಎಂದು ಯಾರೇ ಲೆಕ್ಕ ಹಾಕಿದರೂ ಸದ್ಯದ ಪರಿಸ್ಥಿತಿಯೇ ಬೇರೆಯಿದೆ.

ಕಾಂಗ್ರೆಸ್‌ನ ನಾಲ್ವರು ಶಾಸಕರ ಪೈಕಿ ಬೈಂದೂರಿನ ಗೋಪಾಲ ಪೂಜಾರಿ ಮತ್ತು ಸಾಗರದ ಕಾಗೋಡು ತಿಮ್ಮಪ್ಪ ಕನಿಷ್ಠ ಶೇ. 30ರಷ್ಟಾದರೂ ಈಡಿಗರ ಓಟುಗಳನ್ನು ಕಾಂಗ್ರೆಸ್ಸಿಗೆಳೆಯುವುದು ಶತಸ್ಸಿದ್ಧ. ಹಾಗೆ ಕಿಮ್ಮನೆ ರತ್ನಾಕರ್ ಕಾರಣಕ್ಕೆ ತೀರ್ಥಹಳ್ಳಿ ಒಕ್ಕಲಿಗರ ಒಂದು ಗುಂಪಾದರೂ ಕಾಂಗ್ರೆಸ್ ಬೆಂಬಲಕ್ಕೆ ನಿಲ್ಲಲೇಬೇಕು. ಶಿವಮೊಗ್ಗಕ್ಕೆ ಶಾಸಕ ಪ್ರಸನ್ನಕುಮಾರ್ ಶೇ.25ರಷ್ಟಾದರೂ ಬ್ರಾಹ್ಮಣ ಮತಗಳನ್ನು ಕಾಂಗ್ರೆಸ್ಸಿಗೆಳೆಯಲಾರರೆ?

ಇದರ ಹೊರತಾಗ್ಯೂ ಕಾಂಗ್ರೆಸ್ ಅಭ್ಯರ್ಥಿ ಮಂಜುನಾಥ್ ಭಂಡಾರಿಗೆ ಬೇರೆಯದೇ ಅನುಕೂಲವಿದೆ.

ಏಕೆಂದರೆ 2009ರಲ್ಲಿ ಬಂಗಾರಪ್ಪ ನಿಂತಾಗಿನ ಪರಿಸ್ಥಿತಿಗೂ ಈ ಬಾರಿಯ ಚುನಾವಣೆಗೂ ಅಜಗಜಾಂತರ ವ್ಯತ್ಯಾಸವಿದೆ. ಆಗ ಬಿಜೆಪಿ ಸರ್ಕಾರವಿತ್ತು, ಯಡ್ಡಿ ಮಗನ ಪರವಾಗಿ ಹಣದ ಹೊಳೆಯೇ ಹರಿದಿತ್ತು. ಈಗಿರುವುದು ಕಾಂಗ್ರೆಸ್ ಸರ್ಕಾರವಾದ್ದರಿಂದ ನಡೆಯುತ್ತಿರುವುದು ಪಕ್ಕಾ 'ಅಹಿಂದ' ಪಾಲಿಟಿಕ್ಸ್!

ಮಧು ವಿಲನ್!

ಒಂದು ಹಂತದಲ್ಲಿ ಮುಸ್ಲಿಮರು ಬಿಜೆಪಿಯನ್ನು ಸೋಲಿಸಲು ಜೆಡಿಎಸ್ ಬೆಂಬಲಿಸುವತ್ತ ಇನ್ನೇನು ನಿರ್ಧರಿಸಬೇಕೆನ್ನುವಾಗಲೇ ವಿಚಿತ್ರ ಪಾಲಿಟಿಕ್ಸ್ ಒಂದು ಶಿವಮೊಗ್ಗದಲ್ಲಿ ತಲೆ ಎತ್ತಿತ್ತು. ಅದು ಈಡಿಗ ಸಮುದಾಯದ ಶರಾವತಿ ಡೆಂಟಲ್ ಕಾಲೇಜಿನ ಸೊತ್ತನ್ನು ಮಧು ಬಂಗಾರಪ್ಪ ಕಬಳಿಸಿದ್ದಾರೆಂಬ ಆರೋಪ. ಶಿವಮೊಗ್ಗದ ಸಾಗರ ರಸ್ತೆಯಲ್ಲಿರುವ ಗಾಡಿಕೊಪ್ಪದ ಶರಾವತಿ ಡೆಂಟಲ್ ಕಾಲೇಜಿಗೆ ಸೇರಿದ 80 ಎಕರೆ ಭೂಮಿಯ ಪೈಕಿ 30 ಎಕರೆಯಷ್ಟನ್ನು ಮಧು ಬಂಗಾರಪ್ಪ ಸೈಟು ಮಾಡಿ ಮಾರಿ ಹಾಕಿದ್ದನ್ನು ಮೊದಲ ಬಾರಿಗೆ ಬಯಲಿಗೆಳೆದದ್ದು ಕುಮಾರ್ ಬಂಗಾರಪ್ಪ.

ಗೀತಾ ಶಿವರಾಜ್‌ಕುಮಾರ್ ಜೆಡಿಎಸ್ ಅಭ್ಯರ್ಥಿಯಾಗಿ ಯಡ್ಡಿ ವಿರುದ್ಧ ಅಖಾಡಕ್ಕಿಳಿಯುತ್ತಿದ್ದಂತೆಯೇ ತನಗೆ ಟಿಕೆಟ್ ತಪ್ಪಿತೆಂದು ರೊಚ್ಚಿಗೆದ್ದ ಕುಮಾರ್ ಒಂದು ಹಂತದಲ್ಲಿ ಬಂಡಾಯದ ಬೆದರಿಕೆ ಒಡ್ಡಿದರಾದರೂ ಕಾಂಗ್ರೆಸ್ ನಾಯಕರ ಮನವೊಲಿಕೆಗೆ ಮಣಿಯಲೇಬೇಕಾಯಿತು. ಅಲ್ಲಿಗೆ ಈಡಿಗರೆಲ್ಲ ಸಾರಾಸಗಟಾಗಿ ಜೆಡಿಎಸ್ ಅಭ್ಯರ್ಥಿ ಗೀತಾ ಶಿವರಾಜ್‌ಕುಮಾರ್‌ರನ್ನು ಬೆಂಬಲಿಸುವ ವಾತಾವರಣವೂ ಸೃಷ್ಟಿಯಾಗಿತ್ತು. ಆದರೆ ಯಾವತ್ತು ಈಡಿಗ ಸಮಾಜದ ಸೊತ್ತನ್ನು ಮಧು ಬಂಗಾರಪ್ಪ ಕಬಳಿಸಿದ್ದಾರೆಂದು ಖುದ್ದು ಅಣ್ಣ ಕುಮಾರ್ ಬಂಗಾರಪ್ಪ ಪತ್ರಿಕಾಗೋಷ್ಠಿ ಕರೆದು ಆರೋಪಿಸಿಬಿಟ್ಟರೋ ಅದು ಮಧು ವಿರುದ್ಧ ಈಡಿಗರೇ ತಿರುಗಿಬೀಳಲು ಕಾರಣವಾಯಿತು.

ಇದರ ಮುಂದುವರಿಕೆಯೆಂಬಂತೆ ಮಾರ್ಚ್ 28ರಂದು ಕುಮಾರ್ ಬಂಗಾರಪ್ಪ ತನ್ನ ಬೆಂಬಲಿಗರನ್ನು ಕಟ್ಟಿಕೊಂಡಿದ್ದೇ ಶರಾವತಿ ಡೆಂಟಲ್ ಕಾಲೇಜಿನ ಆವರಣದಲ್ಲೇ ಧರಣಿ ಸತ್ಯಾಗ್ರಹ ನಡೆಸಿಬಿಟ್ಟರು. ಮೇಲುನೋಟಕ್ಕಿದು ಕ್ಷುಲ್ಲಕ ಗಿಮಿಕ್ಕಾಗಿ ಕಂಡರೂ ಈಡಿಗರ ಮಟ್ಟದಲ್ಲಿ ಮಧು ಬಂಗಾರಪ್ಪ ರಾತ್ರೋರಾತ್ರಿ ಖಳನಾಯಕನಾಗಿ ಬದಲಾಗುವಂತಾಗಿತ್ತು. ಯಾವ ಬಂಗಾರಪ್ಪ ಶಿವಮೊಗ್ಗದ ಈಡಿಗರ ಕಣ್ಮಣಿಯಾಗಿದ್ದರೋ ಅವರ ಮಗನೇ ಈಡಿಗರ ಸೊತ್ತು ಕಬಳಿಸಿದ ಸತ್ಯ ಬಯಲಾಗಿದ್ದೇ ಶಿವಮೊಗ್ಗದ ಈಡಿಗರು ರೊಚ್ಚಿಗೆದ್ದರು. ಅಲ್ಲಿಗೆ ಸಾರಾಸಗಟು ಈಡಿಗರೆಲ್ಲ ಜೆಡಿಎಸ್ ಅಭ್ಯರ್ಥಿ ಗೀತಾ ಶಿವರಾಜ್‌ಕುಮಾರ್ ಪರ ನಿಲ್ಲುವ ನಿರ್ಧಾರವೇ ಬದಲಾಗಿತ್ತು. ಒಂದೆಡೆ ಬೇಳೂರು, ಹಾಲಪ್ಪ ಸೇರಿಕೊಂಡು ಯಡ್ಡಿ ಪರ ಬಿಜೆಪಿಯನ್ನು ಬೆಂಬಲಿಸಿದ್ದು ಮತ್ತೊಂದೆಡೆ ಕುಮಾರ್ ಬಂಗಾರಪ್ಪ ಬೆನ್ನಿಗಿದ್ದ ಈಡಿಗರ ಮತ್ತೊಂದು ಗುಂಪು ಕಾಂಗ್ರೆಸ್ ಬೆಂಬಲಕ್ಕೆ ನಿಂತಿದ್ದರಿಂದಾಗಿ ಈಡಿಗರಲ್ಲೇ ಮೂರು ಗುಂಪುಗಳಾದವು.

ಮುನ್ನುಗ್ಗಿದ ಕಾಂಗ್ರೆಸ್

ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ಗಳ ಮಧ್ಯೆ ಈಡಿಗರು ಮೂರು ಗುಂಪಾಗಿದ್ದು ಸಹಜವಾಗೇ ಮುಸ್ಲಿಮರನ್ನು ಎಚ್ಚರಿಸಿತ್ತು. ಈಡಿಗರೆಲ್ಲ ಲಿಂಗಾಯತರ ವಿರುದ್ಧ ಒಂದಾದರಷ್ಟೇ ಬಿಜೆಪಿಯನ್ನು ಸೋಲಿಸಲು ಸಾಧ್ಯ. ಹಾಗಿಲ್ಲದ ಪಕ್ಷದಲ್ಲಿ ವಿನಾಕಾರಣ ಜೆಡಿಎಸ್ ಬೆಂಬಲಿಸುವುದು ಎಂದರೆ ಅದು ಬಿಜೆಪಿ ಗೆಲ್ಲಲು ನೆರವಾದಂತೆಯೇ ಎಂಬ ಲೆಕ್ಕಕ್ಕೆ ಬಂದ ಮುಸ್ಲಿಮರೆಲ್ಲ ಗೀತಾ ಶಿವರಾಜ್‌ಕುಮಾರ್‌ರನ್ನು ಬೆಂಬಲಿಸುವ ತಮ್ಮ ನಿರ್ಧಾರವನ್ನೇ ಕೈಬಿಟ್ಟರು. ಮುಸ್ಲಿಮರೆಲ್ಲ ನಿಸ್ಸಂಶಯವಾಗಿ ಕಾಂಗ್ರೆಸ್ಸನ್ನು ಬೆಂಬಲಿಸುವ 'ನಿರ್ಧಾರಕ್ಕೆ ಬಂದಿದ್ದೇ ತಡ ಅಳಿದುಳಿದ ಈಡಿಗರು, ದಲಿತರು, ಲಂಬಾಣಿಗಳು, ಕುರುಬರು, ಕ್ರೈಸ್ತರೆಲ್ಲ ಕಾಂಗ್ರೆಸ್ ಪರವಾಗಿ ಗಟ್ಟಿ ನಿರ್ಧಾರಕ್ಕೆ ಬಂದುಬಿಟ್ಟರು.

ಸದ್ಯ ಎತ್ತಿಂದೆತ್ತ ಲೆಕ್ಕ ಹಾಕಿದರೂ ಶಿವಮೊಗ್ಗದ ಮಟ್ಟಿಗೆ ಹಣಾಹಣಿ ಅಂತಿರುವುದು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆಯೆ. ಈ ಬಾರಿ ಕಾಂಗ್ರೆಸ್ಸಿಗಿರುವ ಮತ್ತೂ ಒಂದು ಅನುಕೂಲವೆಂದರೆ ಕಳೆದ ಬಾರಿಯಂತೆ ಭದ್ರಾವತಿಯ ಜೆಡಿಎಸ್ ಶಾಸಕ ಅಪ್ಪಾಜಿ ಯಡ್ಡಿ ಪರವಾಗಿಲ್ಲ. ಯಡ್ಡಿಯ ರೊಕ್ಕ ತಿಂದು ಒಳಗಿಂದೊಳಗೆ ಬಿಜೆಪಿಗೆ ಓಟು ಹಾಕಿಸಿದ್ದ ಅಪ್ಪಾಜಿಯ ಕನಿಷ್ಠ 50 ಸಾವಿರ ಮತಗಳು ಯಡ್ಡಿಗೆ ಬೀಳದೆ ಜೆಡಿಎಸ್‌ಗೇ ಇತ್ತೆಂದರೆ ಅದು ಬಿಜೆಪಿಗೆ ದಕ್ಕಲಿದ್ದ 50 ಸಾವಿರ ಮತಗಳು ತಪ್ಪಿದಂತೆಯೆ. ಬಿಜೆಪಿಗೆ 50 ಸಾವಿರದಷ್ಟು ಮತಗಳು ಕಮ್ಮಿಯಾದರೆ ಅದರ ಲಾಭ ನೇರವಾಗಿ ಕಾಂಗ್ರೆಸ್ಸಿಗಾಗುತ್ತದೆ.

ಜೊತೆಗೆ ಈ ಹಿಂದೆ ಕೆಜೆಪಿಯನ್ನು ಬೆಂಬಲಿಸಿದ್ದ ಮುಸ್ಲಿಮರ‍್ಯಾರೂ ಈ ಬಾರಿ ಬಿಜೆಪಿಯನ್ನು ಬೆಂಬಲಿಸಲಾರರು. ಎತ್ತಿಂದೆತ್ತ ಲೆಕ್ಕ ಹಾಕಿದರೂ ಕಾಂಗ್ರೆಸ್ಸಿಗೆ ಅಂತ ಶಿವಮೊಗ್ಗದಲ್ಲಿ ಕನಿಷ್ಠ ಮೂರು ಲಕ್ಷದಷ್ಟು ಮತಗಳಿದ್ದೇ ಇದೆ. ಸದ್ಯ ನಾಲ್ಕೂ ಮಂದಿ ಕಾಂಗ್ರೆಸ್ ಶಾಸಕರು ತಂತಮ್ಮ ಓಟು ಬ್ಯಾಂಕನ್ನು ಕಾಂಗ್ರೆಸ್ ಪರ ಉಳಿಸಿಕೊಂಡರೂ ಸಾಕು. ಮುಸ್ಲಿಮರು, ದಲಿತರು, ಕುರುಬರು, ಬಂಟರು ಮತ್ತು ಈಡಿಗ, ಒಕ್ಕಲಿಗ, ಲಂಬಾಣಿಗಳ ಗಣನೀಯ ಪಾಲು ಮತಗಳು ಕಾಂಗ್ರೆಸ್ಸಿಗೆ ಬೀಳುವ ಎಲ್ಲಾ ಲಕ್ಷಣಗಳೂ ಶಿವಮೊಗ್ಗದಲ್ಲಿ ನಿಚ್ಚಳವಾಗಿದೆ. ಅದು ಶುದ್ಧ ಅಹಿಂದ ರಣತಂತ್ರ!

ಈ ಎಲ್ಲ ಬೆಳವಣಿಗೆಗಳನ್ನು ಲೆಕ್ಕ ಹಾಕಿಯೇ ಹೇಳುವುದಾದರೆ ಸದ್ಯ ಶಿವಮೊಗ್ಗದ ಮಟ್ಟಿಗೆ ಹಣಾಹಣಿ ಅಂತಿರುವುದು ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆಯೇ ಹೊರತು ಮೋದಿ ಅಲೆಯಾಗಲಿ, ಸಿನಿಮಾ ಬಲೆಯಾಗಲಿ ಕಾಣಿಸುತ್ತಿಲ್ಲ. ಕಾಂಗ್ರೆಸ್ ಅಭ್ಯರ್ಥಿ ಮಂಜುನಾಥ್ ಭಂಡಾರಿ ಇನ್ನಷ್ಟು ಛಲದಿಂದ ಹೆಣಗಿದರೆಂದರೆ ಗೆಲುವು ಕಷ್ಟವೇನಲ್ಲ.

● ರಾ.ಸೋಮನಾಥ್

ಶಿವಲಿಂಗಯ್ಯನ ಜೇಬು ಬಲಿ!

11 ⏮

ಎಷ್ಟು ಸರಿ? ಎಂಬ ಪ್ರಶ್ನೆಯನ್ನು ಸಾಹಿತ್ಯಾಭಿಮಾನಿಗಳು ಕೇಳುತ್ತಿದ್ದಾರೆ. ಆದರೆ ಮೀರಾ ಮೇಡಂ ಇದ್ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ಪತಿ ಶಿವಲಿಂಗಯ್ಯನನ್ನು ಗೆಲ್ಲಿಸಲು ಬಿರುಬೇಸಿಗೆಯಲ್ಲೂ ಬೆವರು ಹರಿಸುತ್ತಿದ್ದಾರೆ. ನೈತಿಕತೆ, ಸ್ವಾಭಿಮಾನ ಎಂದೆಲ್ಲಾ ಇದ್ದಿದ್ದರೆ ಹಣ- ಅಧಿಕಾರ ಗಳಿಸಲು ಸಾಧ್ಯವಿಲ್ಲ ಎಂಬುದನ್ನು ಮೀರಾ ಮೇಡಂ 20 ವರ್ಷಗಳ ಹಿಂದೆಯೇ ಕಂಡುಕೊಂಡಿದ್ದಾರೆ.

ಎನ್‌ಜಿಓ ಅಡ್ಡೆ

ಎಸ್.ಬಿ. ಗ್ರಾಮೀಣಾಭಿವೃದ್ಧಿ ಸಂಸ್ಥೆ ಎಂಬ ಎನ್‌ಜಿಓ ತೆರೆದುಕೊಂಡಿರುವ ಮೀರಾ ಶಿವಲಿಂಗಯ್ಯ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿಯ ವಿವಿಧ ಸ್ಕೀಂಗಳನ್ನು ತಮ್ಮ ಸಂಸ್ಥೆಗೆ ಬರುವಂತೆ ಮಾಡಿಕೊಂಡಿದ್ದಾರೆ. ಜಿಲ್ಲೆಯಲ್ಲಿ ನೂರಾರು ಗ್ರಾಮೀಣಾಭಿವೃದ್ಧಿ ಸಂಸ್ಥೆಗಳಿದ್ದರೂ ಮೀರಾ ಮೇಡಂನ ಎಸ್.ಬಿ.ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಬಹುಪಾಲು ಸಿಗುತ್ತದೆ. ತಮ್ಮ ಮಾತಿನ ಮೋಡಿಯಿಂದ ಅಧಿಕಾರಿಗಳ ಒಲವು ಗಳಿಸಿರುವ ನಾಜೂಕಮ್ಮ ಮೀರಾ ಮೇಡಂ ತಮ್ಮ ಸಂಸ್ಥೆಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಕೆಲವೆಡೆ ಮಾಂಡವ್ಯ ಶುದ್ಧ ಕುಡಿಯುವ ನೀರಿನ ಕೇಂದ್ರವನ್ನು ಸ್ಥಾಪನೆ ಮಾಡಿದ್ದಾರೆ. ಐಎಸ್‌ಐ ಚಿಹ್ನೆ ಹೊಂದಿಲ್ಲದೆ ಕಳೆದೊಂದು ವರ್ಷದಿಂದ ಮೀರಾ ಮೇಡಂ ನೀರು ಕುಡಿಸುತ್ತಿದ್ದರೂ ಅದನ್ನು ಸಂಬಂಧಪಟ್ಟ ಇಲಾಖೆಯ ಯಾವ ಅಧಿಕಾರಿಗಳು ಪ್ರಶ್ನೆ ಮಾಡುವ ಗೋಜಿಗೆ ಹೋಗಿಲ್ಲವೆಂದರೆ ಅಧಿಕಾರಿಗಳ ಮೇಲೆ ಇವರ ಹಿಡಿತ ಎಷ್ಟಿದೆ ಎಂಬುದು ಗೊತ್ತಾಗುತ್ತದೆ.

ಇನ್ನು ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ (ಡಿಡಿಆರ್‌ಸಿ) ಎಂಬ ಸಂಸ್ಥೆಯಲ್ಲೂ ಇರುವ ಮೀರಾ ಮೇಡಂ ಅಲ್ಲೂ ಹಿಡಿತ ಹೊಂದಿದ್ದಾರೆ. ತನ್ನ ಚೇಲಾ ಆಗಿರುವ ರಂಗಸ್ವಾಮಿ ಎಂಬಾತನ ಹೆಂಡತಿಗೆ ಡಿಡಿಆರ್‌ಸಿಯಲ್ಲಿ ಉದ್ಯೋಗ ನೀಡಿದ್ದಾರೆ. ಮೀರಾ ಮೇಡಂ ಒಡೆತನದ ಐಟಿಐ ಕಾಲೇಜಿಗೆ ಸರ್ಕಾರದ ಅನುದಾನ ಬರುತ್ತದೆ. ಇನ್ನು ಮೀರಾ ಮೇಡಂ ಚೇಲಾನಂತೆ ಕೆಲಸ ಮಾಡುವ ರಂಗಸ್ವಾಮಿ ಐಟಿಐನಲ್ಲಿ 'ಡಿ' ಗ್ರೂಪ್ ನೌಕರ. ಆದರೆ ಒಂದು ದಿನವೂ ಆತ ಅಲ್ಲಿ ಕೆಲಸ ಮಾಡಿಲ್ಲ, ಸದಾ ಮೀರಾ ಮೇಡಂ ಹಿಂದೆ ತಿರುಗುತ್ತಾ ಅವರ ಕೆಲಸ ಮಾಡುವ ಈತನಿಗೆ ಸರ್ಕಾರ ಹತ್ತಾರು ಸಾವಿರ ಸಂಬಳವನ್ನು ಕೊಡುತ್ತಿದೆ. ಹೇಗಿದೆ ನೋಡಿ ಮೀರಾ ಮೇಡಂ ಕರಾಮತ್ತು.

ವ್ಯಾಪಾರಿ ಶಿಕ್ಷಣ ಸಂಸ್ಥೆಗಳು

ಮಂಡ್ಯದ ನಾಗರಿಕರಿಗೆ ಮೀರಾ ಮತ್ತು ಶಿವಲಿಂಗಯ್ಯನವರ ಕೊಡುಗೆ ಏನೇನೂ ಇಲ್ಲ. ಒಕ್ಕಲಿಗರ ಸಂಘದ ಚುನಾವಣೆಯ ಸಂದರ್ಭದಲ್ಲಿ ಜಿಲ್ಲೆಯ ಒಕ್ಕಲಿಗರ ಉದ್ಧಾರಕ್ಕೆ ನನ್ನನ್ನು ಆಯ್ಕೆ ಮಾಡಿ ಎಂದು ಓಟಿಗೆ 500 ರೂ. ಕೊಟ್ಟು ಗೆದ್ದು ಬಂದ ಶಿವಲಿಂಗಯ್ಯ ತಮ್ಮ ಕಾಲೇಜಿನಲ್ಲಿ ಎಷ್ಟು ಜನ ಒಕ್ಕಲಿಗರಿಗೆ ಕಡಿಮೆ ದರದಲ್ಲಿ ಫೀಸ್ ಕಲ್ಪಿಸಿದ್ದಾರೆಂಬುದನ್ನು ಹೇಳಲಿ. ಮಂಡ್ಯದ ತುಂಬೆಲ್ಲ ಹತ್ತಾರು ವಾಣಿಜ್ಯ ಶಿಕ್ಷಣ ಸಂಸ್ಥೆಗಳನ್ನು ತೆರೆದು ಕುಳಿತಿರುವ ಮೀರಾ ಶಿವಲಿಂಗಯ್ಯ ಸಾಕಷ್ಟು ಕಮಾಯಿ ಮಾಡುತ್ತಿದ್ದಾರೆ. ಮಂಡ್ಯದ ತಮಿಳು ಕಾಲೋನಿಯ ಸ್ಥಳವನ್ನೇ ಆಕ್ರಮಿಸಿದೆ ಎನ್ನಲಾಗುವ ಮಾಂಡವ್ಯ ಎಕ್ಸಲೆನ್ಸ್ ಪಿಯು ಕಾಲೇಜು ಪಕ್ಕಾ ಡೊನೇಷನ್ ಸಂಸ್ಥೆ. ಟ್ಯೂಷನ್ ದಂಧೆಯಲ್ಲಿ ತೊಡಗಿರುವ ದೊಡ್ಡಚಾರಿ, ವಾಸು, ಚೇತನ್‌ಕೃಷ್ಣ ಹಾಗೂ ಕೆ.ಆರ್.ಪೇಟೆಯಲ್ಲಿ ಸರ್ಕಾರಿ ಉಪನ್ಯಾಸಕನಾಗಿರುವಾತ ಸೇರಿ ಮೀರಾ ಮತ್ತು ಶಿವಲಿಂಗಯ್ಯ ಇದಕ್ಕೆ ಪಾಲುದಾರರು. ಯಾವುದೇ ಪಿಯು ಕಾಲೇಜಿನಲ್ಲಿ ಟ್ಯೂಷನ್ ಮಾಡುವಂತಿಲ್ಲ ಎಂಬುದು ಸರ್ಕಾರದ ನಿಯಮ. ಆದರೆ ಇಲ್ಲಿ ವಿದ್ಯಾರ್ಥಿಗಳಿಗೆ ದುಬಾರಿ ಟ್ಯೂಷನ್ ಫೀ ಕಟ್ಟಿಸಿಕೊಳ್ಳಲಾಗುತ್ತದೆ. ಒಬ್ಬ ವಿದ್ಯಾರ್ಥಿ ವರ್ಷಕ್ಕೆ ಟ್ಯೂಷನ್ ಫೀ ಎಲ್ಲ ಸೇರಿ 55,000 ರೂ. ಕಟ್ಟಬೇಕು. ಪ್ರಥಮ ಮತ್ತು ದ್ವಿತೀಯ ಪಿಯುಸಿಯಲ್ಲಿ 300 ಕ್ಕೂ ಅಧಿಕ ವಿದ್ಯಾರ್ಥಿಗಳಿದ್ದಾರೆ. ಒಬ್ಬ ವಿದ್ಯಾರ್ಥಿಗೆ 55 ಸಾವಿರ ರೂ.ಗಳಾದರೆ 300 ವಿದ್ಯಾರ್ಥಿಗಳಿಗೆ ಎಷ್ಟೆಂಬುದನ್ನು ನೋಡಿದರೆ ಇವರ ಸಂಸ್ಥೆಯ ವಾರ್ಷಿಕ ವಹಿವಾಟು ಎಷ್ಟು ಕೋಟಿ ಎಂಬುದು ಗೊತ್ತಾಗುತ್ತದೆ. ಬಡ ಒಕ್ಕಲಿಗರು ಸೇರಿದಂತೆ ಸಾಮಾನ್ಯ ಜನರ ಮಕ್ಕಳಿಗೆ ಮಾಂಡವ್ಯ ಎಕ್ಸಲೆನ್ಸ್ ಪಿಯು ಕಾಲೇಜು ಕೈಗೆಟುಕದ ಸಂಸ್ಥೆ. ಇಂತಹ ರೊಕ್ಕಸ್ಥ ಕುಳ ಶಿವಲಿಂಗಯ್ಯ ಬಿಜೆಪಿ ಅಭ್ಯರ್ಥಿಯಾಗಿ ಜನರ ಮುಂದೆ ನಿಂತಿರುವುದು ಸೇವಾ ಮನೋಭಾವದಿಂದಲ್ಲ, ಬದಲಿಗೆ ತನ್ನ ಕೋಟ್ಯಾಂತರ ರೊಕ್ಕ ಬಾಚುವ ವ್ಯಾಪಾರಿ ಸಂಸ್ಥೆಗಳನ್ನು ರಕ್ಷಿಸಿಕೊಳ್ಳಲು ಎಂಬ ಜನಸಾಮಾನ್ಯರ ಮಾತಿಗೆ ಇವೆಲ್ಲ ಸ್ಪಷ್ಟ ಸಾಕ್ಷಿಯಾಗಿ ನಿಂತಿವೆ.

ಸರ್ವಾಧಿಕಾರಿತನ

ಇನ್ನು ಮೀರಾ ಮೇಡಂ ಸರ್ವಾಧಿಕಾರಿತನದ ವಿರುದ್ಧ ಯಾರೇ ಚಕಾರ ಎತ್ತಿದರೂ ಅವರಿಗೆ ಗೇಟ್‌ಪಾಸ್ ನೀಡಲಾಗುತ್ತದೆ. ಮೀರಾ ಮೇಡಂ ಶಿಕ್ಷಣ ಸಂಸ್ಥೆಯಾದ ಐಟಿಐ ಕಾಲೇಜನ್ನು ಬೆಳೆಸುವಲ್ಲಿ ಪ್ರಶಾಂತ್ ಎಂಬಾತನ ಪಾತ್ರ ದೊಡ್ಡದು. ಆತನಿಂದ ಸಾಕಷ್ಟು ಪ್ರಯೋಜನ ಪಡೆದ ಮೀರಾ ಮೇಡಂ ನಂತರ ಆತನನ್ನು ಅಮಾನವೀಯವಾಗಿ ಕೆಲಸದಿಂದ ತೆಗೆದುಹಾಕಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಗೌರವಾಧ್ಯಕ್ಷರಾಗಿದ್ದ ಲೋಕೇಶ್ ಎಂಬುವವರು, ಕೆ.ಆರ್.ಪೇಟೆ ಹಾಗೂ ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಅಧಿಕಾರಿಗಳು ಹಾಗೂ ರಾಜಕಾರಣಿಗಳಿಗೆ ಮಣೆ ಹಾಕಿದ್ದನ್ನು ಕಂಡು ರಾಜೀನಾಮೆ ಕೊಟ್ಟು ಹೊರಬಂದಿದ್ದರು. ಪ್ರಚಾರ ಸಮಿತಿಯಲ್ಲಿದ್ದ ಕೆಂಪೇಗೌಡ ಕೂಡ ರಾಜೀನಾಮೆ ಬಿಸಾಕಿದ್ದರು. ಇವೆಲ್ಲ ಮೃದು ಮಾತಿನ ಮೀರಾ ಮೇಡಂನ ಸರ್ವಾಧಿಕಾರಿತನದ ಒಂದೆರಡು ಸ್ಯಾಂಪಲ್‌ಗಳಷ್ಟೇ.

ಶಿವಲಿಂಗಯ್ಯನ ಅಬ್ಬರದ ಪ್ರಚಾರ

ಬಿಜೆಪಿ ಅಭ್ಯರ್ಥಿಯಾಗಿರುವ ಶಿವಲಿಂಗಯ್ಯ ನಾಮಪತ್ರ ಸಲ್ಲಿಕೆಯ ದಿನ 7-8 ಸಾವಿರ ಜನರನ್ನು ಕರೆತಂದಿದ್ದರು. ತಮಿಳುಕಾಲೋನಿ, ಗುತ್ತಲು, ಗಾಂಧಿನಗರ ಮೊದಲಾದ ಕಡೆಯಿಂದ ತಲಾ 300 ರೂ. ನಂತೆ ಕೊಟ್ಟು ಇವರನ್ನೆಲ್ಲ ಕರೆಸಿದ ಶಿವಲಿಂಗಯ್ಯ ಜಿಲ್ಲೆಯ ಬಿಜೆಪಿ ಇತಿಹಾಸದಲ್ಲೇ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನರನ್ನು ಸೇರಿಸಿದ ಮಹಾನುಭಾವ ಎಂದರೆ ತಪ್ಪಾಗಲಾರದು.


ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷನಾಗಿ ಹಾಗೂ ಕೆಆರ್‌ಎಡಿಎಲ್ ನಿಗಮದ ಎಂಡಿಯಾಗಿ ಬಾಚಿದ ಹಡಬಿಟ್ಟಿ ಹಣವನ್ನು ಖರ್ಚು ಮಾಡುತ್ತಿರುವ ಶಿವಲಿಂಗಯ್ಯನ ಅಬ್ಬರ ಸಾಕಷ್ಟು ಜೋರಾಗಿಯೇ ಕೇಳಿಬರುತ್ತಿದೆ. ಕಳೆದ ಒಕ್ಕಲಿಗರ ಚುನಾವಣೆಯಲ್ಲಿ ನೋಟು ಕೊಟ್ಟು, ಎಣ್ಣೆ ಬಾಡೂಟ ಹಾಕಿಸಿ ಗೆದ್ದಿರುವ ಶಿವಲಿಂಗಯ್ಯ ಈ ಸಲವೂ ಅದನ್ನೇ ರಿಪೀಟ್ ಮಾಡಿ ಗೆಲ್ಲುವ ಹಗಲುಗನಸಿನಲ್ಲಿದ್ದಾನೆ. ಅದಕ್ಕಾಗಿ ನರೇಂದ್ರ ಮೋದಿ ಅಲೆ ಎಂಬ ಭ್ರಮೆಯನ್ನು ತಲೆಯಲ್ಲಿ ತುಂಬಿಕೊಂಡು ಕ್ಷೇತ್ರದೆಲ್ಲೆಡೆ ಬಿಜೆಪಿ ಪರ ಹವಾ ಸೃಷ್ಟಿಸುತ್ತಿದ್ದಾನೆ. ಶಿವಲಿಂಗಯ್ಯನ ತಿಜೋರಿ ಕಂಡೇ ಪುಳಕಿತರಾಗಿರುವ ಚಿಡ್ಡಿಪಡೆ ಶಿವಲಿಂಗಯ್ಯನನ್ನು ಹಿಗ್ಗಾಮುಗ್ಗಾ ಉಬ್ಬಿಸುತ್ತಿದೆ. ಎಷ್ಟೇ ಖರ್ಚು ಮಾಡಿದರೂ ಶಿವಲಿಂಗಯ್ಯನಿಗೆ ಮೂರನೇ ಸ್ಥಾನ ಕಟ್ಟಿಟ್ಟ ಬುತ್ತಿ ಎಂಬುದನ್ನು ಜಿಲ್ಲೆಯ ಮತದಾರ ಈಗಾಗಲೇ ನಿರ್ಧರಿಸಿಯಾಗಿದೆ.

ಕತ್ತಿಗೆ ಬಿಜೆಪಿಯ ಶಾಲು ಸುತ್ತಿಕೊಂಡು ತಮ್ಮ ಸಂಸ್ಥೆಗಳಲ್ಲಿ ಕೆಲಸ ಮಾಡುವ ಒಂದಷ್ಟು ಮಹಿಳೆಯರನ್ನು ತುಂಬಿಕೊಂಡು ಪತಿ ಶಿವಲಿಂಗಯ್ಯ ಪರ ಪ್ರಚಾರದಲ್ಲಿ ತೊಡಗಿರುವ ಮೀರಾ ಮೇಡಂ ಕೂಡ ಮೋದಿ ಪ್ರಧಾನಿಯಾದರೆ ಭಾರತದ ಅಭಿವೃದ್ಧಿ, ಮಂಡ್ಯದ ಅಭಿವೃದ್ಧಿ ಎಂದೆಲ್ಲಾ ಭರ್ಜರಿ ಭಾಷಣ ಕುಟ್ಟುತ್ತಿದ್ದಾರೆ. ನಮ್ಮ ಕುಟುಂಬಕ್ಕೆ ರಾಜಕಾರಣ ಇಷ್ಟ ಇಲ್ಲ ಎಂದಿದ್ದ ಮೀರಾ ಮೇಡಂ ಅವಕಾಶವಾದಿ ರಾಜಕಾರಣ ಕಂಡು ಜಿಲ್ಲೆಯ ಮತದಾರ ಕೂಡ ಈಯಮ್ಮನ ಸಮೇತ ಆಕೆಯ ಗಂಡನಿಗೆ ಸರಿಯಾದ ಪಾಠ ಕಲಿಸಲು ಕಾಯುತ್ತಿದ್ದಾರೆ.

● ಮಂಡ್ಯ ನಾಗೇಶ್

ದಾವಣಗೆರೆ: ಕಂಗೆಟ್ಟ ಬಿಜೆಪಿಗೆ ಸೋಲು ಸನ್ನಿಹಿತ

ಚುನಾವಣೆ ಸಮೀಪಿಸಿದಂತೆಲ್ಲಾ ದಾವಣಗೆರೆ ಪಾರ್ಲಿಮೆಂಟ್ ಕದನ ಾಹಲದ ಘಟ್ಟ ತಲುಪುತ್ತಿದೆ. ಮೂರನೇ ಬಾರಿ ಗೆದ್ದು ಹ್ಯಾಟ್ರಿಕ್ ಸುವ ಕನಸಿನಲ್ಲಿದ್ದ ಬಿಜೆಪಿಯ ಜಿ.ಎಂ. ಸಿದ್ದೇಶ್ವರ್‌ಗೆ ಸೋಲಿನ ಭಯ ವಾದಂತಿದೆ. ಒಂದು ಕಡೆ ಜೆಡಿಎಸ್‌ನ ಮಾ ಪಟೇಲ್ ಬಿಜೆಪಿಯ ಮಗ್ಗುಲು ುಯುತ್ತಿದ್ದರೆ ಮತ್ತೊಂದೆಡೆ ಬಿಜೆಪಿ ದ ಕೈ ಪಾಳೆಯಕ್ಕೆ ನೆಗೆದ ಮಾಜಿ ಬಿ.ಪಿ. ಹರೀಶ್ ಸಿದ್ದೇಶ್ವರನ ಗೆಲುವಿ ತ್ಸಾಹದ ರೆಕ್ಕೆಗೆ ಕತ್ತರಿ ಹಾಕುತ್ತಿದ್ದಾನೆ.




ಯಡ್ಡಿ

ಹಾಗೆ ನೋಡಿದರೆ 2009ರ ರ್ಲಿಮೆಂಟ್ ಚುನಾವಣೆಯಲ್ಲೇ ಲಿನ ನೆರಳು ಸಿದ್ದೇಶ್ವರನ ಬೆನ್ನು ಹತ್ತಿತ್ತು. ಕೊನೇಕ್ಷಣದಲ್ಲಿ ಚನ್ನಗಿರಿ ಅಸೆಂಬ್ಲಿ ಸಾಲಿಡ್ ಲೀಡ್ ತಂದುಕೊಟ್ಟದ್ದರಿಂದ ಶ್ವರಗೆ ಎರಡನೇ ಬಾರಿಗೆ ಗೆಲುವು ಮುಬಂದಿತ್ತು. ಆದರೆ ಈ ಬಾರಿ ಪಿ ಪಾಲಿಗೆ ಪರಿಸ್ಥಿತಿ ಅದೆಷ್ಟು ಕೂಲವಾಗಿದೆ ಯೆಂದರೆ ಕಳೆದ ಸಲ ದಿದ್ದ ಅದೇ ಚನ್ನಗಿರಿ ಸಿದ್ದೇಶ್ವರರ ವಿಗೆ ಅಪಶಕುನವಾಗುವ ಎಲ್ಲಾ ತೆಗಳೂ ಇವೆ.



ಎರಡು ಬಾರಿ ಸಂಸದನಾದರು ಣಗೆರೆ ಕ್ಷೇತ್ರಕ್ಕೆ ಸಿದ್ದೇಶ್ವರನಿಂದ ದ್ದು ಏನೂ ಇಲ್ಲ. ಮತದಾರನೆದುರು ತಾದ್ದನ್ನು ಮಾಡಿದ್ದೇನೆ ಅದಕ್ಕೋಸ್ಕರ ಕೊಡಿ' ಎಂದು ಕೇಳುವ ಾರಿಕೆಯೇ ಸಿದ್ದೇಶ್ವರಗೆ ಇಲ್ಲದಾಗಿದೆ. ವೃದ್ಧಿ, ಸಮಾಜಸೇವೆಯ ಬಗ್ಗೆ ಷ್ಟೂ ಕಾಳಜಿ ಇಲ್ಲದ ಸಿದ್ದೇಶ್ವರಗೆ ಕಾರ ಬೇಕಾಗಿರೋದು ತನ್ನ ದಂಧೆಯ ಕಪ್ಪುಹಣದ ರಕ್ಷಣೆಗೆ ೬. ಇಡೀ ಹತ್ತು ವರ್ಷ ಕ್ಷೇತ್ರದ ದರಾಗಿದ್ದರೂ ಕ್ಷೇತ್ರ ಸಮಸ್ಯೆಗಳಿಗೆ ಾರ ಕಂಡುಕೊಳ್ಳುವಲ್ಲಿ ಸಿದ್ದೇಶ್ವರ್ ರ್ಣ ವಿಫಲವಾಗಿದ್ದಾರೆ ಅಂತಲೇ ಬಹುದು.



ಅಡಿಕೆ ರಾಜಕಾರಣ

ಮೂಲತಃ ಚಿತ್ರದುರ್ಗ ಜಿಲ್ಲೆಯ ುಸಮುದ್ರದವರಾದರೂ ಸಿದ್ದೇಶ್ವರ ಕೀಯ ನೆಲೆ ಕಂಡುಕೊಂಡಿದ್ದು ಣಗೆರೆಯಲ್ಲಿ. ಅದೂ ಅವರ ತಂದೆ ಗತ ಮಲ್ಲಿಕಾರ್ಜುನಪ್ಪನವರಿಂದ ಬಳುವಳಿ. ಮಲ್ಲಿಕಾರ್ಜುನಪ್ಪನಿಗೆ ಹ ರಾಜಕೀಯ ಹಿನ್ನೆಲೆಯಾಗಲಿ, ಭವವಾಗಲಿ ಇರಲಿಲ್ಲ. ಆದರೆ ಭೀಮಸಮುದ್ರದ ಬಿ.ಟಿ. ರುದ್ರಮ್ಮ ಎಲ್.ಸಿ.ಯಾಗಿ ರಾಜಕಾರಣದ ಮೊಗಸಾಲೆಯಲ್ಲಿ ಗಮನ ಸೆಳೆದಿದ್ದೇ ಮಲ್ಲಿಕಾರ್ಜುನಪ್ಪನಿಗೆ ಹೊಟ್ಟೆಯಲ್ಲಿ ಹುಳಿ ಹಿಂಡಿದಂತಾಗಿ ತಾನೂ ಕೀಯ ಪ್ರವೇಶಿಸುವ ನಿರ್ಧಾರಕ್ಕೆ ಬಂದಿದ್ದರು. ಹೇಗೂ ಅಡಿಕೆ ದಂಧೆಯಲ್ಲಿ ರೊಕ್ಕದ ಖದರಿತ್ತು, ಜೊತೆಗೆ ಆಗತಾನೇ ರಾಜ್ಯದಲ್ಲಿ ಬಿ.ಜೆ.ಪಿ ುಯೂರಿ ಮೇಲೇಳಲು ತಿಣುಕಾಡುತ್ತಿದ್ದ ಪಕ್ಷದ ಕೂಡಾ ಸಿಕ್ಕಿತ್ತು, ಹಾಗಾಗಿ ಜಿದ್ದಿಗೆ ಬಿದ್ದವರಂತೆ ಕಾರಣ ಪ್ರವೇಶಿಸಿಯೇ ಬಿಟ್ಟಿದ್ದರು. ಆ ವೇಳೆಗೆ ನೂರು ಶಿವಶಂಕರಪ್ಪ ದಾವಣಗೆರೆಯ ಮಟ್ಟಿಗೆ ಪಕ್ಷ ದೊರೆಯಂತೆ ಮೆರೆದಾಡುತ್ತಿದ್ದರು. ಗೆ ಟಾಂಗ್ ನೀಡಲು ಒಬ್ಬ ಸಮರ್ಥ ವ್ಯಕ್ತಿಯ ುಕಾಟದಲ್ಲಿದ್ದ ಯಡ್ಡಿಗೆ ಮಲ್ಲಿಕಾರ್ಜುನಪ್ಪ ಿದ್ದರು. ಶಾಮನೂರು ಶಿವಶಂಕರಪ್ಪನ ಾಯತ ಜಾತಿಗೇ ಸೇರಿದ್ದ ಮಲ್ಲಿಕಾರ್ಜುನಪ್ಪ ಾರದ ರುಚಿ ನೋಡಲು ಹಪಹಪಿಸುತ್ತಿರುವ ಮಂಡಿ ಸಾಹುಕಾರ, ಎಂಬುದು ಮಾಗುತ್ತಿದ್ದಂತೆ ಯಡ್ಡಿ ತಡಮಾಡದೆ ಾರ್ಜುನಪ್ಪನನ್ನು ಚಿತ್ರದುರ್ಗದಿಂದ ದಾವಣಗೆರೆ ಆಮದು ಮಾಡಿಕೊಂಡಿದ್ದರು.

ಯಡ್ಡಿ ಲೆಕ್ಕಾಚಾರ ತಪ್ಪಾಗಲಿಲ್ಲ, ಬದಲಾವಣೆ ಸಿದ್ದ ಜನ 1996ರ ಚುನಾವಣೆಯಲ್ಲಿ ನೂರು ಶಿವಶಂಕರಪ್ಪರನ್ನು ಸೋಲಿಸಿ ಮಲ್ಲಿಕಾರ್ಜುನಪ್ಪನನ್ನು ಗೆಲ್ಲಿಸಿದ್ದರು. ಗೆಲುವಿಗೋಸ್ಕರ ಮಲ್ಲಿಕಾರ್ಜುನಪ್ಪನ ಅಡಿಕೆ ಗಂಟು ಭರ್ಜರಿಯಾಗಿ ುತ್ತು ಮತ್ತು ಗೆದ್ದ ನಂತರ ಅಷ್ಟೇ ವೇಗದಲ್ಲಿ ದ್ವಿಗುಣವಾಯ್ತು ಎನ್ನುವುದು ಮಾತು. ಆದರೆ ಅದರಿಂದ ಕ್ಷೇತ್ರವೇನೂ ಉದ್ಧಾರವಾಗಲಿಲ್ಲ. ಆ ಷ್ಟು ಬದುಕು ದಿನಗಳೇನು ಇರಲಿಲ್ಲ, 1998ರ ಚುನಾವಣೆಯ ವೇಳೆಗಾಗಲಿ ಗೆ ಹಳೇ ಧಣಿ ಶಾಮನೂರ ಬೆಸ್ಟ್ ಆಗಿತ್ತು, ಹಾಗಾಗಿ ಶಿವಶಂಕರಪ್ಪನೆ , ಸೋತು ಮಲ್ಲಿಕಾರ್ಜುನಪ್ಪ ಮನೆಸೇರಬೇಕಾಯಿತು. ಆದರೆ 1999ರ ಚುನಾವಣೆಯಲ್ಲಿ ಮಲ್ಲಿಕಾರ್ಜುನಪ್ಪ ಮತ್ತೆ ಗೆದ್ದು ಐದು ವರ್ಷ ಅವಧಿ ಪೂರ್ಣಗೊಳಿಸಿದ್ದರು.


ವಿಪರೀತ ವಯಸ್ಸಾಗಿದ್ದ ಮಲ್ಲಿಕಾರ್ಜುನಪ್ಪ ದಿವಂಗತವಾದ ನಂತರ ಅವರ ಉತ್ತರಾಧಿಕಾರಿಯಾಗಿ ಮಗ ಜಿ.ಎಂ.ಸಿದ್ದೇಶ್ವರ 2004ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಯಡ್ಡಿ ಆಣತಿಯಂತೆ ತಂದೆಯ ಸಾವಿನ ಸಿಂಪಥಿಯನ್ನೇ ತನ್ನ ರಾಜಕೀಯ ಅಸ್ತ್ರವಾಗಿ ಬಳಸಿಕೊಂಡ ಸಿದ್ದೇಶ್ವರ ಆ ಚುನಾವಣೆಯಲ್ಲಿ ಗೆಲುವು ಕಂಡಿದ್ದರು. ತನ್ನ ಅವಧಿಯಲ್ಲಿ ಅಂತಹ ಘನಂದಾರಿ ಕೆಲಸಗಳನ್ನೇನು ಕ್ಷೇತ್ರಕ್ಕಾಗಿ ಮಾಡದಿದ್ದರೂ 2009ರ ಚುನಾವಣೆಯಲ್ಲಿ ಎರಡನೇ ಬಾರಿಗೆ ಸಿದ್ದೇಶ್ವರ ಗೆದ್ದು ಬರಲು ಆಗ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರವೇ ಕಾರಣವಾಗಿತ್ತು.

ಹ್ಯಾಟ್ರಿಕ್ ಕನಸು ಭಗ್ನ?


ಹಾಗೆ ನೋಡಿದರೆ ಈ ಚುನಾವಣೆ ಬಿಜೆಪಿಯ ಸಿದ್ದೇಶ್ವರರ ಪಾಲಿಗೆ ಅಪಶಕುನವಾಗುವ ಲಕ್ಷಣಗಳೇ ಹೆಚ್ಚಾಗಿವೆ. ವ್ಯಾಪಾರಿ ಬುದ್ಧಿಯ ಕ್ಯಾಪಿಟಲಿಸ್ಟ್ ರಾಜಕಾರಣಿ ಸಿದ್ದೇಶ್ವರಗಿಂತ ಕೈ ಅಭ್ಯರ್ಥಿಯಾಗಿರುವ ಎಸ್.ಎಸ್. ಮಲ್ಲಿಕಾರ್ಜುನ್‌ರ ಯುವಸ್ಫೂರ್ತಿ, ಕ್ಷೇತ್ರಾಭಿವೃದ್ಧಿಯ ಕಾಳಜಿ ಎದ್ದು ಕಾಣುತ್ತದೆ. ಎಸ್.ಎಂ.ಕೃಷ್ಣರ ಸರಕಾರದಲ್ಲಿ ಕ್ರೀಡಾ ಮತ್ತು ಯುವಜನಮಂತ್ರಿಯಾಗಿ ಕೆಲಸ ಮಾಡಿದ ಅನುಭವ ಇರುವ ಮಲ್ಲಿಕಾರ್ಜುನ್‌ಗೆ ಕಳೆದ್ದ ಸೋಲುಗಳ ಸಿಂಪಥಿಯ ಲಾಭವೂ ಸಿಗಲಿದೆ. ಅಲ್ಲದೆ ತಾನು ಮಂತ್ರಿಯಾಗಿದ್ದಾಗ ಕುಂದುವಾಡದ ಕೆರೆಯ ಅಭಿವೃದ್ಧಿಪಡಿಸಿ ನಾಗಾಲೋಟದಲ್ಲಿ ಬೆಳೆಯುತ್ತಿರುವ ದಾವಣಗೆರೆ ನಗರಕ್ಕೆ ಶಾಶ್ವತ ಕುಡಿಯುವ ನೀರು ಕಲ್ಪಿಸಿದ ಯೋಜನೆಯೂ ಅವರ ನೆರವಿಗೆ ಬರಲಿದೆ. ಇತ್ತೀಚೆಗೆ ಶಾಸಕರಾದ ಮೇಲೆ ಹದಡಿ ಕೆರೆ ಅಭಿವೃದ್ಧಿಗೆ ಮುಂದಾದ ಮಲ್ಲಿಕಾರ್ಜುನ್ ಗ್ರಾಮೀಣ ಭಾಗದಲ್ಲೂ ವಿಶ್ವಾಸ ಗಳಿಸಿಕೊಂಡಿದ್ದಾರೆ. ಅಲ್ಲದೆ ದಾವಣಗೆರೆಯ ಮುಕ್ಕಾಲು ಪಾಲು ವಿದ್ಯಾಸಂಸ್ಥೆ, ಬ್ಯಾಂಕ್, ಆಸ್ಪತ್ರೆಗಳ ಒಡೆತನ ಹೊಂದಿರುವ ಶಾಮನೂರು ಕುಟುಂಬದ ಮಲ್ಲಿಕಾರ್ಜುನ್‌ಗೆ ಬೃಹತ್ ಸಂಖ್ಯೆಯಲ್ಲಿರುವ ತಮ್ಮ ನೌಕರರ ಓಟುಗಳಂತೂ ನಿಕ್ಕಿಯಾಗಿವೆ.

ಕಾಂಗ್ರೆಸ್ ಟಿಕೆಟ್ ಸಿಗಲಿಲ್ಲವೆಂದು ಬಂಡಾಯವೆದ್ದು ಈಗ ಜೆಡಿಎಸ್‌ನಿಂದ ಸ್ಪರ್ಧಿಸಿರುವ ಮಹಿಮಾ ಪಟೇಲ್ 'ನಾನು ಹಣ ಹೆಂಡ ಹಂಚುವುದಿಲ್ಲ; ನನ್ನ ಮುಖ ನೋಡದಿದ್ದರೂ ನನ್ನ ತಂದೆ, ದಿವಂಗತ ಜೆ.ಹೆಚ್. ಪಟೇಲರ ಮುಖ ನೆನಪಿಸಿಕೊಂಡು ಮತನೀಡಿ' ಅಂತ ಮತದಾರರನ್ನು ಎಡತಾಕುತ್ತಿದ್ದಾರಾದರು ಉಳಿದವರ 'ಪ್ರಚಾರ ವೈಖರಿ'ಗಳ ಮುಂದೆ ಮಹಿಮಾ ... ಮತದಾರರಿಗೆ ಒಗ್ಗುವುದು ಡೌಟು. ಒಟ್ಟಿನ... ಪಟೇಲ್ ಇಲ್ಲಿ ಗೆಲ್ಲುವ ಅಭ್ಯರ್ಥಿ ... ಸೋಲಿಸುವ ಅಭ್ಯರ್ಥಿಯಂತೂ ಖಂಡಿತ ... ನೋಡಿದರೆ, ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಾರ್ಟಿಗಳ ಮತ ಕೀಳುವ ತಾಕತ್ತು ಮಹಿಮಾ ಪಟೇಲ್‌ಗಿದೆ. ಒಂದುಕಡೆ, ಬಿಜೆಪಿಗೆ ಕಟ್ಟಿ... ುತ್ತಿಯಂತಿದ್ದ ಪಂಚಮಸಾಲಿ ಲಿಂಗಾಯತರ ಮತಗಳಿಗೆ ಕನ್ನ ಹಾಕಿ... ಮತ್ತೊಂದೆಡೆ ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳಾದ ಮುಸ್ಲಿಮರು ... ಹಿಂದುಳಿದ ಓಟುಗಳಿಗೂ ತಕ್ಕಮಟ್ಟಿಗೆ ಕೈಹಾಕುವ ಸಾಧ್ಯತೆ ಇದೆ. ಪರಸ್ಪರ ಕಾದಾಡುವುದರ ಜೊತೆಗೆ ಮಹಿಮನ ಇಂಥಾ 'ಕೀಳುವ' ರಾಜಕಾರಣದ ನಡುವೆ ಬಿಜೆಪಿ ಅಥವಾ ಕಾಂಗ್ರೆಸಿನ ಗೆಲುವು ಎದ್ದುಬರಬೇಕಿದೆ.

ಮಹಿಮಾ ಈ ಬಾರಿ ನಿರ್ಣಾಯಕವೆಂಬುದೇನೋ ನಿಜ. ಆದರೆ ಆತನಿಂದ ಕಾಂಗ್ರೆಸ್‌ಗೆ ಆಗುವ ಲುಕ್ಸಾನಿಗಿಂತ ಬಿಜೆಪಿಗೆ ಬೀಳುವ ಏಟೇ ಗಟ್ಟಿಯಾಗಿದೆ. ಕ್ಷೇತ್ರದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಕುರುಬ ಸಮುದಾಯದ ಮತಗಳು 'ಕೈ'ಬಿಟ್ಟು ಹೋಗದಂತೆ ಕಾಂಗ್ರೆಸ್ ಸಿದ್ಧರಾಮಯ್ಯನವರ ಹೆಸರನ್ನು ಬಳಸಿಕೊಳ್ಳಲಿದೆ. ಸಿದ್ಧರಾಮಯ್ಯ ಐದು ವರ್ಷ ಮುಖ್ಯ... ರಬೇಕು ಎನ್ನುವ ಕನಸಿನಿಂದ ಹರಿಹರ ವಿಧಾನಸಭಾ ಕ್ಷೇತ್ರದಲ್ಲಿ ಕ... ತಿದ್ದ ರಾಮಪ್ಪ, ವೈ.ನಾಗಪ್ಪನಂಥಾ ಘಟಾನುಘಟಿಗಳು ಹರಿಹರ ಹೊನ್ನಾಳಿ ಭಾಗದಲ್ಲಿ ಅಧಿಕವಿರುವ ಕುರುಬ ಸಮುದಾಯವನ್ನು ಎಚ್ಚರಿಸುತ್ತಲೇ ಕಾಂಗ್ರೆಸ್ಸಿಂದ ವಿಮುಖರಾಗದಂತೆ ನೋಡಿಕೊಳ್ಳುತ್ತಿದ್ದಾರೆ. ಹರಿಹರದ ಮಾಜಿ ಶಾಸಕ ಹರೀಶ ಬಿಜೆಪಿ ಬಿಟ್ಟು ಕೈಪಾಳಯಕ್ಕೆ ಬಂದಿರುವುದು ಕಾಂಗ್ರೆಸ್‌ನ ಮತ ವಿಭಜನೆಯನ್ನು ತಕ್ಕಮಟ್ಟಿಗೆ ತಡೆಯಲು ಸಹಕಾರಿಯಾಗಲಿದೆ. ಯಾಕೆಂದರೆ ಅಲ್ಪಸ್ವಲ್ಪ ಕುರುಬರು ಮತ್ತು ಸಾದು ಲಿಂಗಾಯತರ ಮತಗಳ ಮೇಲೆ ಈತನ ಹತೋಟಿ ಇದೆ.




ಹೊನ್ನಾಳಿಯಲ್ಲಿ ರೇಣುಕಾಚಾರ್ಯನೆಂಬ ನರ್ಸ್‌ಗಿರಾಕಿ ಕ್ಷೇತ್ರವನ್ನೇ ಬಿಟ್ಟು ಶಿಕಾರಿಪುರದಲ್ಲಿ ಬಿಡಾರ ಹೂಡಿದ್ದಾನೆ. ತನ್ನ ಮಾನಸಿಕ ತಂದೆ ಯಡ್ಡಿ ಗೆಲುವಿಗೆ ಬೆವರಿಳಿಸುವುದೇ ಆತನ ಶಿಕಾರಿಪುರ ವಾಸ್ತವ್ಯದ ಘನುದಾರಿ ಉದ್ದೇಶ. ಆಗಾಗ್ಗವಾಗ ಬಂದು ತನ್ನ ಪಟಾಲಂಗಳ ನಡುವೆ ಮನಸ್ಸಿಲ್ಲದ ಮನಸ್ಸಿನಿಂದ 'ಸಿದ್ದೇಶ್ವರರನ್ನು ಗೆಲ್ಲಿಸಿ, ಮೋದಿಜಿ ಕಿ ಜೈ' ಎಂದು ಗಾಳಿ ಗುದ್ದಿ ಶಿಕಾರಿಪುರದತ್ತ ಕಣ್ಮರೆಯಾಗುತ್ತಿದ್ದಾನೆ.



ಜಗಳೂರಿನಲ್ಲಂತೂ ಬಿಜೆಪಿಯ ಮಾಜಿ ಶಾಸಕ ಗುರುಸಿದ್ದನಗೌಡ, ಸಿದ್ದೇಶ್ವರ ವಿರುದ್ಧವೇ ಮುನಿಸಿಕೊಂಡಿದ್ದಾರೆ. ತನ್ನನ್ನು ಕ್ಯಾರೆ ಅಂದಿಲ್ಲ ಎನ್ನುವುದೇ ಅವರ ಸಿಟ್ಟಿನ ಕಾರಣ. ಗುರುಸಿದ್ದನ ಗೌಡರಷ್ಟೇ ಅಲ್ಲ ಪಕ್ಷದ ಕಾರ್ಯಕರ್ತರನ್ನೇ ಕಡೆಗಣಿಸಿ ಕೇವಲ ಮೋದಿ ಜಪದಲ್ಲಿ ಗೆದ್ದು ಬಿಡುತ್ತೇನೆಂದು ಹೊರಟಿರುವ ಸಿದ್ದೇಶ್ವರ್‌ಗೆ ಕಾರ್ಯಕರ್ತರ ಬೆಂಬಲವೇ ಇಲ್ಲ. ಮಾಜಿ ತರಕಾರಿ ಮಂತ್ರಿ ರವೀಂದ್ರನಾಥ ಜಪ್ಪಯ್ಯವೆಂದರೂ ಸಿದ್ದೇಶ್ವರ್ ಪರ ಪ್ರಚಾರಕ್ಕೆ ಬರುತ್ತಿಲ್ಲ. ಅನಾರೋಗ್ಯದ ನೆಪವೊಡ್ಡಿ ಮನೆಯಲ್ಲಿದ್ದುಕೊಂಡೆ ಸಿದ್ದೇಶ್ವರ ಸೋಲು-ಗೆಲುವು ನಿಯಂತ್ರಿಸುವ ಹೊಸ ತಂತ್ರ ಶುರು ಮಾಡಿಕೊಂಡಿರುವ ರವೀಂದ್ರನಾಥ್ ಬಿಜೆಪಿ ಸೋಲಿನ ಮುನ್ನುಡಿಯಂತೆ ಕಾಣುತ್ತಿದ್ದಾರೆ.




ಇದರ ಜೊತೆಗೆ ಜಾತಿವಾರು ಮತಗಳ ಲೆಕ್ಕಾಚಾರವೂ ಸಿದ್ದೇಶ್ವರನ ದಂಗುಬಡಿಸಿದೆ. ಕ್ಷೇತ್ರದಲ್ಲಿರುವ ಒಟ್ಟು ಮತಗಳ ಸಂಖ್ಯೆ 12.6 ಲಕ್ಷ. ಅವುಗಳಲ್ಲಿ 4.6 ಲಕ್ಷ ಲಿಂಗಾಯತ ಮತಗಳಿದ್ದರೆ (ಒಳಪಂಗಡಗಳು ಸೇರಿ) ಉಳಿದ 7.80 ಲಕ್ಷ ಮತಗಳು ಕುರುಬರು, ಮುಸ್ಲಿಮರು, ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ ನಡುವೆ ಹಂಚಿಹೋಗಿವೆ. ಲಿಂಗಾಯತ ಮತಗಳ ಮೇಲೆ ಬಿಜೆಪಿ ಮತ್ತು ಕಾಂಗ್ರೆಸ್‌ನ ಸಮ ಹಿಡಿತವಿದ್ದರೂ ಜೆಡಿಎಸ್ ಕನ್ನದಿಂ... ವು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸದಷ್ಟು ಹರಿದುಹಂಚಿಹೋಗುವ ಸಂಭವವೇ ಹೆಚ್ಚು. ಇನ್ನುಳಿದ 7.80 ಲಕ್ಷ ಅಹಿಂದ ಮತಗಳ ಮೇಲೆ ಬಹುತೇಕ ಕಾಂಗ್ರೆಸಿನ ಹಿಡಿತವಿದೆ. ಕಳೆದ ಬಾರಿ ಚನ್ನಗಿರಿ ಕ್ಷೇತ್ರ ಎಸ್.ಎಸ್. ಮಲ್ಲಿಕಾರ್ಜುನರಿಗೆ ಕೈ ಕೊಟ್ಟಿತ್ತು ಎಂಬುದನ್ನು ಬಿಟ್ಟರೆ ಉಳಿದಂತೆ ಎಲ್ಲಾ ಏಳು ಕ್ಷೇತ್ರಗಳಲ್ಲೂ ಕಾಂಗ್ರೆಸ್‌ನ ಮತಗಳಿಕೆ ಉತ್ತಮವಾಗಿಯೇ ಇತ್ತು. ಈ ಬಾರಿ ಚನ್ನಗಿರಿಯಲ್ಲೂ ಕೈ ಶಾಸಕನೇ ಇರುವುದು ಕಾಂಗ್ರೆಸ್‌ನ ಪ್ಲಸ್‌ಪಾಯಿಂಟ್. ಮಹಿಮಾ ಪಟೇಲ್ ಕೂಡಾ ಸ್ಪರ್ಧೆಯಲ್ಲಿರುವುದರಿಂದ ಕಳೆದ ಬಾರಿ ಬಿಜೆಪಿಗೆ ಸಾಲಿಡ್ಡಾಗಿ ಒಲಿದಿದ್ದ ಚನ್ನಗಿರಿಯ ಮತಗಳು ಹಂಚಿಹೋಗುವುದರಲ್ಲಿ ನೋ ಡೌಟ್. ಈ ಭಯ ಸಿದ್ದೇಶ್ವರ್‌ರಲ್ಲಿ ಎದ್ದು ಕಾಣುತ್ತಿದೆ. ಹಾಗಾಗಿಯೇ ನಡುರಾತ್ರಿಯಲ್ಲಿ ಹರಿಹರದ ಜೆಡಿಎಸ್ ಶಾಸಕ ಶಿವಶಂಕರರ (ಬಣಜಿಗ ಲಿಂಗಾಯತ) ಮನೆಯ ಕದತಟ್ಟಿ ನನ್ನನ್ನು ಕಾಪಾಡಿ ಎಂದು ದಯನೀಯವಾಗಿ ಅಂಗಲಾಚುತ್ತಿದ್ದಾರೆ. ಶಿವಶಂಕರ ಮತ್ತು ಮಹಿಮಾ ನಡುವೆ ರಾಜಕೀಯ ಸಂಬಂಧಗಳು ಅಷ್ಟಾಗಿ ಸರಿಯಿಲ್ಲದ ಕಾರಣವನ್ನೇ ಲಾಭಮಾಡಿಕೊಳ್ಳುವ ಹುನ್ನಾರಕ್ಕೆ ಸಿದ್ದೇಶ್ವರ ಕೈಹಾಕಿದ್ದಾರೆ.





ಮಹಿಮಾ ಪಟೇಲ್



ಅಂತೂಇಂತೂ ಭದ್ರಕೋಟೆ ಅಂತ ಬೀಗುತ್ತಿದ್ದ ದಾವಣಗೆರೆಯಲ್ಲಿ ಬಿಜೆಪಿ ತಡವರಿಸುತ್ತಿದ್ದರೆ ಕಾಂಗ್ರೆಸ್‌ನ ಶಾಮನೂರು ಕುಟುಂಬ ತನ್ನ ಗತವೈಭವ ದಕ್ಕಿಸಿಕೊಳ್ಳಲು ತುದಿಗಾಲ ಮೇಲೆ ನಿಂತಿದೆ. ರಾಜಕಾರಣದ ಸಮೀಕ್ಷೆಗಳನ್ನೆಲ್ಲ ಅನ್ವಯಿಸಿ ನೋಡುವುದಾದರೆ ಬಿಜೆಪಿಯ ಸಿದ್ದೇಶ್ವರ ಮಾಜಿ ಆಗುವುದು ಬಹುತೇಕ ಖಚಿತವಾದಂತಿದೆ. ಮತದಾರ ಅಧಿಕೃತವಾಗಿ ತೀರ್ಪು ನೀಡುವುದಷ್ಟೇ ಬಾಕಿ.

● ಟಿ.ಎನ್.ಷಣ್ಮುಖ

ಯಡಿಯೂರಪ್ಪನಿಗೆ ಏಡ್ಸ್ ಬರಲಿ ಎಂದವನೇ ಬಿಜೆಪಿ ಅಭ್ಯರ್ಥಿ

ರಂಗೇರುತ್ತಿರುವ ರಾಯಚೂರು ಲೋಕಸಭಾ ಚುನಾವಣೆಯಲ್ಲಿ ಜಾತಿಸಮೀಕರಣ, ಅಭ್ಯರ್ಥಿಗಳ ವೈಯಕ್ತಿಕ ವರ್ಚಸ್ಸುಗಳು ನಿರ್ವಹಿಸುವ ಪಾತ್ರಗಳನ್ನು ತಲಸ್ಪರ್ಶಿಯಾಗಿ ವಿಶ್ಲೇಷಿಸಿದ್ದಾರೆ ದೊಡ್ಡಿಪಾಳ್ಯ ನರಸಿಂಹಮೂರ್ತಿ.

ಚುನಾವಣೆಯ ದಿನಾಂಕ ಸಮೀಪಿಸಲಾರಂಭಿಸಿದಂತೆಯೇ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ ರಾಯಚೂರು ಲೋಕಸಭಾ ಕ್ಷೇತ್ರದ ಚಿತ್ರಣವೂ ಸ್ಪಷ್ಟವಾಗಲಾರಂಭಿಸಿದೆ. ಪ್ರಚಾರದ ಭರಾಟೆ ತೀವ್ರವಾಗಿರುವ ಈ ಕ್ಷೇತ್ರದಲ್ಲಿ ಅಂತಿಮವಾಗಿ ಯಾರು ಗೆಲುವಿನ ನಗೆ ಬೀರಬಹುದು ಎಂಬುದನ್ನು ವಿಶ್ಲೇಷಿಸುವ ಮೊದಲು ಈ ಕ್ಷೇತ್ರದಲ್ಲಿ ಅಂತಿಮವಾಗಿ ಕಣದಲ್ಲಿ ಉಳಿದಿರುವ ಅಭ್ಯರ್ಥಿಗಳ ಮೇಲೆ ಸ್ವಲ್ಪ ಕಣ್ಣಾಡಿಸೋಣ.

ರಾಯಚೂರು ಲೋಕಸಭಾ ಕ್ಷೇತ್ರದಲ್ಲಿ ದೇವದುರ್ಗದ ಶಾಸಕ ಹಾಗೂ ಹಿರಿಯ ಕಾಂಗ್ರೆಸ್ ರಾಜಕಾರಣಿ ಎ.ವೆಂಕಟೇಶ ನಾಯಕ ಅವರ ಮಗ ಬಿ.ವಿ.ನಾಯಕ ಕಾಂಗ್ರೆಸ್ ಪಕ್ಷದಿಂದ ಕಣಕ್ಕಿಳಿದಿದ್ದರೆ ಅದೇ ವೆಂಕಟೇಶ ನಾಯಕರ ಮೊಮ್ಮಗ ಕೆ. ಶಿವನಗೌಡ ನಾಯಕ ಬಿಜೆಪಿಯಿಂದ ಕಣದಲ್ಲಿದ್ದಾರೆ. ಇನ್ನು ಜೆಡಿಎಸ್ ಪಕ್ಷಕ್ಕೆ ಕ್ಷೇತ್ರದಲ್ಲಿ ಅಭ್ಯರ್ಥಿಯೇ ಸಿಗದಿದ್ದಾಗ ಕೊನೆಗಳಿಗೆಯಲ್ಲಿ ಹೊರ ಜಿಲ್ಲೆಯಿಂದ ಡಿ.ಬಿ.ನಾಯಕ ಎಂಬ ನಿವೃತ್ತ ಕೆ.ಎ.ಎಸ್. ಅಧಿಕಾರಿಯನ್ನು ಹಿಡಕೊಂಡು ಬಂದು ನಿಲ್ಲಿಸಿದ್ದಾರೆ. ಆಮ್ ಆದ್ಮಿ ಪಕ್ಷದಿಂದ ಭೀಮರಾಯ ಜರದಬಂಡಿ ಎಂಬ ಸಾಮಾನ್ಯ ರೈತ ಮತ್ತು ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯ (ಮಾರ್ಕ್ಸಿಸ್ಟ್-ಲೆನಿನಿಸ್ಟ್) ಪಕ್ಷದಿಂದ ನಾಗರಾಜ್ ಎಂಬ ಕಾರ್ಯಕರ್ತ ಕಣಕ್ಕಿಳಿದಿದ್ದಾರೆ. ಪಕ್ಷೇತರ ಅಭ್ಯರ್ಥಿಗಳಾಗಿ ಕೆಲವರು, ಬಿಎಸ್‌ಪಿ, ಸೂಸೈಗಳಂತಹ ಸಣ್ಣಪುಟ್ಟ ಪಕ್ಷಗಳಿಂದಲೂ ಜನ ಸ್ಪರ್ಧಿಸಿದ್ದಾರೆ.

ಕಣದಲ್ಲಿ ಎಷ್ಟೇ ಹುರಿಯಾಳುಗಳಿದ್ದರೂ ಹೋರಾಟವೇನಿದ್ದರೂ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ನಡುವೆಯೇ ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಆದರಲ್ಲಿ ಗೆಲ್ಲುವ ಕುದುರೆ ಯಾರು ಎಂಬುದೂ ಬಹುತೇಕ ತೀರ್ಮಾನವಾದ ಅಂಶ.

ಇಲ್ಲಿ ಇನ್ನೊಂದು ಅಂಶವನ್ನು ಸ್ಪಷ್ಟಪಡಿಸಬೇಕು. ಇಲ್ಲಿ ನರೇಂದ್ರ ಮೋದಿ ಅಲೆ, ರಾಹುಲ್ ಗಾಂಧಿ ಅಲೆ, ಆಮ್ ಆದ್ಮಿ ಪಾರ್ಟಿಯ ಅಲೆ - ಈ ಯಾವ ಅಲೆಗಳೂ ರಾಯಚೂರು ಮತದಾರರನ್ನು ಅಷ್ಟಾಗಿ ಪ್ರಭಾವಿಸಿಲ್ಲ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಸೈದ್ಧಾಂತಿಕ ನಿಲುವುಗಳು, ಆಚರಣೆಗಳು ಮತ್ತು ತತ್ವಸಿದ್ಧಾಂತಗಳೂ ಜನರನ್ನು ಪ್ರಭಾವಿಸಿಲ್ಲ. ಇಲ್ಲಿ ನಡೆಯುವ ಎಲ್ಲಾ ಚುನಾವಣೆಗಳೂ ವ್ಯಕ್ತಿ ಕೇಂದ್ರಿತವಾಗಿರುತ್ತವೆ.

ಆರಂಭದಲ್ಲಿ ಜೆಡಿಎಸ್ ರಾಜಾ ಅಮರೇಶ ನಾಯಕ ಎಂಬ ಇದ್ದುದರಲ್ಲಿ ಉತ್ತಮ ಅಭ್ಯರ್ಥಿಯನ್ನೇ ಮೊದಲು ಘೋಷಿಸಿತ್ತು. ಆದರೆ, ಅವರಿಗೆ ಜೆಡಿಎಸ್‌ನಿಂದ ಕಣಕ್ಕಿಳಿಯುವುದು ಇಷ್ಟವಿರಲಿಲ್ಲ. "ನಾನು ಒಲ್ಲೆ ಎಂದರೂ ನನ್ನನ್ನು ಬಲವಂತವಾಗಿ ಪಕ್ಷದ ನಾಯಕರು ಕಣಕ್ಕಿಳಿಸಿದ್ದಾರೆ" ಎಂದು ಕಂಡಕಂಡಲ್ಲಿ, ಮಾಧ್ಯಮಗಳ ಎದುರು ಹೇಳುತ್ತಾ ಅವರು ಪಕ್ಷದ ನಾಯಕತ್ವಕ್ಕೆ ಇರುಸುಮುರುಸು ಮಾಡಿದ್ದರು. ಇದರ ಸದುಪಯೋಗ ಮಾಡಿಕೊಂಡ ಕಾಂಗ್ರೆಸ್ ನಾಯಕರು ತಡಮಾಡದೇ ಕಾಂಗ್ರೆಸ್‌ನಲ್ಲಿ ಉತ್ತಮ ಸ್ಥಾನಮಾನ ಕೊಡುವುದಾಗಿ ಭರವಸೆ ಕೊಟ್ಟು ಅಮರೇಶ ನಾಯಕರನ್ನು ಕಾಂಗ್ರೆಸ್ ಪಕ್ಷಕ್ಕೆ ಸೆಳೆದರು.

ಕ್ಷೇತ್ರದಲ್ಲಿ ಅಭ್ಯರ್ಥಿಯನ್ನು ಕಣಕ್ಕಿಳಿಸದೇ ಇದ್ದರೆ ಆ ಪಕ್ಷದ ಅಸ್ತಿತ್ವಕ್ಕೇ ದೊಡ್ಡ ಹೊಡೆತ ಬೀಳುತ್ತದೆ ಎಂದು ಅರ್ಥಮಾಡಿಕೊಂಡ ದೊಡ್ಡಗೌಡರು ಮತ್ತು ಕುಮಾರಸ್ವಾಮಿ ಡಿ.ಬಿ.ನಾಯಕ ಎಂಬ ಹೊರಗಿನವರನ್ನು ಕರೆದುಕೊಂಡು ಬಂದು ಕಣಕ್ಕಿಳಿಸಿದ್ದಾರೆ.

ಇನ್ನು ಬಿಜೆಪಿ ಕ್ಷೇತ್ರದಾದ್ಯಂತ ತಳಮಟ್ಟದಲ್ಲಿ ಕಾರ್ಯಕರ್ತರನ್ನು ಹೊಂದಿರುವ ಪಕ್ಷವೇನೋ ಹೌದು. ಆದರೆ, ಆ ಪಕ್ಷಕ್ಕೆ ಅತಿದೊಡ್ಡ ಶತ್ರು ಅಥವಾ ತೊಡಕು ಎಂದರೆ ಅದೇ ಪಕ್ಷದಿಂದ ಕಣಕ್ಕಿಳಿಯುತ್ತಿರುವ ಕೆ.ಶಿವನಗೌಡ ನಾಯಕ! ಇದು ನಂಬಲು ಸ್ವಲ್ಪ ಕಷ್ಟವಾದರೂ ನಂಬಲೇಬೇಕಾದ ಕಟುಸತ್ಯ. ಅದಕ್ಕೆ ಕಾರಣ ಶಿವನಗೌಡನ ರಾಜಕೀಯ ಅವಕಾಶವಾದಿತನ. ಅಧಿಕಾರಕ್ಕಾಗಿ ಆತ ಎಷ್ಟು ಬೇಕಾದರೂ ಪಕ್ಷಗಳನ್ನು ಬದಲಾಯಿಸಬಲ್ಲ. ಅಂತೆಯೇ ದುಡ್ಡು ಸಿಗುತ್ತದೆಂದರೆ ಎಂತಹ ಭ್ರಷ್ಟಾಚಾರಕ್ಕೂ ಇಳಿಯಬಲ್ಲ ನೀಚ ಎಂಬುದನ್ನೂ ಜನ ಕಣ್ಣಾರೆ ಕಂಡಿದ್ದಾರೆ (ಬಾಕ್ಸ್ ನೋಡಿ).

ಇದ್ದುದರಲ್ಲಿ ಕಾಂಗ್ರೆಸ್ ಪರಿಸ್ಥಿತಿ ಚೆನ್ನಾಗಿದೆ. ಕ್ಷೇತ್ರದಲ್ಲಿ ಒಟ್ಟು 16 ಲಕ್ಷ ಮತದಾರರಿದ್ದಾರೆ. ಅವರಲ್ಲಿ ಎರಡೂವರೆ ಲಕ್ಷ ಮತದಾರರು ಮುಸ್ಲಿಮರು. ಬಿಜೆಪಿ ಗೆದ್ದು ಮೋದಿ ಪ್ರಧಾನಿಯಾದರೆ ತಮ್ಮಂತಹ ಅಲ್ಪಸಂಖ್ಯಾತ ಸಮುದಾಯಗಳ ಕತೆಯೇನು ಎಂದು ಈಗಲೇ ಅವರು ಆತಂಕಿತರಾಗಿದ್ದಾರೆ. ಶಿವನಗೌಡನನ್ನು ಸೋಲಿಸಿದರೆ ರಾಷ್ಟ್ರಮಟ್ಟದಲ್ಲಿ ಬಿಜೆಪಿಗೆ ಒಂದು ಸೀಟಾದರೂ ಕಡಿಮೆಯಾಗುತ್ತದೆ ಎಂಬುದು ಅವರ ಲೆಕ್ಕಾಚಾರ. ಶಿವನಗೌಡ ಸೋಲಬೇಕಾದರೆ ಮುಸ್ಲಿಮರು ಕಾಂಗ್ರೆಸ್ ಅಭ್ಯರ್ಥಿ ಬಿ.ವಿ. ನಾಯಕರನ್ನು ಬೆಂಬಲಿಸಲೇಬೇಕಾಗುತ್ತದೆ. ಹೀಗಾಗಿ ಮುಸ್ಲಿಂ ಮತಗಳು ಒಡೆಯದಂತೆ ಇಡಿಯಾಗಿ ಕಾಂಗ್ರೆಸ್‌ಗೆ ಹಾಕಿಸಲು ಆ ಸಮುದಾಯದ ಮುಖಂಡರು ತೀರ್ಮಾನಿಸಿರುವುದು ಗುಟ್ಟಾಗಿ ಉಳಿದಿಲ್ಲ.

ಇನ್ನು ಕುರುಬರದು ಎರಡೂವರೆ ಲಕ್ಷ ಮತಗಳಿವೆ. ರಾಜ್ಯದಲ್ಲಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕನಿಷ್ಠ 18 ಸೀಟುಗಳನ್ನಾದರೂ ಗೆಲ್ಲದಿದ್ದರೆ ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಕುರ್ಚಿಯಿಂದ ಕೆಳಗಿಳಿಸುತ್ತಾರೆ ಎಂದು ಈಗಾಗಲೇ ಕುರುಬ ಸಮುದಾಯದಲ್ಲಿ ಆತಂಕ ಸೃಷ್ಟಿಯಾಗಿದೆ. ಹೀಗಾಗಿ, ರಾಜ್ಯಾದ್ಯಂತ ಕುರುಬರು ಇಡಿಯಾಗಿ ಕಾಂಗ್ರೆಸ್ ಕಡೆಗೆ ವಾಲಲಾರಂಭಿಸಿದ್ದಾರೆ. ಅದಕ್ಕೆ ರಾಯಚೂರು ಕೂಡ ಹೊರತಾಗಿಲ್ಲ. ನಿನ್ನೆ ಗುರುವಾರ ಕುರುಬರ ಸಂಘದ ಅಧ್ಯಕ್ಷ ಆರ್.ರಾಮು ಪತ್ರಿಕಾಗೋಷ್ಠಿ ನಡೆಸಿ ಇಡೀ ಕುರುಬ ಸಮುದಾಯ ಕಾಂಗ್ರೆಸ್ ಬೆನ್ನಿಗೆ ನಿಲ್ಲುವಂತೆ ನೋಡಿಕೊಳ್ಳುತ್ತೇವೆ ಎಂದು ಪ್ರಕಟಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಷ್ಟೂ ಸಿದ್ದರಾಮಯ್ಯನವರ ಕೈ ಬಲವಾಗುತ್ತೆ ಎಂಬುದು ಅವರ ಆಶೆ.


ಕ್ಷೇತ್ರದಲ್ಲಿ ಲಿಂಗಾಯತರ ಮೂರು ಲಕ್ಷ ಮತಗಳಿವೆ. 2008ರ ವಿಧಾನಸಭಾ ಚುನಾವಣೆಯಲ್ಲಿ ತಮ್ಮ

ಕೆ.ಶಿವನಗೌಡ ನಾಯಕ: ಏರಿದ ಏಣಿಯ ಒದೆಯುವ ಗರ್ವಿ

ಶಿವನಗೌಡ ಮೂಲತಃ ಕಾಂಗ್ರೆಸ್ ಮೂಲದವ. ದೇವದುರ್ಗದ ಹಾಲಿ ಎಮ್ಮೆಲ್ಲೆ ಹಾಗೂ ನಾಲ್ಕು ಬಾರಿ ರಾಯಚೂರು ಲೋಕಸಭಾ ಕ್ಷೇತ್ರವನ್ನು ಸಂಸತ್ತಿನಲ್ಲಿ ಪ್ರತಿನಿಧಿಸಿದ ಹಿರಿಯ ಕಾಂಗ್ರೆಸ್ ರಾಜಕಾರಣಿ ಎ.ವೆಂಕಟೇಶ ನಾಯಕ ಅವರ ಮಗಳ ಗಂಡನ ಅಣ್ಣನ ಮಗ. ಅಂದರೆ ವೆಂಕಟೇಶ ನಾಯಕರಿಗೆ ಈತ ಮೊಮ್ಮಗನಾಗಬೇಕು. ಈತನ ತಂದೆ ಹನುಮಂತರಾಯ ಬದುಕಿರುವ ತನಕ ಈತ ರಾಜಕೀಯದಲ್ಲಿ ಮಾತ್ರವಲ್ಲ, ಎಲ್ಲೂ ಸೀನ್‌ನಲ್ಲಿ ಇರಲಿಲ್ಲ. ಅವರು ಕಾಲವಾದ ನಂತರ ಅಜ್ಜ ವೆಂಕಟೇಶ ನಾಯಕ ಪಿಯುಸಿ ಫೇಲಾಗಿ ಅಂಡಲೆಯುತ್ತಿದ್ದ ಮೊಮ್ಮಗ ಶಿವನಗೌಡನಿಗೊಂದು ದಾರಿ ಮಾಡಿಕೊಡಬೇಕು ಎಂದು ಆರಕೆರೆಯಿಂದ ಗೆಲ್ಲಿಸಿ ದೇವದುರ್ಗ ತಾಲೂಕು ಪಂಚಾಯತಿ ಮೆಂಬರ್ ಮಾಡಿಸಿದರು. ವೆಂಕಟೇಶ ನಾಯಕರಿಗೆ ಕ್ಷೇತ್ರದ ಮೇಲೆ ಎಂತಹ ಹಿಡಿತವಿತ್ತೆಂದರೆ ಮೊಮ್ಮಗನ ವಿರುದ್ಧ ಯಾರೂ ಸ್ಪರ್ಧಿಸದಂತೆ ನೋಡಿಕೊಂಡು ಅವಿರೋಧವಾಗಿಯೇ ಆಯ್ಕೆ ಮಾಡಿಸಿದ್ದರು. ಗೆದ್ದ ತಕ್ಷಣವೇ ತಾಲೂಕು ಪಂಚಾಯತಿಯ ಉಪಾಧ್ಯಕ್ಷನನ್ನಾಗಿಯೂ, ತದನಂತರ ಅದರ ಅಧ್ಯಕ್ಷನನ್ನಾಗಿಯೂ ಮಾಡುವಲ್ಲಿ ವೆಂಕಟೇಶ ನಾಯಕ ಯಶಸ್ವಿಯಾಗಿದ್ದರು.

ಶಿವನಗೌಡನಿಗೆ ಭ್ರಷ್ಟಾಚಾರ ಎಂಬುದು ಆತನ ನರನಾಡಿಗಳಲ್ಲೇ ಹರಿಯುತ್ತಿತ್ತು. ಇಂತಿಪ್ಪ ಶಿವನಗೌಡ ತಾಲೂಕು ಪಂಚಾಯತಿಯ ಅಧ್ಯಕ್ಷನಾದರೆ ಆ ತಾಲೂಕಿನ ಗತಿಯೇನಾಗಿರಬೇಡ? ಏನಾಗಬಾರದಿತ್ತೋ ಅದೇ ಆಯಿತು. ಸರ್ಕಾರ ಬಡವರಿಗಾಗಿ ಜಾರಿಗೆ ತಂದಿದ್ದ 'ಕೂಲಿಗಾಗಿ ಕಾಳು' ಯೋಜನೆಯಲ್ಲಿ ಬಡವರಿಗೆ ಸಲ್ಲಬೇಕಿದ್ದ ಎಲ್ಲಾ ಕಾಳನ್ನು ಈತನೇ ನುಂಗಿ ಹಾಕಿದ. ಕೃಷ್ಣಾ ಬಲದಂಡೆ ಕಾಲುವೆ ಮತ್ತು ಉಪಕಾಲುವೆಗಳ ಕಾಮಗಾರಿಯಲ್ಲಿ ಭಾರಿ ಅವ್ಯವಹಾರಗಳನ್ನು ನಡೆಸಿದ. ಬಡವರಿಗಾಗಿ ಮಂಜೂರಾಗಿದ್ದ ಐದು ಸಾವಿರ ಮನೆಗಳನ್ನು ಕಟ್ಟಿಸದೆಯೇ ಬಿಲ್ ಎತ್ತಿಕೊಂಡ. ಒಂದೊಂದು ಮನೆಗೆ ಒಂದೂವರೆ ಲಕ್ಷ ರೂಪಾಯಿಯಂತೆ ಲೆಕ್ಕ ಹಾಕಿದರೂ ಅವನು ತಿಂದದ್ದು ಎಷ್ಟಾಗುತ್ತದೆ ನೀವೇ ಯೋಚಿಸಬಹುದು.

ಇದೇ ಅವಧಿಯಲ್ಲಿ ಶಿವನಗೌಡ ಒಂದು ಸಾಮೂಹಿಕ ಮದುವೆಯನ್ನು ಏರ್ಪಡಿಸಿ ಆ ಸಮಾರಂಭದಲ್ಲೇ ಆತನೂ ಮದುವೆಯಾದ. ಈ ಮದುವೆಯ ಖರ್ಚಿನ ಹೆಸರಿನಲ್ಲಿ ಇಡೀ ಕ್ಷೇತ್ರದಾದ್ಯಂತ ಎಲ್ಲಾ ಸರ್ಕಾರಿ ನೌಕರರನ್ನು ಪೀಡಿಸಿ ದುಡ್ಡು ವಸೂಲಿ ಮಾಡಿದ್ದ. "ಕೇಳಿದಷ್ಟು ದುಡ್ಡು ಕೊಡದಿದ್ದರೆ ಅಥವಾ ಕೊಡುವುದಕ್ಕೆ ಹಿಂದುಮುಂದು ನೋಡಿದರೆ ಚಾಕು ತೋರಿಸಿ ಬೆದರಿ ವಸೂಲಿ ಮಾಡುತ್ತಿದ್ದ" ಎಂದು



ಸರ್ಕಾರಿ ನೌಕರರು ಈಗಲೂ ನೆನಪಿಸಿಕೊಳ್ಳುತ್ತಾರೆ.

ಮೊಮ್ಮಗ ದಿನಕ್ಕೊಂದರಂತೆ ಮಾಡುತ್ತಿದ್ದ ಅವ್ಯವಹಾರಗಳಿಂದ ಅಜ್ಜ ವೆಂಕಟೇಶ ನಾಯಕ ಬೇಸತ್ತು ಹೋಗಿದ್ದರು. ಅಷ್ಟುಹೊತ್ತಿಗೆ ರಾಯಚೂರು ಜಿಲ್ಲಾ ಪಂಚಾಯತ್ ಚುನಾವಣೆಗಳು ಬಂದವು. ಆಗ ವೆಂಕಟೇಶ ನಾಯಕ ಮೊಮ್ಮಗನಿಗೆ ಟಿಕೆಟ್ ಸಿಗದಂತೆ ನೋಡಿಕೊಂಡರು. ಅದಕ್ಕೆ ಮೊಮ್ಮಗ ಅಡ್ಡ ಹಾದಿ ಹಿಡಿದು ಕ್ಷೇತ್ರದಾದ್ಯಂತ ಹೆಸರು ಕೆಡಿಸಿಕೊಂಡಿದ್ದು ಒಂದು ಕಾರಣವಾದರೆ, ತನ್ನ ಮಗ ರಾಜಶೇಖರ ನಾಯಕನಿಗೂ ರಾಜಕೀಯದಲ್ಲಿ ಒಂದಿಷ್ಟು ಜಾಗ ಮಾಡಿಕೊಡಬೇಕೆಂಬ ಉದ್ದೇಶವೂ ಅವರಿಗಿತ್ತು. ಹೀಗಾಗಿ, ಜಿಲ್ಲಾ ಪಂಚಾಯತ್ ಟಿಕೆಟ್ ಶಿವನಗೌಡನಿಗೆ ಸಿಗದಂತೆ ಮಾಡಿ ಮಗ ರಾಜಶೇಖರ ನಾಯಕನಿಗೆ ಕೊಡಿಸುವಲ್ಲಿ ವೆಂಕಟೇಶ ನಾಯಕ ಯಶಸ್ವಿಯಾಗಿದ್ದರು. ಇದರಿಂದ ರೊಚ್ಚಿಗೆದ್ದ ಶಿವನಗೌಡ ನಾಯಕ ತನ್ನನ್ನು ರಾಜಕೀಯಕ್ಕೆ ಕರೆದುಕೊಂಡು ಬಂದಿದ್ದ ಅಜ್ಜ ವೆಂಕಟೇಶ ನಾಯಕನ ವಿರುದ್ಧವೇ ಸೆಡ್ಡು ಹೊಡೆದ.

ಆಗ ಶಿವನಗೌಡನ ಬೆಂಬಲಕ್ಕೆ ಬಂದವನು ಜೆಡಿಎಸ್ ಎಮ್ಮೆಲ್ಲೆಯಾಗಿದ್ದ ಆಲ್ಕೋಡ್ ಹನುಮಂತಪ್ಪ. ಶಿವನಗೌಡನನ್ನು ಕಾಂಗ್ರೆಸ್ ತೆಕ್ಕೆಯಿಂದ ಬಿಡಿಸಿಕೊಂಡು ಜೆಡಿಎಸ್ ಸೇರಿಸಿಕೊಳ್ಳುವಲ್ಲಿ ಆಲ್ಕೋಡು ಯಶಸ್ವಿಯಾದ. ಎಷ್ಟಾಗಲಿ ಅದು ಜೆಡಿಎಸ್‌ನ ಪರಂಪರೆ ಕೂಡ. ಕಾಂಗ್ರೆಸ್ ಮತ್ತು ಬಿಜೆಪಿಗಳಲ್ಲಿ ಅತೃಪ್ತರಾದವರಿಗೆ ಗಾಳ ಹಾಕಿ ಸೆಳೆಯುವುದೇ ಆ ಪಕ್ಷದ ಕಾರ್ಯತಂತ್ರಗಳಲ್ಲೊಂದು. ಅದಕ್ಕೆ ಶಿವನಗೌಡ ಕೂಡ ಬಲಿಯಾಗಿದ್ದ. ಅಜ್ಜ ಮೊಮ್ಮಗನ ವೈರತ್ವ ಪರಾಕಾಷ್ಠೆಗೇರಿದ್ದು 2008ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ. ದೇವದುರ್ಗ ವಿಧಾನಸಭಾ ಸ್ಥಾನಕ್ಕಾಗಿ ನಡೆದ ಜಿದ್ದಾಜಿದ್ದಿನ ಈ ಹೋರಾಟದಲ್ಲಿ ಶಿವನಗೌಡ ಅಜ್ಜ ವೆಂಕಟೇಶ ನಾಯಕನನ್ನೇ ಸೋಲಿಸಿಬಿಟ್ಟ! ಇಪ್ಪತ್ತು ವರ್ಷಗಳಿಂದ ವೆಂಕಟೇಶ ನಾಯಕರ ಆಳ್ವಿಕೆಯನ್ನು ಕಂಡಿದ್ದ ಮತದಾರರು ಬದಲಾವಣೆಯನ್ನು ಬಯಸಿದ್ದರು ಅಂತ ಕಾಣುತ್ತೆ, ಅಲ್ಲದೇ ಚುನಾವಣೆಗಾಗಿ ಶಿವನಗೌಡ ಕೋಟಿಗಟ್ಟಲೇ ಹಣವನ್ನು ಚೆಲ್ಲಿ ಸುರಿದಿದ್ದ ಪರಿಣಾಮವಾಗಿ ದೇವದುರ್ಗ ಕ್ಷೇತ್ರವನ್ನು ಗೆದ್ದು ಶಾಸಕನಾಗಿಬಿಟ್ಟ.

ಆ ಚುನಾವಣೆಯಲ್ಲಿ ಬಿಜೆಪಿಗೆ 110 ಸ್ಥಾನಗಳು ಬಂದು ಅಧಿಕಾರಕ್ಕೇರಲು ಇನ್ನು ಮೂರು ಸ್ಥಾನಗಳ ಕೊರತೆಯುಂಟಾಗಿದ್ದರಿಂದ ತಮ್ಮ ಸರ್ಕಾರವನ್ನು ಭದ್ರಪಡಿಸಿಕೊಳ್ಳುವುದಕ್ಕೆ ಬಿಜೆಪಿಗಳು 'ಆಪರೇಷನ್ ಕಮಲ'ವನ್ನು ನಡೆಸಿ ಅಂಗಡಿಯಲ್ಲಿ ವಸ್ತುಗಳನ್ನು ಕೊಂಡಷ್ಟು ಸರಳವಾಗಿ ಎಮ್ಮೆಲ್ಲೆಗಳನ್ನು ಕೊಂಡುಕೊಂಡಿದ್ದರು. ಹೀಗೆ, ಬಿಕರಿಯಾದವರಲ್ಲಿ ಈ ಶಿವನಗೌಡ ನಾಯಕ ಕೂಡ ಒಬ್ಬ. ಆಯ್ಕೆಯಾದ ಕೇವಲ 29 ದಿನಗಳಲ್ಲಿ ಇಪ್ಪತ್ತು ಕೋಟಿ ರೂಪಾಯಿಗೆ ಈತ ಬಿಜೆಪಿಗೆ ಬಿಕರಿಯಾದ. ನಂತರ ನಡೆದ ಉಪಚುನಾವಣೆಯಲ್ಲಿ ವೆಂಕಟೇಶ ನಾಯಕರ ಇನ್ನೊಬ್ಬ ಮಗ ಬಿ.ವಿ.ನಾಯಕ (ಈಗಿನ ಕಾಂಗ್ರೆಸ್ ಲೋಕಸಭಾ ಅಭ್ಯರ್ಥಿ) ವಿರುದ್ಧ ಗೆದ್ದು ಬಿಜೆಪಿ ಸರ್ಕಾರದಲ್ಲಿ ಗ್ರಂಥಾಲಯ ಮಂತ್ರಿ ಕೂಡ ಆದ.

ಅಧಿಕಾರ ಸಿಕ್ಕಿದ್ದೇ ತಡ ತನ್ನ ತಂಗಿಯ ಗಂಡ ವೆಂಕಟೇಶ್ ಪೂಜಾರಿ ಜೊತೆ ಸೇರಿಕೊಂಡು ಶಿವನಗೌಡ ಲೂಟಿ ಮತ್ತು ದರ್ಪಗಳನ್ನು ಶುರುವಿಟ್ಟುಕೊಂಡ. ಆಗ ಅರ್ಧ ಕೋಟಿ ರೂಪಾಯಿ ಸರ್ಕಾರದ ದುಡ್ಡನ್ನು ಖರ್ಚು ಮಾಡಿ ತನ್ನ ಮಾವನಾದ ಅಮರೇಶ್ ಆತಗಲ್ ಎಂಬ ಸಾಹಿತಿಯ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ರಾಜ್ಯದ ಎಲ್ಲಾ ಗ್ರಂಥಾಲಯಗಳಿಗೂ ವಿತರಿಸಿದ. ಈ ಹಗರಣದ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪನನ್ನು ಕೆರಳಿಸಿದ್ದರಿಂದ ಶಿವನಗೌಡನಿಂದ ಸಚಿವ ಸ್ಥಾನವನ್ನು ಕಿತ್ತುಕೊಂಡ.


ಇದರಿಂದ ಶಿವನಗೌಡ ಯಡ್ಡಿಯ ವಿರುದ್ಧ ಕೆಂಡಾಮಂಡಲವಾದ. ತನ್ನಂತೆಯೇ ಯಡ್ಡಿಯ ವಿರುದ್ಧ ಅತೃಪ್ತರಾಗಿದ್ದ 16 ಶಾಸಕರನ್ನು ಕಟ್ಟಿಕೊಂಡು ಬಂಡಾಯವೆದ್ದ. ಬಂಡಾಯದ ಕಾರಣಕ್ಕಾಗಿ ಇವರನ್ನು ವಿಧಾನಸಭೆ ಸದಸ್ಯತ್ವದಿಂದ ಅನರ್ಹಗೊಳಿಸಿ ಆದೇಶ ಹೊರಡಿಸಿದ ಸ್ಪೀಕರ್ ಬೋಪಯ್ಯ ಅವರ ಕ್ರಮವನ್ನು ಪ್ರಶ್ನಿಸಿ ಇವರು ಕೋರ್ಟ್ ಮೆಟ್ಟಿಲೇರಿದರು. ಕೊನೆಗೆ ಆ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವಾಗಲೇ ಶಿವನಗೌಡ ನಾಯಕ ಒಂದು ಕಾಲು ಬಿಜೆಪಿಯಿಂದ ಹೊರಗಿಟ್ಟು ಮತ್ತೆ ಜೆಡಿಎಸ್ ಕದ ತಟ್ಟಿದ್ದ. ಆಗ ನಡೆದ ಜಿಲ್ಲಾ ಪಂಚಾಯತ್ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿಯ ಶಾಸಕನಾಗಿದ್ದುಕೊಂಡೇ ಜೆಡಿಎಸ್‌ನ ನಾಯಕ ಎಚ್.ಡಿ.ಕುಮಾರಸ್ವಾಮಿಯನ್ನು ಕರೆಸಿ ದೇವದುರ್ಗದಲ್ಲಿ ಸಮಾವೇಶ ಮಾಡಿಸಿದ. ಇದರ ಭಾಗವಾಗಿಯೇ ಸಿಂಧನೂರಿನಲ್ಲಿ ನಡೆದ ಬಹಿರಂಗ ಸಭೆಯೊಂದರಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ವೇದಿಕೆಯ ಮೇಲೆ ಕುಳಿತಿದ್ದಾಗಲೇ "ಯಡಿಯೂರಪ್ಪ ಯಾವ ಕೈಯಿಂದ ಹಣ ತಗೊಂಡಿದ್ದಿಯೋ, ಆ ಕೈಗಳು ಉದುರುತ್ತವೆ. ನಿನಗೆ ದುರ್ಮರಣ ಬರುತ್ತೆ. ನೀನು ಏಡ್ಸ್ ಬಂದು ಸಾಯುತ್ತೀಯ. ನಿನಗೆ ಕ್ಯಾನ್ಸರ್ ಬರುತ್ತದೆ. ನೀನಗೆ ಸಹಜ ಸಾವು ಬರೋದಿಲ್ಲ," ಎಂದು ಬಹಿರಂಗವಾಗಿ ಶಪಿಸಿದ್ದನ್ನು ಕ್ಷೇತ್ರದ ಜನ ಇನ್ನೂ ಮರೆತಿಲ್ಲ. ಶಿವನಗೌಡ ಅದೆಷ್ಟು ಹೊಲಸು ಮನುಷ್ಯ ಎಂಬುದನ್ನು ಈ ಬೈಗುಳಗಳು ತೋರಿಸುತ್ತಿದ್ದವು. ಅಂತೂ, ಕೊನೆಗೆ ದೇವದುರ್ಗ ತಾಲೂಕಿನ ಎಲ್ಲಾ ಆರು ಜಿಲ್ಲಾ ಪಂಚಾಯತ್ ಸ್ಥಾನಗಳಲ್ಲಿ ಜೆಡಿಎಸ್ ಗೆಲ್ಲುವಂತೆ ನೋಡಿಕೊಂಡ.

ಸುಪ್ರೀಂಕೋರ್ಟ್ ಸ್ಪೀಕರ್ ಆದೇಶವನ್ನು ಅಸಿಂಧುಗೊಳಿಸಿ ಇವರ ವಿಧಾನಸಭೆ ಸದಸ್ಯತ್ವವನ್ನು ಎತ್ತಿ ಹಿಡಿದಾಗ ಮತ್ತೆ ಸುಮ್ಮನಾಗಿ ಬಿಜೆಪಿಯಲ್ಲಿ ಉಳಿದುಕೊಂಡ. ಅಷ್ಟು ಹೊತ್ತಿಗಾಗಲೇ ಈತನ ಶತ್ರು ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದಿದ್ದರಿಂದ ಸದಾನಂದಗೌಡ ಮತ್ತು ಜಗದೀಶ್ ಶೆಟ್ಟರ್ ಅವರನ್ನು ದೇವದುರ್ಗಕ್ಕೆ ಕರೆಸಿ ಎಲ್ಲರಿಗೂ ಬೆಳ್ಳಿ ಗದೆ, ಬೆಳ್ಳಿ ಕಿರೀಟ, ಬೆಳ್ಳಿ ಖಡ್ಗ ಹಾಕಿ ಸನ್ಮಾನ ಮಾಡಿ, ಅವರ ಬಾಲ ಬಡಿಯುತ್ತಾ ತನ್ನ ಸ್ಥಾನ ಭದ್ರಪಡಿಸಿಕೊಂಡ. ಇದನ್ನೆಲ್ಲಾ ಖರೀದಿಸುವುದಕ್ಕೆ ಸರ್ಕಾರಿ ಅಧಿಕಾರಿಗಳಿಂದಲೇ ದುಡ್ಡು ವಸೂಲಿ ಮಾಡಿದ್ದ. "ನಿಮ್ಮ ಇಲಾಖೆಯ ಮಂತ್ರಿ ಬರ್ತಿದ್ದಾರೆ, ಅವರಿಗೆ ಸನ್ಮಾನ ಮಾಡಬೇಕು" ಎಂದು ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಇಂತಿಷ್ಟು ಅಂತ ಫಿಕ್ಸ್ ಮಾಡಿ ವಸೂಲಿ ಮಾಡಿದ್ದ. ಬಡಪಾಯಿ ಅಧಿಕಾರಿಗಳು ತಮ್ಮ ಇಲಾಖೆಯ ಮಂತ್ರಿಗೆ ಸನ್ಮಾನ ಮಾಡದಿದ್ದರೆ ಮುಂದೆ ತೊಂದರೆಯಾದೀತು ಅಂತ ಹೆದರಿ ಇವನು ಕೇಳಿದಷ್ಟನ್ನು ಕೊಟ್ಟು ತೆಪ್ಪಗಾಗಿದ್ದರು. ಅದರಲ್ಲಿ ಗದೆ ಖರೀದಿಸಲು ಎಷ್ಟು ಕೊಟ್ಟನೋ, ಹೊಟ್ಟೆಗೆ ಎಷ್ಟು ಹಾಕಿಕೊಂಡನೋ ಯಾರಿಗೆ ಗೊತ್ತು.


ಶಿವನಗೌಡನ ಗೌಡಿಕೆಯ ದರ್ಪ ಹೇಗಿದೆ ಎಂದರೆ ಅವನ ವಿರುದ್ಧ ಮಾತಾಡುವ ಅಥವಾ ಸುದ್ದಿ ಮಾಡುವ



ಬಿ.ವಿ.ರೇವೂ ನಾಯಕ



ರಾಜ ಅಮರೇಶ ನಾಯಕ



ಡಿ.ಬಿ.ನಾಯಕ

ಯವನೊಬ್ಬ (ಯಡಿಯೂರಪ್ಪ) ಮುಖ್ಯಮಂತ್ರಿಯಾಗಲಿ ನು ರಾಜ್ಯಾದ್ಯಂತ ಲಿಂಗಾಯತರು ಬಿಜೆಪಿಗೆ ಹಾಕಿದ್ದರು. ಅದಕ್ಕೆ ರಾಯಚೂರು ಜಿಲ್ಲೆಯೂ ದತಾಗಿರಲಿಲ್ಲ. ಆದರೆ, ಈಗ ಪರಿಸ್ಥಿತಿ ಬದಲಾಗಿದೆ. ಕ್ಕೆ 2013ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಕಟ್ಟದ್ದೇ ನಿದರ್ಶನ. ಈಗಲೂ ಬೇರೆ ಬೇರೆ ಜಿಲ್ಲೆಗಳಲ್ಲಿ ಾಯತರು ಬಿಜೆಪಿಗೆ ಬೆನ್ನೆಲುಬಾಗಿ ನಿಲ್ಲಬಹುದು. ರೆ, ರಾಯಚೂರಿನಲ್ಲಿ ಅದು ಸಾಧ್ಯವಿಲ್ಲ. ಅದಕ್ಕೆ ಕಾರಣ ಬಿಜೆಪಿ ಅಭ್ಯರ್ಥಿ ಕೆ. ಶಿವನಗೌಡ ನಾಯಕನೇ. ಲಿಂಗಾಯತ ವಿರೋಧಿ ಎಂದೇ ಇಡೀ ಸಮುದಾಯ ನನ್ನು ನೋಡುತ್ತದೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ದೇವದುರ್ಗ ತಾಲೂಕು ಪಂಚಾಯತಿ ಕ್ಷನಾಗಿದ್ದಾಗ, ಆಮೇಲೆ ದೇವದುರ್ಗದಿಂದ ವಿಧಾನಸಭೆ ಾವಣೆಯಲ್ಲಿ ಗೆದ್ದು ಮಂತ್ರಿಯಾದಾಗ ಈತನೊಂದಿಗೆ ಟಷ್ಟು ಲಿಂಗಾಯತ ನಾಯಕರಿದ್ದರು. ಆದರೆ, ಈತನ ದರ್ಪ, ದೌರ್ಜನ್ಯಗಳನ್ನು ಕಂಡು ಅವರೆಲ್ಲಾ ದೂರವಾದರು. ಆ ಲಿಂಗಾಯುತ ನಾಯಕರಿಗೆ ಶಿವನಗೌಡ ನಾಯಕನ ವಯಸ್ಸಿನ ಮಕ್ಕಳಿದ್ದಾರೆ. ಆದರೂ ಅವರನ್ನು ಈತ ಏಕವಚನದಲ್ಲಿ ಸಂಬೋಧಿಸಿ ಅವಮಾನಿಸುತ್ತಿದ್ದ. ಕೊನೆಗೆ ಒಬ್ಬೊಬ್ಬನೇ ದೂರವಾಗಿ ಈಗ ಯಾವ ಲಿಂಗಾಯತರೂ ಅವನೊಟ್ಟಿಗಿಲ್ಲ. ಅವನೊಂದಿಗೆ ಗುರುತಿಸಿಕೊಂಡ ಏಕೈಕ ಲಿಂಗಾಯತ ನಾಯಕ ಎಂದರೆ ಯಾದಗಿರಿ ಜಿಲ್ಲೆಯ ಗುರುಪಾಟೀಲ್. ತನಗೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಕೊಟ್ಟರೆ ಈಗ ಕಾಂಗ್ರೆಸ್ ಅಭ್ಯರ್ಥಿಯ ಬೆಂಬಲಕ್ಕೆ ನಿಲ್ಲುತ್ತೇನೆಂದು ಗುರುಪಾಟೀಲ್ ಹೇಳಿದ್ದ. ಆದರೆ, ಅಲ್ಲಿ ಈಗಾಗಲೇ ಶರಣಬಸಪ್ಪ ದರ್ಶನಾಪೂರ ಇರುವುದರಿಂದ ಇವರಿಗೆ ಟಿಕೆಟ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದರಿಂದ ಗುರು ಪಾಟೀಲ್ ಬಿಜೆಪಿ ಕಡೆಗೆ ವಾಲಿದ. ಶಿವನಗೌಡ ನಾಯಕ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಿಸುತ್ತೇನೆಂದು ಮೂಗಿಗೆ ತುಪ್ಪ ಸವರಿ ಅವನನ್ನು ತನ್ನ ಜೊತೆಗಿಟ್ಟು ಕೊಂಡಿದ್ದಾನೆ. ಆತನೊಬ್ಬನನ್ನು ಬಿಟ್ಟರೆ ಇಡೀ ಲಿಂಗಾಯತ ನಾಯಕರೆಲ್ಲಾ ಈಗ ಕಾಂಗ್ರೆಸ್ ಅಭ್ಯರ್ಥಿ ಬಿ.ವಿ. ನಾಯಕ್ ಪರವಿದ್ದಾರೆ.

ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತಗಳು ಒಟ್ಟು ನಾಲ್ಕು ಲಕ್ಷದಷ್ಟಿವೆ. ರಾಯಚೂರು ಪರಿಶಿಷ್ಟ ಪಂಗಡಕ್ಕೆ ಸೇರಿದ ಕ್ಷೇತ್ರವಾಗಿರುವುದರಿಂದ ಕಣದಲ್ಲಿರುವ ಎಲ್ಲಾ ಅಭ್ಯರ್ಥಿಗಳು ನಾಯಕ ಸಮುದಾಯದವರೆ. ಹೀಗಾಗಿ, ನಾಯಕ ಸಮುದಾಯದ ಮತಗಳು ಒಡೆದು ಛಿದ್ರವಾಗುವುದರಲ್ಲಿ ಯಾವುದೇ ಸಂದೇಹ ಬೇಡ. ಆದರೆ, ಪರಿಶಿಷ್ಟ ಜಾತಿಯ ಮತಗಳು ಕಾಂಗ್ರೆಸ್‌ಗೆ ಇಡಿಯಾಗಿ ಸಿಗುವ ಸಾಧ್ಯತೆಯಿದೆ. ಅದಕ್ಕೆ ಕಾಂಗ್ರೆಸ್ ಮೇಲೆ ದಲಿತರಿಗಿರುವ ಪ್ರೇಮ ಎಂದು ಹೇಳಲಿಕ್ಕಾದರೂ ಬಿಜೆಪಿಯ ಶಿವನಗೌಡನ ಮೇಲಿರುವ ದ್ವೇಷ ಎಂದು ಖಂಡಿತ ಹೇಳಬಹುದು. ಏಕೆಂದರೆ, ಶಿವನಗೌಡ ನಾಯಕ ದಲಿತರ ವಿರೋಧಿ ಎಂದೇ ಕ್ಷೇತ್ರದಾದ್ಯಂತ ಚಿರಪರಿಚಿತ. ಈಗಾಗಲೇ ಮಾದಿಗ ಮೀಸಲಾತಿ ಹೋರಾಟ ಸಮಿತಿ, ಮಾದಿಗ ದಂಡೋರ, ಹೈದರಾಬಾದ್ ಕರ್ನಾಟಕ ದಲಿತ ಸಂಘರ್ಷ ಸಮಿತಿ, ಡಾ.ಬಾಬು ಜಗಜೀವನ್ ರಾಮ್ ಯುವಕ ಸಂಘ, ಛಲವಾದಿ ಮಹಾಸಭಾ ಮುಂತಾದ ಹತ್ತಕ್ಕೂ ಹೆಚ್ಚು ದಲಿತ ಸಂಘಟನೆಗಳು ಸುದ್ದಿಗೋಷ್ಠಿ ನಡೆಸಿ "ಶಿವನಗೌಡನನ್ನು ಸೋಲಿಸುವುದಕ್ಕೆ ಕಾಂಗ್ರೆಸ್ ಅಭ್ಯರ್ಥಿ ಬಿ.ವಿ.ನಾಯಕರ ಪರವಾಗಿ ನಿಲ್ಲುತ್ತೇವೆ" ಎಂದು ಹೇಳಿವೆ.

ಇನ್ನು ಸರ್ಕಾರಿ ನೌಕರರಂತೂ (ಅವರು ಯಾವುದೇ ಜಾತಿಯವರಲ್ಲಿರಲಿ) ಶಿವನಗೌಡನಂತ ಸರ್ವಾಧಿಕಾರಿಯನ್ನು ಗೆಲ್ಲಿಸುವುದಕ್ಕೆ ಮನಸ್ಸು ಮಾಡಲಾರರು. ಈಗಾಗಲೇ ಒಮ್ಮೆ ಗೆಲ್ಲಿಸಿ ಅವನ ಕಾಟ ಹೇಗೋ ಸಹಿಸಿಕೊಂಡಿದ್ದಾಗಿದೆ. ಮತ್ತೆ ಈಗ ಗೊತ್ತಿದ್ದೂ ಗೊತ್ತಿದ್ದೂ ಅವನ ಕೈಗೆ ಹಗ್ಗ ಕೊಟ್ಟು ತಮ್ಮ ಕೈಗಳನ್ನು ಕಟ್ಟಿಸಿಕೊಳ್ಳುವ ಕೆಲಸವನ್ನು ಅವರು ಮಾಡಲಾರರು.

ಎಲ್ಲಕ್ಕಿಂತ ಮುಖ್ಯವಾಗಿ ಜಿಲ್ಲಾ ಕಾಂಗ್ರೆಸ್ ಒಳಗಿನ ಒಳಜಗಳ ಶಮನವಾಗಿ ನಾಯಕರೆಲ್ಲಾ ಒಗ್ಗಟ್ಟಾಗಿ ಚುನಾವಣೆ ಎದುರಿಸುತ್ತಿರುವುದು. ಜಿಲ್ಲಾ ಕಾಂಗ್ರೆಸ್‌ನಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎನ್.ಎಸ್.ಬೋಸರಾಜು ನೇತೃತ್ವದಲ್ಲಿ ಒಂದು ಬಣ, ಪಕ್ಷದ ಜಿಲ್ಲಾ ಅಧ್ಯಕ್ಷ ಎ.ವಸಂತಕುಮಾರ್ ನೇತೃತ್ವದಲ್ಲಿ ಇನ್ನೊಂದು ಬಣ ಕಾರ್ಯನಿರ್ವಹಿಸುತ್ತಿದ್ದವು. ಮೊದಲನೆಯ ಬಣದ ಹಿಂದೆ ಸಿದ್ದರಾಮಯ್ಯ ಇದ್ದರೆ, ಎರಡನೇ ಬಣದ ಹಿಂದ ಮಲ್ಲಿಕಾರ್ಜುನ ಖರ್ಗೆ ಇದ್ದಾರೆ. ಈ ಎರಡೂ ಬಣಗಳ ನಡುವೆ ಜಗಳ, ವೈಮನಸ್ಸು ಸರ್ವೇಸಾಮಾನ್ಯವಾಗಿತ್ತು. ಆದರೆ, ಮೊದಲ ಬಾರಿಗೆ ಈ ಲೋಕಸಭಾ ಚುನಾವಣೆಗಾಗಿ ಎರಡೂ ಬಣಗಳು ತಮ್ಮ ವೈಯಕ್ತಿಕ ಅಸಮಾಧಾನಗಳನ್ನು ಬದಿಗಿಟ್ಟು ಒಗ್ಗಟ್ಟಾಗಿ ಚುನಾವಣೆ ಎದುರಿಸುತ್ತಿವೆ.

ಎಲ್ಲಾ ಪ್ರಮುಖ ಜಾತಿಗಳು ಕಾಂಗ್ರೆಸ್ ಬೆನ್ನಿಗೆ ನಿಂತಿರುವುದು, ಅಮರೇಶ ನಾಯಕ ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಬಂದಿರುವುದು, ಕಾಂಗ್ರೆಸ್ ಪಕ್ಷ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುತ್ತಿರುವುದು ಹಾಗೂ ಬಿಜೆಪಿಯ ಶಿವನಗೌಡ ಅಧಿಕಾರವಿದ್ದಾಗಲೆಲ್ಲಾ ಮಾಡಿದ ಅನಾಚಾರಗಳು, ದರ್ಪ-ದೌರ್ಜನ್ಯಗಳು ಒಟ್ಟಾರೆ ಕಾಂಗ್ರೆಸ್‌ಗೆ ಬಲ ತುಂಬಲಿದ್ದು ಗೆಲುವಿನ ತಕ್ಕಡಿಯೀಗ ಕಾಂಗ್ರೆಸ್‌ನತ್ತ ವಾಲಿರುವುದರಲ್ಲಿ ಯಾವುದೇ ಅನುಮಾನಗಳಿಲ್ಲ. ■

ವನ್ನೂ ಆತ ಬಿಡುವುದಿಲ್ಲ. ಹಿಂದೊಮ್ಮೆ ಟೀವಿ ಲ್ಲುಗಳ ಕೆಲವು ಪತ್ರಕರ್ತರು ಅವನನ್ನು ವಿಮರ್ಶೆ ಡಿದರು ಎಂಬ ಒಂದೇ ಕಾರಣಕ್ಕಾಗಿ ಅವರಿಗೆ ರಂಗವಾಗಿ ಪ್ರಾಣಬೆದರಿಕೆ ಹಾಕಿದ್ದ. ಅದೂ ಕೂಡ ಟೀವಿಗಳಲ್ಲಿ ಪ್ರಸಾರವಾಗಿತ್ತು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ದೇವದುರ್ಗ ದಲ್ಲಿ ಮತ್ತೆ ಕಣಕ್ಕಿಳಿದಿದ್ದ. ಇವನ ವಿರುದ್ಧ ಕಾಂಗ್ರೆಸ್‌ನಿಂದ ಅಜ್ಜ ವೆಂಕಟೇಶ್ ನಾಯಕ್ ನಿಂತಿದ್ದರು. ಇಡೀ ್ಯಾದ್ಯಂತ ಬಿಜೆಪಿ ಅಭ್ಯರ್ಥಿಗಳಿಗೆ ಜನ ಮಣ್ಣು ದಂತೆ ದೇವದುರ್ಗದಲ್ಲೂ ಶಿವನಗೌಡನನ್ನು ಕೆಡವಿ ಕಟೇಶ್ ನಾಯಕ್ ಅವರನ್ನು ಜನ ಗೆಲ್ಲಿಸಿದರು. ಈಗ ತನ್ನ ಅದೃಷ್ಟ ಪರೀಕ್ಷೆ ಮಾಡುವುದಕ್ಕೆ ಬಿಜೆಪಿಯಿಂದ ಕಸಭಾ ಚುನಾವಣೆಗೆ ಸ್ಪರ್ಧಿಸುತ್ತಿದ್ದಾನೆ.

ವಿಚಿತ್ರ ನೋಡಿ. ಯಾವ ಯಡಿಯೂರಪ್ಪನಿಗೆ "ಏಡ್ಸ್ ದು ಸಾಯಲಿ, ಹಾವು ಕಡಿಯಲಿ, ಕ್ಯಾನ್ಸರ್ ಬಂದು ಯಲಿ" ಎಂದು ಹಿಡಿಶಾಪ ಹಾಕಿದ್ದನೋ ಅದೇ ಯೂರಪ್ಪನನ್ನು ಈಗ ಚುನಾವಣಾ ಪ್ರಚಾರಕ್ಕಾಗಿ ಕರೆಸಿದ್ದಾನೆ. ಬೈದವನಿಗೂ ನಾಚಿಕೆಯಿಲ್ಲ, ಕೊಂಡವನಿಗೂ ಸ್ವಾಭಿಮಾನವಿಲ್ಲ. ಇಂತಹ ಗೆಟ್ಟವರಿಗೆ ಮತಹಾಕುವಷ್ಟು ದಡ್ಡರಲ್ಲ ಅನ್ನಿಸುತ್ತದೆ ಚೂರಿನ ಮತದಾರರು.

ಶಿವನಗೌಡನ ಭಾಷೆಯಲ್ಲೂ ಯಾವುದೇ ಬದಲಾವಣೆಯಾಗಿಲ್ಲ ಅನ್ನಿಸುತ್ತೆ. ಮೊನ್ನೆ ತಾನೆ ಯಾದಗಿರಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಿ.ವಿ.ನಾಯಕ್ ಬಗ್ಗೆ ಶಿವನಗೌಡ ಹರಿಹಾಯ್ದ ರೀತಿ ನೋಡಿದರೆ ಇದು ಗೊತ್ತಾಗುತ್ತದೆ. "ಬಿ.ವಿ.ನಾಯಕ ಒಬ್ಬ ಅತ್ಯಾಚಾರಿ. ಅವನಿಗೆ ಇಬ್ಬ ಹೆಂಡತಿಯರಿದ್ದಾರೆ" ಎಂದು ತನ್ನ ಹೊಲಸು ನಾಲಗೆಯನ್ನು ಹರಿಬಿಟ್ಟು ಕೀಳುಮಟ್ಟದ ದಾಳಿಗಿಳಿದಿದ್ದಾನೆ. ರಾಯಚೂರು ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿಯಾಗಿರುವ ಎಸ್.ಎನ್. ನಾಗರಾಜು ಯಾದಗಿರಿ ಜಿಲ್ಲಾಧಿಕಾರಿಯಾಗಿರುವ ಜಮಾದಾರ್ ಅವರಿಗೆ ಕರೆ ಮಾಡಿ ಫೋನಾಯಿಸಿ ಶಿವನಗೌಡನ ವಿರುದ್ಧ ಕೇಸು ದಾಖಲಿಸುವಂತೆ ನಿರ್ದೇಶನ ಕೊಟ್ಟಿದ್ದಾರೆ. ಅದರಂತೆ ದಿನ, ಅಂದರೆ ಮೊನ್ನೆ ಬುಧವಾರ ಯಾದಗಿರಿ ನಗರ ಠಾಣೆಯಲ್ಲಿ ಶಿವನಗೌಡನ ವಿರುದ್ಧ ಕೇಸು ದಾಖಲಾಗಿದೆ. ಶಿವನಗೌಡ ಅದೆಂತ ಕಿಸು ಎಂದರೆ ಕೇಸು ದಾಖಲಾದ ಮರುದಿನವೇ, ಅಂದರೆ ಗುರುವಾರ ಮತ್ತೆ ರಾಯಚೂರಿನಲ್ಲಿ "ಬಿ.ವಿ. ನಾಯಕ ಜೂನಿಯರ್ ಉಮೇಶ್ ರೆಡ್ಡಿ" ಎಂದು ದಾಳಿ ಮಾಡಿದ್ದಾನೆ. ಹೀಗೆ ತನ್ನ ಹೊಲಸು ನಾಲಗೆಯಿಂದ ಹೊಲಸು ಮಾತಾಡಿದಷ್ಟೂ ಜನ ಓಟು ಹಾಕ್ತಾರೆ ಎಂದು ನಂಬಿಕೊಂಡಂತಿದೆ ಈ ಶಿವನಗೌಡ ನಾಯಕ. ■

ಲಾಭೂರಾಮ್ ಗೆದ್ದು ಬರಲಿ

ಭ್ರಷ್ಟಾಚಾರ ಮತ್ತು ಅಧಿಕಾರಸ್ಥರ ಅಣತಿಗೆ ಸಿಲುಕಿ ಹೈರಾಣುಗೊಂಡ ಪೊಲೀಸ್ ವ್ಯವಸ್ಥೆಯಲ್ಲೂ ಮನುಷ್ಯರಿರಲು ಸಾಧ್ಯ ಎಂದು ಕರ್ನಾಟಕದ ಮಟ್ಟಿಗೆ ಮೊದಲು ತೋರಿಸಿಕೊಟ್ಟದ್ದು ಸಾಂಗ್ಲಿಯಾನಾ. ಗರುಡಾಚಾರ್, ಕೋದಂಡರಾಮಯ್ಯ ಐಪಿಎಸ್ ಕೆಂಪಯ್ಯರಂಥ ಕನ್ನಡಿಗ ಪೊಲೀಸ್ ಅಧಿಕಾರಿಗಳನ್ನು ಹೊರತುಪಡಿಸಿದರೆ ಜನಸಾಮಾನ್ಯರ ಪಾಲಿಗೆ ಆಶಾಕಿರಣವಾಗಿದ್ದು ಅಜಯ್‌ಕುಮಾರ್ ಸಿಂಗ್, ಅಲೋಕ್‌ಕುಮಾರ್ ತರದ ನಾರ್ತ್ ಇಂಡಿಯನ್ ಐಪಿಎಸ್‌ಗಳೆ.

ಈ ಸಾಲಿಗೆ ಲೇಟೆಸ್ಟ್ ಸೇರ್ಪಡೆಯೆಂತಿದ್ದರೆ ಅದು ಲಾಭೂರಾಮ್. ಅಜಯ್‌ಸಿಂಗ್, ಅಲೋಕ್‌ಕುಮಾರ್‌ಗೆ ಹೇಗೆ ನಿಕೃಷ್ಟನನ್ನೂ ಕರೆದು ಕೂರಿಸಿ ಕಷ್ಟ ಕೇಳುವ ತಾಳ್ಮೆಯಿತ್ತೋ ಲಾಭೂರಾಮ್ ಇನ್ನೂ ಒಂದು ಹೆಜ್ಜೆ ಮುಂದಿಟ್ಟು ನ್ಯಾಯ ಕೋರಿ ಬಂದ ನಿರ್ಗತಿಕನನ್ನೂ ಕೂರಿಸಿ ಕಣ್ಣೀರೊರೆಸುವಂಥ ಮಾನವೀಯ ಅಧಿಕಾರಿ. ಇಲಾಖೆಯ ಭ್ರಷ್ಟತೆ ಮತ್ತು ಲಾಬಿಗಳನ್ನೂ ಮೀರಿದ ಮನುಷ್ಯ ಸಂವೇದನೆಯ ಲಾಭೂರಾಮ್ ಇವತ್ತಲ್ಲ ನಾಳೆ ಖಂಡಿತ ಅಜಯ್‌ಸಿಂಗ್ ಉತ್ತರಾಧಿಕಾರಿಯೆ.




ದುರಂತವೋ ವಿಧಿ ವಿಕಟವೋ; ಲಾಭೂರಾಮ್ ಸಾಂಸಾರಿಕ ಬದುಕು ಈ ವಯಸ್ಸಿಗೇ ದಾರುಣ ದುರ್ವಿಧಿಗೀಡಾಗಿದೆ. ಕಾರ್ಕಳದ ಸಮೀಪ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಅವರ ಇಬ್ಬರೂ ಹೆಣ್ಣುಮಕ್ಕಳು ತೀವ್ರವಾಗಿ ಗಾಯಗೊಂಡು ಪತ್ನಿ ಗಾಯಿತ್ರಿ ಆಸ್ಪತ್ರೆಯ ದಾರಿಯಲ್ಲೇ ಕೊನೆಯುಸಿರೆಳೆದಿದ್ದಾರೆ. ಜೀಪಿನ ಚಾಲಕ ನಟರಾಜ್ ಕೂಡ ಸ್ಥಳದಲ್ಲೇ ಸಾವಪ್ಪಿದ್ದಾನೆ. ಲಾಭೂರಾಮ್‌ರ ಇಬ್ಬರು ಹೆಣ್ಣುಮಕ್ಕಳ ಪರಿಸ್ಥಿತಿ ಚಿಂತಾಜನಕವಾದರೆ ವೃತ್ತಿಯಲ್ಲಿ ಡಾಕ್ಟರ್ ಆಗಿದ್ದ ಪತ್ನಿ ಗಾಯತ್ರಿ ತಮ್ಮ 35ನೇ ವಯಸ್ಸಿಗೇ ದುರಂತ ಸಾವಿಗೀಡಾದದ್ದು ಘೋರ!

ಪರೀಕ್ಷೆಯೆಂಬುದು ಹೃದಯವಂತರನ್ನೇ ಹುಡುಹುಡುಕಿ ಬರುತ್ತದೆಯೇನೊ. ತನಿಖೆಯಲ್ಲಿ ಚಾಣಾಕ್ಷತೆ ಮತ್ತು ಕರ್ತವ್ಯದಲ್ಲಿ ಮಾನವೀಯತೆಯಿದ್ದೂ ಲಾಭೂರಾಮ್‌ರನ್ನೇ ಕ್ರೂರವಿಧಿ ಏಕೆ ಬಲಿಯಾಗಿಸಿತೊ? ಅಥವಾ ಇದು ಕೂಡ ಸತ್ವ ಪರೀಕ್ಷೆಯೊ? ನೊಂದವರ ಕಣ್ಣೀರೊರೆಸಿದವರ ಕಣ್ಣೀರನ್ನು ಒರೆಸುವವರ್‍ಯಾರೊ? ಲಾಭೂರಾಮ್ ಧೈರ್ಯಗೆಡದಿರಲಿ. ತನ್ನ ಬದುಕಿನ ಅತೀ ದೊಡ್ಡ ಧುರಿತದಿಂದವರು ಗೆದ್ದು ಬರುವಂತಾಗಲಿ.

ಏಕೆಂದರೆ ಲಾಭೂರಾಮ್‌ರಂಥ ಮಾನವೀಯ ಅಧಿಕಾರಿಯ ಅಗತ್ಯ ಕೇವಲ ಇಲಾಖೆಗಷ್ಟೇ ಅಲ್ಲ ಕನ್ನಡ ಜನತೆಗೂ ಅನಿವಾರ್ಯ.

ರಾ.ಸೋ.

ಚಿತ್ರದುರ್ಗ: ಕಾಂಗ್ರೆಸ್‌ನ ಚಂದ್ರಪ್ಪ ಗೆಲುವಿನತ್ತ




ರಾಜ್ಯದೆಲ್ಲೆಡೆ ಲೋಕಸಭಾ ಚುನಾವಣೆಯ ಸಿದ್ಧತೆಗಳು ರಂಗುಪಡೆದುಕೊಳ್ಳುತ್ತಿರುವಾಗಲೇ ಇತ್ತ ಬರದ ಜಿಲ್ಲೆ ಚಿತ್ರದುರ್ಗದಲ್ಲೂ ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಮತಬೇಟೆಗೆ ಚಾಲನೆ ನೀಡಿದ್ದಾರೆ. ಜಿಲ್ಲಾ ಕೇಂದ್ರ ಚಿತ್ರದುರ್ಗ, ತಾಲೂಕು ಕೇಂದ್ರಗಳನ್ನು ಹೊರತುಪಡಿಸಿ ಹಳ್ಳಿಗಳಲ್ಲಿ ಚುನಾವಣೆ ಭರಾಟೆ ಅಷ್ಟಾಗಿ ಕಂಡುಬರುತ್ತಿಲ್ಲ. ಜಿಲ್ಲೆಯ ಬಹಳಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿಗಾಗಿ ವಿನೂತ್ನ ಖಾಲಿ ಕೊಡಗಳ ಪ್ರದರ್ಶನ ಮಾಡಿ ಪ್ರತಿಭಟನೆ ನಡೆಸುವುದು ಸಾಮಾನ್ಯವಾಗಿದೆ. ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಇತ್ತೀಚೆಗೆ ಸುರಿದ ಆಲಿಕಲ್ಲು ಮಳೆಯಿಂದ ಕೋಟಿಗಳ ಲೆಕ್ಕದಲ್ಲಿ ತೋಟಗಾರಿಕೆ ಮತ್ತು ಕೃಷಿ ಬೆಳೆಗಳು ನಷ್ಟವಾಗಿವೆ ಎಂದು ಜಿಲ್ಲಾಧಿಕಾರಿಗಳು ಸರಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಜನ ಅಸಮಾಧಾನದ ಬೇಗುದಿಯಲ್ಲಿ ಬೇಯುತ್ತಿರುವಾಗ ಲೋಕಸಭಾ ಚುನಾವಣೆ ಬಂದೆರಗಿದೆ.

ಈ ಬಾರಿ ಕಾಂಗ್ರೆಸ್‌ನಿಂದ ಕೇಂದ್ರ ಸಚಿವ ಕೆ.ಎಚ್. ಮುನಿಯಪ್ಪರ ಬಲಗೈ ಭಂಟ ಎಂದೇ ಚಿರಪರಿಚಿತರಾಗಿರುವ ಬಿ.ಎನ್.ಚಂದ್ರಪ್ಪ, ಬಿಜೆಪಿಯಿಂದ ಹಾಲಿ ಸಂಸದ ಜನಾರ್ದನಸ್ವಾಮಿ, ಜೆಡಿಎಸ್‌ನಿಂದ ಗೂಳಿಹಟ್ಟಿ ಶೇಖರ್ ಕಣಕ್ಕಿಳಿದಿದ್ದಾರೆ. ಅವರವರ ಉತ್ಸಾಹ, ಖುಷಿ ಅವರವರಿಗೆ ಎಂಬಂತಿದೆ ಪರಿಸ್ಥಿತಿ.

ಸಿದ್ದರಾಮಯ್ಯ ಕಡಕ್ ಸೂಚನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡೂ ಜಿಲ್ಲೆಯ [illegible] ಯಾರಾರು [illegible] ಗಮನಿಸುತ್ತಾರೆ. [illegible] ಮುಖಂಡರಿಗೆ [illegible] ಜತೆಗೆ ಕಾಂಗ್ರೆಸ್‌ಗೆ [illegible] ಲೋಕಸಭೆ ಕ್ಷೇತ್ರದಲ್ಲಿ [illegible] ಎಲ್ಲ ರೀತಿಯ ಪರಿಶ್ರಮ [illegible]



ಬಿಜೆಪಿಯಿಂದ ಸ್ಪರ್ಧಿಸಿರುವ ಹಾಲಿ ಸಂಸದ ಜನಾರ್ದನಸ್ವಾಮಿ ಹೋದಲ್ಲಿ ಬಂದಲ್ಲೆಲ್ಲಾ ಭದ್ರಾ ಮೇಲ್ದಂಡೆ ಯೋಜನೆ, ರೈಲ್ವೇ ಯೋಜನೆ ಜಾರಿ ಮಾಡಿದ್ದು ಬಿಜೆಪಿ ಸರ್ಕಾರ; ಹಿಂದಿನ ಯಾವ ಸಂಸದರೂ ಈ ಕೆಲಸ ಮಾಡಿರಲಿಲ್ಲ ಎಂದು ಹೇಳುತ್ತಿದ್ದರೂ ಅಸಲಿ ಸತ್ಯ ಜಿಲ್ಲೆಯ ಜನರಿಗೆ ಗೊತ್ತಿರುವುದರಿಂದ ಈ ವಿಷಯಗಳಿಗೆ ಅಷ್ಟು ಸ್ಕೋಪ್ ಸಿಗುತ್ತಿಲ್ಲ. ಭದ್ರಾ ಮೇಲ್ದಂಡೆ ಯೋಜನೆ ಹೋರಾಟ ಮಾಜಿ ರಾಜ್ಯಸಭಾ ಸದಸ್ಯ ಎಚ್.ಹನುಮಂತಪ್ಪ, ಮಾಜಿ ಸಂಸದ ಪಿ.ಕೋದಂಡರಾಮಯ್ಯ, ದಲಿತ ಮುಖಂಡ ಎಂ.ಜಯಣ್ಣ, ಡಾ.ಶ್ರೀ ಶಿವಮೂರ್ತಿ ಮುರುಘಾಶರಣರ ನೇತೃತ್ವದಲ್ಲಿ ತೀವ್ರ ಸ್ವರೂಪ ಪಡೆದುಕೊಂಡಾಗ ಅಧಿಕಾರದಲ್ಲಿದ್ದ ಜೆಡಿಎಸ್, ಕಾಂಗ್ರೆಸ್ ಸಮ್ಮಿಶ್ರ ಸರಕಾರಗಳು ಹೋರಾಟ ಸಮಿತಿ ಮುಖಂಡರೊಂದಿಗೆ ಹಲವು ಸುತ್ತಿನ ಮಾತುಕತೆಗಳು ನಡೆಸಿದ್ದವು. ಇದಕ್ಕೂ ಮೊದಲು 2004ರಲ್ಲೇ ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವಧಿಯಲ್ಲೂ ಸಹ ಭದ್ರಾ ಮೇಲ್ದಂಡೆ ಯೋಜನೆ ದಿವಂಗತ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರ ಕನಸಿನ ಯೋಜನೆ ಎಂದು ಅದರ ಜಾರಿಗೆ ಬೇಕಾದ ರೂಪುರೇಷೆ ಸಿದ್ಧಪಡಿಸಿ ಅಂತಿಮ ರೂಪ ನೀಡುವ ಪ್ರಯತ್ನ ನಡೆದಿತ್ತು.

ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ದೊಡ್ಡಮಟ್ಟದ ಹೋರಾಟಗಳು ನಡೆದಿದ್ದವು. ಸರಕಾರಗಳು ಹೋರಾಟ ಸಮಿತಿ ಮುಖಂಡರ ಜತೆ ಹಲವು ಸುತ್ತಿನ ಮಾತುಕತೆ ನಡೆಸಿದ್ದವು. ಹಾಗಾಗಿ ಜನಾರ್ದನಸ್ವಾಮಿ ಎಷ್ಟೇ ಪ್ರಯತ್ನಪಟ್ಟರೂ ಇದರ ಕ್ರೆಡಿಟ್ ಸಿಗುವುದು ಅಷ್ಟಕ್ಕಷ್ಟೇ. ಇನ್ನೂ ದಾವಣಗೆರೆ, ತುಮಕೂರು, ಚಿತ್ರದುರ್ಗ ನೇರ ರೈಲ್ವೇ ಯೋಜನೆ ಕೂಡಾ ದಶಕಗಳ ಹೋರಾಟದ ಫಲವೇ ಆಗಿದೆ. ಇದಕ್ಕೆ ಮಂಜೂರಾತಿ ನೀಡಿರುವುದು ಕೇಂದ್ರ ಸರ್ಕಾರ.

ಒನ್ ಮ್ಯಾನ್ ಸ್ಟ್ರಗಲ್

ಜನಾರ್ದನಸ್ವಾಮಿ ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಸ್ಪಂದಿಸದೇ ಡೋಂಟ್‌ಕೇರ್ ಧೋರಣೆ ತಳೆದಿದ್ದರಿಂದ ಈ ಬಾರಿ ಅಭ್ಯರ್ಥಿಯಾಗಿ ಕಣಕ್ಕಿಳಿಸಲು ಪಕ್ಷದಲ್ಲೇ ತೀವ್ರ ವಿರೋಧ ಇತ್ತು. ಶಾಸಕ ಜಿ.ಎಚ್.ತಿಪ್ಪಾರೆಡ್ಡಿ ಈ ಕುರಿತು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿ, ಆನೇಕಲ್ ನಾರಾಯಣಸ್ವಾಮಿಯನ್ನು ಕಣಕ್ಕೆ ತರುವ ಪ್ರಯತ್ನ ಮಾಡಿದ್ದರು. ಇದು ಕೊನೇ ಗಳಿಗೆಯತನಕ ಅನಿಶ್ಚಿತವಾಗಿತ್ತು, ಅದು ಹೇಗೋ ಜನಾರ್ದನಸ್ವಾಮಿಗೆ ಟಿಕೆಟ್ ಸಿಕ್ಕಿ ಅಖಾಡಕ್ಕಿಳಿದಿದ್ದಾರೆ.

ಈಗ ಜನಾರ್ದನಸ್ವಾಮಿಗೆ ಕಪೋಲಕಲ್ಪಿತ ಮೋದಿ ಅಲೆ ಬಿಟ್ಟರೆ ಬೇರೇನೂ ಇಲ್ಲ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಜಿ.ಎಚ್.ತಿಪ್ಪಾರೆಡ್ಡಿ ಚಿತ್ರದುರ್ಗ ಕ್ಷೇತ್ರದಿಂದ ಗೆದ್ದದ್ದು ಅವರ ವೈಯಕ್ತಿಕ ವರ್ಚಸ್ಸಿನಿಂದ. ಉಳಿದ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ದಯನೀಯ ಫಲಿತಾಂಶ ಪಡೆದಿತ್ತು. ಆಗ ಕಾಂಗ್ರೆಸ್‌ಗೆ ನಿಜವಾದ ಸ್ಪರ್ಧೆ ನೀಡಿದ್ದು ಕೆಜೆಪಿಯಿಂದ ಸ್ಪರ್ಧಿಸಿದ ಅಭ್ಯರ್ಥಿಗಳಾದ ಎಂ. ಚಂದ್ರಪ್ಪ, ಕುಮಾರಸ್ವಾಮಿ, ಲಿಂಗಮೂರ್ತಿ ಮಾತ್ರ. ಈಗ ವಿಲೀನದ ನಂತರ ಬಿಜೆಪಿ ಜಿಲ್ಲಾಧ್ಯಕ್ಷ ನರೇಂದ್ರನಾಥ್ ಕೆಜೆಪಿ ಮುಖಂಡರು, ಕಾರ್ಯಕರ್ತರನ್ನು ವ್ಯವಸ್ಥಿತವಾಗಿ ಮೂಲೆಗುಂಪು ಮಾಡಿದ್ದಾರೆನ್ನುವ ಆರೋಪಗಳು ಮುಂದುವರಿಯುತ್ತಿದ್ದು ಜನಾರ್ದನಸ್ವಾಮಿ ಇದರ ಪರಿಣಾಮ ಎದುರಿಸಬೇಕಿದೆ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪಕ್ಷೇತರರಾಗಿ ಬಿಜೆಪಿ ತೆಕ್ಕೆಗೆ ಬಿದ್ದಿದ್ದ ಗೂಳಿಹಟ್ಟಿ ಶೇಖರ್, ಡಿ.ಸುಧಾಕರ್, ವೆಂಕಟರವಣಪ್ಪ ಜತೆಗೆ ಬಿಜೆಪಿ ಶಾಸಕರಾದ ಚಂದ್ರಪ್ಪ, ತಿಪ್ಪೇಸ್ವಾಮಿ ಬೆನ್ನೆಲುಬಾಗಿದ್ದರು. ಸಾಲದ್ದಕ್ಕೆ ಯಡಿಯೂರಪ್ಪ ಫ್ಯಾಕ್ಟರ್, ಅಧಿಕಾರಾರೂಢ ಪಕ್ಷ ಹೀಗೆ ಹಲವು ಕಾರಣಗಳಿದ್ದವು. ಈಗ ಈ ಯಾವ ಅವಕಾಶವೂ ಜನಾರ್ದನಸ್ವಾಮಿಗಿಲ್ಲ. ಕಳೆದ ಬಾರಿ ಮೈದುಂಬಿಕೊಂಡು ಚುನಾವಣಾ ಕಣಕ್ಕಿಳಿದಿದ್ದ ಬಿಜೆಪಿ ಕಾರ್ಯಕರ್ತರಲ್ಲೂ ಈ ಬಾರಿ ಅಂತಹ ಉತ್ಸಾಹ ಕಂಡುಬರುತ್ತಿಲ್ಲ. ಎಲ್ಲೋ ಲಿಂಕ್ ತಪ್ಪಿಹೋಗಿರುವ



ಹಾಗೆ ಬಿಜೆಪಿ ಪಾಳಯದಲ್ಲಿ ಅಸಮಾಧಾನ ಹೊಗೆಯಾಡುತ್ತಿದೆ. ಅದು ಬಿಜೆಪಿಯದ್ದೋ, ಕೆಜೆಪಿಯದ್ದೋ ಎಂಬುದೇ ಹೊರಜಗತ್ತಿಗೆ ತಿಳಿಯುತ್ತಿಲ್ಲ. ಹಾಗಾಗಿ ಜನಾರ್ದನಸ್ವಾಮಿ ಸಂಸತ್ತಿನ ಕಡೆ ಹೆಜ್ಜೆ ಹಾಕುವುದು ಅನುಮಾನ.

ಈ ಬಾರಿ ಬೋವಿ ಸಮುದಾಯಕ್ಕೆ ಸೇರಿದ ಗೂಳಿಹಟ್ಟಿ ಶೇಖರ್ ಜೆಡಿಎಸ್‌ನಿಂದ ಸ್ಪರ್ಧಿಸಿದ್ದು ಬೋವಿ ಸಮುದಾಯದ ಬಹುತೇಕ ಮತಗಳನ್ನು ಸೆಳೆಯಲಿದ್ದಾರೆ. ಇದು ಕೂಡಾ ಜನಾರ್ದನಸ್ವಾಮಿಗೆ ದೊಡ್ಡ ಸವಾಲಾಗಿದೆ.

ಗೂಳಿಹಟ್ಟಿ ಹಾದಿಯೂ ಕಷ್ಟ

ಚಿತ್ರದುರ್ಗ ಲೋಕಸಭೆಯ ಎಂಟು ವಿಧಾನಸಭೆ ಕ್ಷೇತ್ರಗಳಲ್ಲಿ ಜೆಡಿಎಸ್ ಶಾಸಕ ಇರುವುದು ಪಾವಗಡದ ತಿಮ್ಮರಾಯಪ್ಪನೊಬ್ಬನೇ. ಪಾವಗಡದಲ್ಲಿ ಜನತಾದಳದ ಪ್ರಾಬಲ್ಯ ಇದ್ದರೂ ತಿಮ್ಮರಾಯಪ್ಪ ಗೆಲುವಿಗೆ ಮಾದಿಗ ಸಮುದಾಯದ ಒಗ್ಗಟ್ಟಿನ ಮತಗಳು ನಿರ್ಣಾಯಕವಾಗಿದ್ದವು. ಅದೇ ಒಗ್ಗಟ್ಟು ಈಗ ಮಾದಿಗ ಸಮುದಾಯದ ಕಾಂಗ್ರೆಸ್ ಅಭ್ಯರ್ಥಿ ಚಂದ್ರಪ್ಪ ಪರ ಚಲಾವಣೆಯಾಗಲಿವೆ. ಶಿರಾ, ಹಿರಿಯೂರು, ಚಳ್ಳಕೆರೆ, ಚಿತ್ರದುರ್ಗ ಕ್ಷೇತ್ರದಲ್ಲಿ ಒಂದಷ್ಟು ಜೆಡಿಎಸ್ ಪ್ರಭಾವ ಇದ್ದರೂ ಗೂಳಿಹಟ್ಟಿಗೆ ಇದನ್ನೆಲ್ಲ ತನ್ನ ಪರವಾಗಿ ಮತಗಳನ್ನಾಗಿ ಪರಿವರ್ತಿಸುವ ಇಮೇಜ್ ಇಲ್ಲ



ಎಂಬುದೇ ಮೈನಸ್ ಪಾಯಿಂಟ್ ಆಗಿದೆ. ಜೆಡಿಎಸ್ ಕೃಷ್ಣಪ್ಪ ತನ್ನ ಬೆಂಬಲಕ್ಕೆ ನಿಂತಿರುವುದರಿಂದ ಯಾದವ ಸಮುದಾಯದ ಮತಗಳು ತನ್ನ ಬುಟ್ಟಿಗೆ ಬೀಳುತ್ತವೆ ಎನ್ನುವ ಹಗಲುಗನಸು ಕಾಣುತ್ತಿರುವ ಗೂಳಿಹಟ್ಟಿಗೆ ಕೃಷ್ಣಪ್ಪನ ರಾಜಕೀಯ ಪ್ರಾಬಲ್ಯದ ವಿರುದ್ಧ ಸಟೆದು ನಿಂತಿರುವ ಕಾಡುಗೊಲ್ಲ ಸಮುದಾಯದ ಅಸಮಾಧಾನ ಯಾವ ರೀತಿ ಕೆಲಸ ಮಾಡಲಿದೆ ಎನ್ನುವುದರ ಅರಿವು ಇದ್ದಂತಿಲ್ಲ.

ಹಿರಿಯೂರಿನಲ್ಲಿ ಕೃಷ್ಣಪ್ಪ ಯಾದವ ಸಮಾವೇಶ ಮಾಡಿದಾಗಲೇ ವಿರೋಧ ಸೂಚಿಸಿದ್ದ ಈ ಮುಖಂಡರು ಲೋಕಸಭೆಯಲ್ಲಿ ಗೂಳಿಹಟ್ಟಿ ಖಾತೆಗೆ ಯಾದವ ಮತಗಳು ಜಮೆಯಾಗಲು ಬಿಡುವುದಿಲ್ಲ ಎನ್ನುವ ತೀರ್ಮಾನ ಕೈಗೊಂಡಿವೆ. ಕಾಂಗ್ರೆಸ್ ನೇತೃತ್ವದ ಸಿದ್ದರಾಮಯ್ಯ ಸರ್ಕಾರ ಗೊಲ್ಲರನ್ನು ಎಸ್‌ಟಿ ಪಂಗಡಕ್ಕೆ ಸೇರ್ಪಡೆ ಮಾಡಲು ಸಿದ್ಧತೆಗಳನ್ನು ನಡೆಸಿದೆ. ಇಂತಹ ಸಮಯದಲ್ಲಿ ರಾಜಕೀಯ ನೆಲೆಕಂಡುಕೊಳ್ಳಲು ಚಿತ್ರದುರ್ಗಕ್ಕೆ ಆಗಮಿಸಿರುವ ಎ.ಕೃಷ್ಣಪ್ಪನ ಮಾತುಕೇಳಿ ಓಟು ಹಾಕುತ್ತಾರೆಯೇ ಎಂಬುದು ಯಕ್ಷಪ್ರಶ್ನೆಯಾಗಿದೆ. ಇನ್ನೂ ಗೂಳಿಹಟ್ಟಿ ಹಿಂದೆಮುಂದೆ ಕಾಯಂ ಆಗಿ ಜಮೆಯಾಗಿರುವ ಹಿಂಬಾಲಕರ ನಡುವೆ ಜೆಡಿಎಸ್ ಕಾರ್ಯಕರ್ತರು ಎರಡನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ. ಇನ್ನು ಶಾಸಕ, ಮಂತ್ರಿಯಾಗಿದ್ದಾಗ ಈತ ಕಿಸಿದದ್ದೂ ಅಷ್ಟಕ್ಕಷ್ಟೇ. ಈತ ನಾಟ್‌ರೀಚಬಲ್ ಶಾಸಕ ಎಂದೇ ಜನಪ್ರಿಯನಾಗಿದ್ದ. ಹಾಗಾಗಿ ಈಗ ಗೂಳಿಹಟ್ಟಿಯಿಂದ ನಡೆಯುತ್ತಿರುವ ಕೆಲಸವೆಲ್ಲ ಧೂಳೆಬ್ಬಿಸುವುದಷ್ಟೇ.


ಚಂದ್ರಪ್ಪ ಎಂಬ ಸಜ್ಜನ

ಕಳೆದ ಬಾರಿ ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ ಎಂಬಾತನಿಗೆ ಹೈಕಮಾಂಡ್ ಟಿಕೆಟ್ ದಯಪಾಲಿಸಿದ್ದರೂ ಈತನ ವರಸೆಗಳಿಗೆ ಸಾಕ್ಷಿಯಾಗಿದ್ದ ಕಾಂಗ್ರೆಸ್ ಮುಖಂಡರಿಗೆ ಈತನ ಪರವಾಗಿ ಹೋಗಿ ಮತ ಕೇಳುವ ಧೈರ್ಯ ಇರಲಿಲ್ಲ, ಹಾಗಾಗಿ ಬಹುತೇಕರು ನಿಷ್ಕ್ರಿಯರಾದರು. ಈ ಬಾರಿ ಈತನ ಹಕೀಕತ್ತುಗಳನ್ನು ಸರಿಯಾಗಿ ಗ್ರಹಿಸಿದ ಕಾಂಗ್ರೆಸ್ ಹೈಕಮಾಂಡ್ ಮಾದಿಗ ಸಮುದಾಯಕ್ಕೆ ಸೇರಿದ ಕೆಪಿಸಿಸಿ ಕಾರ್ಯದರ್ಶಿಯಾಗಿರುವ ಬಿ.ಎನ್.ಚಂದ್ರಪ್ಪ ಎಂಬ ಸಜ್ಜನನಿಗೆ ಟಿಕೆಟ್ ನೀಡಿ ತನ್ನ ಗೆಲುವಿನ ಹಾದಿಯನ್ನು ಸುಗಮಗೊಳಿಸಿಕೊಂಡಿದೆ.

ಕ್ಷೇತ್ರದಲ್ಲಿ ಸಚಿವರಾದ ಟಿ.ಬಿ. ಜಯಚಂದ್ರ, ಎಚ್.ಆಂಜನೇಯ, ಶಾಸಕರಾದ ಟಿ.ರಘುಮೂರ್ತಿ, ಬಿ.ಜಿ.ಗೋವಿಂದಪ್ಪ, ಡಿ.ಸುಧಾಕರ್ - ಈ ಐವರು ಚಂದ್ರಪ್ಪನ ಬೆನ್ನಿಗೆ ನಿಂತಿದ್ದಾರೆ. ಆಗ ಜನಾರ್ದನಸ್ವಾಮಿಗಿ[illegible] ಎಲ್ಲ ಅನುಕೂಲಗಳೂ ಈಗ ಚಂದ್ರಪ್ಪನ ಪಾಲಿಗಿ[illegible] ಮಾದಿಗ ಸಮುದಾಯ ಹಾಗೂ ಅಲ್ಪಸಂಖ್ಯಾತರ ಒಗ್ಗಟ್ಟಿ[illegible] ಮತಗಳು ವರದಾನವಾಗಿ ಪರಿಣಮಿಸಲಿವೆ. ಇದರಾಚೆ[illegible] ಕುರುಬ, ನಾಯಕ, ಗೊಲ್ಲ ಸಮುದಾಯ ಸೇರಿದಂ[illegible] ಹಿಂದುಳಿದ ಜಾತಿಗಳ ಶೇಕಡಾವಾರು ಪಾರಂಪರಿ[illegible] ಮತಗಳು ಕಾಂಗ್ರೆಸ್‌ನ ಬುಟ್ಟಿಯಲ್ಲಿವೆ. ಒಂದು ಪಕ್ಷವಾ[illegible] ಕಾಂಗ್ರೆಸ್ ಹಿಂದೆಂದೂ ಇಷ್ಟೊಂದು ಸಕ್ರಿಯವಾ[illegible] ಲೋಕಸಭೆ ಚುನಾವಣೆಗೆ ಸಜ್ಜಾಗಿದ್ದ ನಿದರ್ಶನಗಳ[illegible] ಇರಲಿಲ್ಲ, ಈ ಬಾರಿ ಅಡಿಯಿಂದ ಮುಡಿಯವರೆ[illegible] ಎಲ್ಲ ಹಂತದಲ್ಲೂ ಕಾಂಗ್ರೆಸ್‌ನಲ್ಲಿ ರಾಜಕೀಯ ಉತ್ಸಾ[illegible] ಕಂಡುಬರುತ್ತಿದೆ. ಯಾವ ಲೆಕ್ಕಾಚಾರದಿಂದ ನೋಡಿದರೂ ಚಂದ್ರಪ್ಪಗೆ ಶುಭಸೂಚನೆಗಳೇ ಕಂಡುಬರುತ್ತಿವೆ. ಚಂದ್ರಪ[illegible] ಸಾದಾಸೀದಾ, ಸರಳ ನಡವಳಿಕೆ ಎಷ್ಟು ಪ್ರಭಾ[illegible] ಬೀರಿದೆಯೆಂದರೆ 'ಕಾಂಗ್ರೆಸ್ ಕ್ಯಾಂಡಿಡೇಟು ಬಾ[illegible] ಒಳ್ಳೆಯವನಂತೆ. ಗತ್ತು ಇಲ್ವಂತೆ. ಜನರನ್ನು ಬಹ[illegible] ಚೆನ್ನಾಗಿ ಮಾತನಾಡಿಸುತ್ತಾನಂತೆ' ಎನ್ನುವ ಅಭಿಪ್ರಾ[illegible] ಎಲ್ಲೆಡೆ ಕೇಳಿ ಬರುತ್ತಿವೆ. ಇದೆಲ್ಲ ಬಿಜೆಪಿ, ಜೆಡಿಎಸ್[illegible] ಬಿಸಿತುಪ್ಪವಾಗಿದೆ.

ಮೊದಲು ಸ್ಥಳೀಯರಿಗೆ ಟಿಕೆಟ್ ನೀಡಬೇಕೆಂದ[illegible] ನಂತರ ಚಂದ್ರಪ್ಪ ಮಾದಿಗ ಸಮುದಾಯಕ್ಕೆ ಸೇರಿದವ[illegible] ಅಂದರು. ಇದರ ನಡುವೆ ಸ್ಥಳೀಯ ಮಾದಿ[illegible] ಮುಖಂಡರನ್ನು ಎತ್ತಿಕಟ್ಟುವ ಕೆಲಸ ವ್ಯವಸ್ಥಿತವಾ[illegible] ನಡೆಯಿತು. ಈಗ ಅವೆಲ್ಲ ಬದಿಗೆ ಸರಿದಿ[illegible] ಕಾಂಗ್ರೆಸ್‌ನಿಂದ ಟಿಕೆಟ್ ಆಕಾಂಕ್ಷಿಗಳಾಗಿದ್ದವರು ಚಂದ್ರ[illegible] ಬೆಂಬಲಕ್ಕೆ ನಿಂತಿದ್ದಾರೆ. ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ[illegible] ಅದೇನು ಜ್ಞಾನೋದಯವಾಯಿತೋ ನಾಮಪ[illegible] ಹಿಂತೆಗೆದುಕೊಂಡು ಮುಜುಗರದಿಂದ ಬಚಾವಾಗಿದ್ದ[illegible] ಭದ್ರಾ ಮೇಲ್ದಂಡೆ ಹೋರಾಟದಲ್ಲಿ ಮುಂಚೂಣಿಯ[illegible] ಎಂ.ಜಯಣ್ಣ ಹಿರಿಯ ದಲಿತ ಮುಖಂಡ ಹಾ[illegible] ಜಿಲ್ಲೆಯ ಮಾದಿಗ ಸಮುದಾಯದ ಜತೆ ಉತ್ತ[illegible] ಸಂಪರ್ಕವಿಟ್ಟುಕೊಂಡಿರುವ ಬಿ.ಪಿ.ಪ್ರಕಾಶ್ ಮೂ[illegible] ಜೆ.ಎಸ್. ಮಂಜುನಾಥ್ ಎಲ್ಲರೂ ಚಂದ್ರಪ್ಪ[illegible] ಗ್ರೀನ್‌ಸಿಗ್ನಲ್ ತೋರಿಸಿದ್ದಾರೆ. ಹಾಗಾಗಿ ಚಂದ್ರ[illegible] ಕಷ್ಟದ ದಾರಿಗಳೆಲ್ಲ ರಹದಾರಿಗಳಾಗಿ ಗೆಲುವಿನತ್ತ [illegible] ತೋರಿಸುತ್ತಿವೆ.

● ಬಿ. ನಾರಾಯಣ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಭಯಂಕರ ರುದ್ರಕಾಳಿ

ಬೆಂಗಳೂರಿನಲ್ಲಿ ದೇವಾಲಯಗಳ ಸಮೀಪವಿರುವ ...ಶೋಕಗಾಗುವ ಮರಗಳ ಕೆಳಗೆ, ಕೆಲವೊಮ್ಮೆ ಸಾಧಾರಣ ...ಗಳ ಕೆಳಗೂ ಕೆಲವು ದೇವರ ಪಟಗಳು ಮತ್ತು ...ಹಗಳು ಕಾಣಬರುತ್ತವೆ. ಅವುಗಳಲ್ಲಿ ಶಿರಡಿ ಬಾಬಾನ ...ರಿವ ವಿಗ್ರಹವೋ, ಕಣ್ಣು ಮುಚ್ಚಿರುವ ಅಥವಾ ...ರನೆಯ ಕಣ್ಣು ತೆರೆದಿರುವ ಶಿವನ ಚಿತ್ರವೋ, ನಾಲಿಗೆ ...ರಚಾಚಿರುವ ರುದ್ರ ಕಾಳಿಯ ಚಿತ್ರವೋ, ಅಥವಾ ...ವುದೇ ದೇವರ ಭಗ್ನ ಅಥವಾ ಬೇಡದ ಚಿತ್ರಗಳು ...ಗಿರುತ್ತವೆ. ಅವು ಭಕ್ತಜನರಿಂದ ಪರಿತ್ಯಕ್ತವಾದ ಅನಾಥ ...ರುಗಳು. ದೇವರುಗಳು ಹೀಗೆ ತಬ್ಬಲಿಗಳಾಗಿ ಬೀದಿಗೆ ...ವುದಕ್ಕೆ ಹಲವಾರು ಕಾರಣಗಳಿವೆ. ಭಗ್ನವಾದ ವಿಗ್ರಹಕ್ಕೆ ...ಜೆ ಸಲ್ಲಿಸಬಾರದೆಂಬ ನಂಬುಗೆಯಿಂದಾಗಿ ಬೀದಿಗೆ ...ರುವ ಅಂಗವಿಕಲ ದೇವತೆಗಳು ಕೆಲವಾದರೆ, ಮತ್ತೆ ...ವು ಕಣ್ಮುಚ್ಚಿ ಧ್ಯಾನಕ್ಕೆ ಕುಳಿತಿರುವ ಅಥವಾ ಮೂರನೆಯ ...ಣ್ಣು ತೆರೆದಿರುವ ಶಿವನ ಚಿತ್ರವು ಮನೆಯಲ್ಲಿ ...ಟ್ಟುಕೊಳ್ಳಬಾರದೆಂಬ ನಂಬುಗೆ. ಇನ್ನು ರುದ್ರಕಾಳಿಯ ...ವಂತೂ ಎಂದಿಗೂ ಮನೆಯಲ್ಲಿ ಇಟ್ಟುಕೊಳ್ಳಬಾರದ್ದು. ...ನ್ನು ತಾಂತ್ರಿಕ ಸಾಧಕರು, ಮಹಾನ್ ಶಾಕ್ತ ಪಂಥದ ...ು, ಇತರ ಯೋಗಿಗಳು ಮಾತ್ರ ಇಟ್ಟುಕೊಳ್ಳಬಹುದೆಂಬ ...ಪ್ರದಾಯಕ ನಂಬುಗೆ. ಇಂತಹ ಬಹುತೇಕ ನಂಬುಗೆಗಳು ...ಟ್ಟಿರುವುದೇ ಭಯದಿಂದ.

ಅಂಗವಿಕಲ ಅನಾಥ ದೇವರುಗಳು

...ಅಂಗವಿಕಲ ದೇವತೆಗಳು ಅನಾಥರಾಗಿ ಮರಗಳಡಿಯಲ್ಲಿ ...ದ್ದಿ ನರಳುತ್ತಾ ಇರುವ ದೃಶ್ಯವನ್ನು ಕಂಡಾಗೆಲ್ಲಾ ನನಗೆ ...ಕೃಷ್ಣ ಪರಮಹಂಸರ ಜೀವನದ ಒಂದು ಘಟನೆ ...ನೆಗೆ ಬರುತ್ತದೆ. ದಕ್ಷಿಣೇಶ್ವರದ ರಾಣಿ ರಾಸಾಮಣಿಯ ...ತನದಲ್ಲಿದ್ದ ಕಾಳಿದೇವಾಲಯವು ಹಲವು ದೇವಸ್ಥಾನಗಳ ...ರ್ಣವಾಗಿದ್ದು, ಅದರಲ್ಲಿ ರಾಧಾಕೃಷ್ಣ ದೇವಾಲಯವೂ ...ಮ. ಒಮ್ಮೆ ಪೂಜಾರಿಯೊಬ್ಬನ ಅಜಾಗರೂಕತೆಯಿಂದಾಗಿ ... ವಿಗ್ರಹದ ಕಾಲು ಭಂಗವಾಗಿ ಅಲ್ಲಿನ ಪುರೋಹಿತರು ...ವಾದ ವಿಗ್ರಹವನ್ನು ಪೂಜಿಸಬಾರದೆಂದೂ, ಅದನ್ನು ...ಯ ಪಾಲು ಮಾಡಿ ಮತ್ತೆ ಹೊಸ ವಿಗ್ರಹವನ್ನು ...ಪಿ ಪ್ರತಿಷ್ಠಾಪನೆ ಮಾಡಬೇಕೆಂದೂ ರಾಣಿ ರಾಸಾಮಣಿಗೆ ...ಚಿಸುವರು. ಆಗ ರಾಮಕೃಷ್ಣರು ರಾಣಿಯವರ ...ಮನೊಬ್ಬನಿಗೆ ಕಾಲ್ಮುರಿದರೆ ಅವನನ್ನು ಹೊರಗೆ ಹಾಕಿ ...ಸ ಅಳಿಯನನ್ನು ತರುವರೇ ಎಂದು ಕೇಳಿದರು. ನಂತರ ...ೀ ವಿಗ್ರಹಕ್ಕೆ ರಿಪೇರಿ ಕೆಲಸವಾಯಿತು. ರಾಮಕೃಷ್ಣರಿಗೆ ...ದೇವರ ವಿಗ್ರಹದ ಜೊತೆಗೂ ಇರುವ ಭಾವನಾತ್ಮಕ ...ಬಂಧವಿಲ್ಲಿ ಗೋಚರವಾಗುತ್ತದೆ.

ಆದರೆ, ನಮ್ಮಲ್ಲಿ ಬಹು ಜನರು ದೇವರ ವಿಗ್ರಹಗಳನ್ನು ...ವಾ ಪಟಗಳನ್ನು ಮನೆಯಲ್ಲಿ ಹೊಂದಿರುವುದೇ ...ದಿಂದ ಅಥವಾ ಲೌಕಿಕ ಆಸೆಯಿಂದ. ಭಾವನಾತ್ಮಕವಾದ ...ಯಿಂದಂತೂ ಅಲ್ಲವೇ ಅಲ್ಲ. ನಮ್ಮ ಪ್ರೀತಿ ...ತ್ರರಾದವರೊಬ್ಬರ ಭಾವಚಿತ್ರವನ್ನು ಒಲವಿನಿಂದ, ...ರುಕವಾಗಿ ದಿಟ್ಟಿಸುವ ರೀತಿಯಲ್ಲಿ ಅನೇಕ ಸಂತರು ...ತ್ತಿ ಭಕ್ತರು ದೇವರ ವಿಗ್ರಹ ಅಥವಾ ಪಟಗಳನ್ನು ...ಸಿದರೆ, ರಾಮಕೃಷ್ಣರು ಇನ್ನೂ ಒಂದು ಹೆಜ್ಜೆ ಮುಂದೆ ...ಗಿ ಅವು ಜೀವಂತವಾಗಿರುವ ಹಾಗೆ ಅವುಗಳೊಂದಿಗೆ ...ಸುತ್ತಾರೆ. ಅದು ಅವರ ಭಾವೋತ್ಕರ್ಷದ ಪರಮಾವಧಿ.

...ಇರಲಿ, ನಾನು ಕಂಡ ಹಾಗೆ ಅತಿಹೆಚ್ಚು ತಬ್ಬಲಿಯಾಗಿ ...ರುವ ಚಿತ್ರಗಳೆಂದರೆ ದೇವಿಯರದು, ಅದರಲ್ಲೂ ...ಯದು. ಎಂತೋ ಹೇಗೋ, ಯಾರೋ ಅಜ್ಞಾನಿಯ ...ವೇಕದಿಂದಾಗಿ ಕಾಳಿಯ ಚಿತ್ರ ಮನೆಯನ್ನು ...ಶಿಸಿಬಿಡುತ್ತದೆ. ಮನೆಯಲ್ಲಿರುವ ಪುರೋಹಿತರ ಜ್ಞಾನದ ...ತುಗಳಿಗೆ ಕಿವಿಯಾಗಿ ವಿವೇಕವನ್ನು ಹೊಂದಿರುವ ... ಆ ಕಾಳಿಯ ಚಿತ್ರವನ್ನು ಮರದ ಕೆಳಗೋ, ಅರಳೀ ...ಗೋ ದಾಟಿಸಿ ಕೈ ತೊಳೆದುಕೊಳ್ಳುತ್ತಾರೆ.

ಅವಿಚಾರದ ಪೂಜಾರಿಗಳು

...ನ್ನ ಚಾನೆಲ್ಲೊಂದಕ್ಕೆ ಒಯ್ಯುತ್ತಿದ್ದ ಡ್ರೈವರ್ ತನ್ನ ...ೀಲಿ ಸಂಜೀವಿನಿ ಪರ್ವತದ ಸಮೇತ ಹಾರುತ್ತಾ ...ತ್ತಿರುವ ಹನುಮಂತನ ಚಿತ್ರದ ಹಚ್ಚೆಯನ್ನು ...ಸಿಕೊಂಡಿದ್ದ, ಅದು ಕಳಾತ್ಮಕವಾಗಿಯೂ, ...ಚ್ಚಾಗಿಯೂ ಇದ್ದು ನಾನು ಅದನ್ನು ಕಲಾಕೃತಿಯನ್ನಾಗಿ ...ಸಿದೆ. ನಂತರ ಆ ಡ್ರೈವರ್ ಅದನ್ನು ಹಾಕಿಸಿಕೊಂಡ ...ರದ ಕಷ್ಟ ಹೇಳಿದ. ಹನುಮಂತನ ಹಚ್ಚೆಯನ್ನು ...ಸಿಕೊಂಡಿರುವ ಕಾರಣದಿಂದ ಅವನು ...ುವೆಯಾಗಬಾರದೆಂದು ಹನುಮಂತಗುಡಿಯ ...ಜಾರಿಯೊಬ್ಬನು ಹೇಳಿ ಅವನನ್ನು ಇಕ್ಕಟ್ಟಿಗೆ ...ಸಿಬಿಟ್ಟಿದ್ದ. ಸರಿ, ನಾನು ನನ್ನ ಪುರಾಣ ಶುರು ...ೊಂಡೆ. ಅಂತೂ ಇಂತೂ ನಾನು ಕಾರಿನಿಂದ ಇಳಿಯುವ ಹೊತ್ತಿಗೆ, ಹನುಮಂತನು ಸಮುದ್ರ ಹಾರುವಾಗ ಅವನ ಮೈಯಿಂದ ಬಿದ್ದ ಬೆವರನ್ನು (ವೀರ್ಯ) ನುಂಗಿ ಗರ್ಭ ಧರಿಸಿರುವ ಸಮುದ್ರವಾಸಿ ಕನ್ಯೆಯ ಕಥೆಯನ್ನು ಹೇಳಿ, ಈಗಿರುವ ಹನುಮಂತಗುಡಿಯ ಪೂಜಾರಿಗಳಲ್ಲಿ ಎಷ್ಟು ಜನ ಬ್ರಹ್ಮಚಾರಿಗಳೇ ಇದ್ದಾರೆಂದು ಅವನನ್ನು ಸಮೀಕ್ಷೆಗಳಿಗೆ ಒಳಪಡಿಸಿ, ಅವನು ಮದುವೆಯಾಗಬಹುದು ಎಂದು ಮನವರಿಕೆ ಮಾಡಿಕೊಡುವಷ್ಟರಲ್ಲಿ ಸಾಕುಸಾಕಾಯಿತು. ಈ ಪೂಜಾರಿಗಳ ಅಥವಾ ಪೌರೋಹಿತ್ಯದಷ್ಟು ಅವಿವೇಕದ, ಅಜ್ಞಾನದ, ಅವಿಚಾರದ ಮತ್ತು ಅಂಧವಿಶ್ವಾಸದ ಕಸುಬು ಇನ್ನಾವುದೂ ಇಲ್ಲ.

ಈ ಜನಗಳೋ ಸಹಜವಾದ ವಿಚಾರಗಳನ್ನೂ ಮಾಡದೇ ಅವರ ಮಾತುಗಳನ್ನು ಅನುಕರಿಸುವುದು ಅತ್ಯಂತ ಆಶ್ಚರ್ಯ. ರಾಮಕೃಷ್ಣ ಪರಮಹಂಸರು ಭಗ್ನವಾದ ವಿಗ್ರಹದ ವಿಚಾರ ಮಾಡುವಾಗ ಅವರು ಆಡಿದ್ದು ಎಂತದ್ದೋ ನಿಲುಕಲಾರದಂತಹ ಆಧ್ಯಾತ್ಮಿಕ ವಿಷಯವೇನಲ್ಲ, ಸಹಜವಾದ, ಸರಳವಾದ ನೇರ ವಿಚಾರ.

ನಾನು ಗಮನಿಸಿದಂತೆ ದೇವರನ್ನು ನಂಬುವವರು ಅತಿ ಹೆಚ್ಚು ತಮ್ಮ ಭಕ್ತಿಯ ದೇವರಿಗೆ ಅಪಮಾನ ಮಾಡುತ್ತಾರೆ. ತಮ್ಮ ಪ್ರೀತಿಯ ಮತ್ತು ಭಕ್ತಿಯ ದೇವರ ಮತ್ತು ತಮ್ಮ ಮಧ್ಯೆ ನೇರ ಸಂವಹನ ಇಟ್ಟುಕೊಳ್ಳದೇ, ಮಧ್ಯವರ್ತಿಯಾಗಿ ಪೂಜಾರಿಯೊಬ್ಬನನ್ನು ತರುವುದು ಎಷ್ಟರಮಟ್ಟಿಗೆ ಸರಿಯಾದುದು? ತಮ್ಮ ದೇವರನ್ನು ಸರ್ವಶಕ್ತ ಸರ್ವಜ್ಞನೆಂದು ನಂಬಿ ಶರಣಾಗತರಾದ ಮೇಲೆ ರಾಹುಕಾಲ, ಗುಳಿಕಕಾಲ ಇತ್ಯಾದಿ ಮುಹೂರ್ತಗಳನ್ನು ನೋಡಿ ಕೆಲಸ ಮಾಡುವುದು, ಪುರೋಹಿತನೊಬ್ಬನ ಅವಿವೇಕದ ಮಾತುಗಳನ್ನು ಕೇಳುತ್ತಾ ಅದರಂತೆ ನಡೆದುಕೊಳ್ಳುವುದು, ತಮ್ಮ ಭಕ್ತಿಯ ಮತ್ತು ಪ್ರೀತಿಯ ದೇವರನ್ನು ಅನುಮಾನಿಸುವುದಲ್ಲದೇ ನೇರವಾಗಿ ಅಪಮಾನಿಸುವುದು. ಅವರಿಗೆ ತಮ್ಮ ದೇವರ ಮೇಲಿರುವ ಭಕ್ತಿ ಮತ್ತು ಪ್ರೀತಿಗಿಂತ ಮೌಢ್ಯಾಚರಣೆಗಳ ಕುರಿತಾದ ಭೀತಿಯೇ ಹೆಚ್ಚಾಗಿ ಕಾಣುತ್ತದೆ. ಯಾರೇ ದೇವರನ್ನು ನಂಬುವುದು ನಿಜವೇ ಆದಲ್ಲಿ ಯಾವುದೇ ಪೂಜಾರಿಗಳ, ಪುರೋಹಿತರ, ಕಂದಾಚಾರಗಳ, ಮೌಢ್ಯಾಚರಣೆಗಳ ಮೊರೆ ಎಂದಿಗೂ ಹೋಗಲೇಬಾರದು. ಸೂಫಿ ಸಂತರಾಗಲಿ, ಭಕ್ತಿ ಪಂಥದ ಭಕ್ತರಾಗಲಿ ಎಂದಿಗೂ ಕಂದಾಚಾರಕ್ಕೆ, ಮೌಢ್ಯಕ್ಕೆ ಬಿದ್ದವರೇ ಅಲ್ಲ. ಆದರೆ, ಅವರ ನಂತರ ಅವರ ಕುರಿತೇ ಸಾಕಷ್ಟು ಮೌಢ್ಯಗಳು ಹುಟ್ಟಿಕೊಳ್ಳುತ್ತವೆ. ಅದು ಇನ್ನೊಂದು ಮಗ್ಗುಲಿನ ವಿಚಾರ.

ದೇವತೆಗಳನ್ನು ಬೀದಿಪಾಲು ಮಾಡುವ ಜನರು ಹೆಚ್ಚಾಗಿ ಭಯಕ್ಕೊಳಗಾಗಿರುವ ಮಂದಿ. ಅದರಲ್ಲೂ ಕಾಳಿ ಅಥವಾ ಭೈರವ ಇತ್ಯಾದಿ ರುದ್ರ ದೇವತೆಗಳ ಬಗ್ಗೆ ಪ್ರಾಥಮಿಕ ಹಂತದ ವಿಚಾರಗಳನ್ನೂ ತಿಳಿದಿರದ ಪಾಪದವರುಗಳು. ತಮಗೆ ತಿಳಿದಿರುವ ವಿವರಣೆಗಳನ್ನು ಕೇಳಿಯೇ ಹೆದರಿರುವವರು. ಈ ಪುರಾಣಿಕರೂ ವರ್ಣಿಸುವುದು ಕಡಿಮೆಯೇನಲ್ಲ.

ಘೋರ ದೇವಿಯರು

ಚಿದಾನಂದವಧೂತರು ತಮ್ಮ ಶ್ರೀ ದೇವಿ ಮಹಾತ್ಮೆಯಲ್ಲಿ ದೇವಿಯ ಶೌರ್ಯಕ್ಕೆ ಸಿಕ್ಕ ಮಹಿಷಾಸುರನ ಸೈನ್ಯ ಎದುರಿಸಿದ ಪರಿಣಾಮವೊಂದರ ಉದಾಹರಣೆಯನ್ನು ನೋಡಿ.

ಸುರಿದ ಕರುಳಿನ ಮಾಂಸಖಂಡದ
ಹರಿವ ರಕುತದ ಮಜ್ಜೆ ಮಿದುಳಿನ
ಮೆರೆವ ನೆಣವಸೆ ಜೊಂಡುಗಳ ಜಾರಿಕೆಯ ಕರ್ದಮದ
ಹರಿದ ನೊಗಗಳ ಹರಿದ ಸಿಂದದ
ಹರಿದ ರಂಚೆಯ ಹರಿದ ಸೊಂಡಿಲ
ಹರಿದ ಖರಗಳ ಮೊತ್ತದಲಿರಣಭೂಮಿ ರಂಜಿಸಿತು||

ರಣಭೂಮಿಯಲ್ಲೆಲ್ಲಾ ಕರುಳು, ಮಾಂಸಖಂಡ, ರಕ್ತದ ಪ್ರವಾಹ, ಮಜ್ಜೆ ಮಿದುಳು, ಕೊಬ್ಬು ಕೆಸರು, ವಿರೂಪವಾದ ತಲೆಗಳು, ಮುರಿದುಬಿದ್ದ ಧ್ವಜ, ಅಂಬಾರಿಗಳು, ರಥದ ನೊಗಗಳು, ತುಂಡಾದ ಆನೆ ಸೊಂಡಿಲುಗಳು, ಕುದುರೆಯ ಕಾಲಿನ ಗೊರಸುಗಳು ಕಾಣುತ್ತಿದ್ದವು. ಇನ್ನೂ ಮುಂದುವರಿಸಿ, ಒಬ್ಬನ ಶಿರ ಹರಿದರೆ ಆತನ ಮುಂಡವು ಕುಣಿದು ನಂತರ ಬೀಳುವುದು, ಅಂತಹುದರಲ್ಲಿ ಒಮ್ಮೆಲೇ ನೂರು ಕೋಟಿಗಟ್ಟಲೆ ಮುಂಡಗಳು ಕುಣಿದವರೆಂದರೆ ಆ ರೌದ್ರಕ್ಕೆ ಕಾರಣಳಾದ ದೇವಿಯ ಭಯಂಕರ ಅವತಾರವನ್ನು ಹೇಗೆ ಕಲ್ಪಿಸಿಕೊಳ್ಳುವುದು?

ಹೆದರಲೇ ಬೇಡಿ, ಕೋಟಿಗಳು, ಸಾವಿರಗಳು ಇವೆಲ್ಲಾ ನಮ್ಮ ಪುರಾಣಗಳಲ್ಲಿ ಹುಚ್ಚಾಪಟ್ಟೆ ಉಪಯೋಗಿಸುತ್ತಾರೆ. ಒಂದು ಅನ್ನುವುದಕ್ಕೆ ಸಾವಿರವೆಂದೂ, ಎರಡು ಎನ್ನುವುದಕ್ಕೆ ಕೋಟಿಯೆಂದೂ ನಾವು ಲೆಕ್ಕ ಮಾಡಿಕೊಳ್ಳಬಹುದು.

ಮಿದುಳುಗಳ ನೆಣವಸೆಯ ಜೊಂಡಿನ
ಕದಡು ಮೇದಸ್ಸುಗಳ ಜಾರಿಕೆ
ಕೆದರಿ ದಿಕ್ಕಿಗೆ ಹರಿದ ಚಿದಿ ಚಿದಿಯಾದ ಮಾಂಸಗಳು
ಕದನದಿಂದಲಿ ಹೋಹ ರಕ್ತದ
ನದಿನದಿಗಳೇ ಹರಿಯುತಿರ್ದವು
ಅದರೊಳಗಸುಂಖ್ಯಾತ ಬಲವದು ಮುಳುಗಿತ್ತೈ ಎಂದ||

ಮಿದುಳು, ಕೊಬ್ಬಿನ ಜೊಂಡು, ಮೇದಸ್ಸು, ಚೆಲ್ಲಾಪಿಲ್ಲಿಯಾಗಿದ್ದ ಮಾಂಸದ ತುಂಡುಗಳು, ರಣರಂಗದಲ್ಲಿ ಎಲ್ಲೆಲ್ಲೂ ಬಿದ್ದಿದ್ದವು. ರಣರಂಗದಿಂದ ಹರಿದು ಹೋಗುತ್ತಿದ್ದ ರಕ್ತದ ನದಿಗಳಲ್ಲಿ ಲೆಕ್ಕವಿಲ್ಲದಷ್ಟು ಸೈನ್ಯವು ಮುಳುಗಿಹೋಯಿತು. ಇದಕ್ಕೆಲ್ಲಾ ಕಾರಣವೆಂದರೆ ಏಕೈಕ ವ್ಯಕ್ತಿ, ಅದು ಸ್ತ್ರೀ ಮೂರ್ತಿಯಾದ ದೇವಿ ಎಂಬುವಳು. ಈ ರಕ್ತದ ನದಿಗಳು, ಕೊಬ್ಬಿನ ಜೊಂಡು ಎಂಬುವೆಲ್ಲಾ ಉತ್ಪ್ರೇಕ್ಷೆಗಳೆಂದೂ ತಿಳಿಯದ ಸಾಮಾನ್ಯ ಮಂದಿಯು ಈ ಘೋರಕ್ಕೆ ಕಾರಣಳಾದವಳ ಚಿತ್ರವನ್ನು ಮನೆಯಲ್ಲಿ ಹೊಂದಲೂ ಹೆದರುತ್ತಾರೆ.

ಅಂಬೇಡ್ಕರ್‌ರವರ ಪ್ರಶ್ನೆಗಳು

ದೇವಿಯ ಇಂತಹ ಘೋರ ಪರಾಕ್ರಮವನ್ನು ಪುರಾಣಗಳಲ್ಲಿ ಗಮನಿಸುತ್ತಾ ಡಾ.ಬಿ.ಆರ್.ಅಂಬೇಡ್ಕರ್ ಅವರು ವೈದಿಕ ಮತ್ತು ಪೌರಾಣಿಕ ದೇವಿಯರನ್ನು ಗಮನಿಸುತ್ತಾ ಕೆಲವು ಪ್ರಶ್ನೆಗಳನ್ನು ಎತ್ತುತ್ತಾರೆ. ವೈದಿಕ ಸಾಹಿತ್ಯದಲ್ಲಿ ರಾಕ್ಷಸರೊಡನೆ ಯುದ್ಧಗಳಾದಾಗ ಕೇವಲ ದೇವತೆಗಳೇ ಇದ್ದರು. ವೈದಿಕ ದೇವಿಯರಾರೂ ಅವುಗಳಲ್ಲಿ ಭಾಗವಹಿಸಲಿಲ್ಲ, ಪೌರಾಣಿಕ ಕಾಲದಲ್ಲಾದ ಯುದ್ಧಗಳಲ್ಲಿ ಬರಿಯ ದೇವಿಯರೇ ಯುದ್ಧವನ್ನು ಮಾಡಿರುವುದು. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ದೇವಿಯರು ಯುದ್ಧ ಮಾಡಿದ ಕಾಲದಲ್ಲಿಯೂ ಇದ್ದರು. ಹಾಗಿದ್ದರೂ ದೇವಿಯರನ್ನೇ ಈ ಕೆಲಸಕ್ಕೆ ಏಕೆ ನೇಮಿಸಲಾಯಿತು? ವೈದಿಕ ದೇವಿಯರಲ್ಲಿಲ್ಲದ, ಆದರೆ ಪೌರಾಣಿಕ ದೇವಿಯರಲ್ಲಿದ್ದ ಶಕ್ತಿಯ ಮೂಲ ಯಾವುದು? ಎಂದು ಕೇಳುತ್ತಾ ಅವರೇ ಸ್ಪಷ್ಟೀಕರಣ ನೀಡಲು ಮುಂದಾಗುತ್ತಾರೆ. "ಪೌರಾಣಿಕ ದೇವರುಗಳ ಶಕ್ತಿಯೇ ದೇವಿಯಲ್ಲಿತ್ತು ಎಂದು ಪೌರಾಣಿಕ ಕರ್ತೃಗಳು ನೀಡುವಂತಹ ಸುಪರಿಚಿತ ಸಿದ್ಧಾಂತದ ಪ್ರಕಾರ ಪ್ರತಿಯೊಬ್ಬ ದೇವನಿಗೂ ಶಕ್ತಿ ಇತ್ತು; ಆ ಶಕ್ತಿ ಅವನ ಹೆಂಡತಿ ದೇವಿಯಲ್ಲಿ ನೆಲೆಸಿತ್ತು, ಈ ಸಿದ್ಧಾಂತ ಎಷ್ಟು ಸರ್ವಸಮ್ಮತವಾಯಿತೆಂದರೆ, ಪ್ರತಿಯೊಬ್ಬ ದೇವಿಯೂ ಶಕ್ತಿಯೆಂದೇ ಕರೆಯಲ್ಪಡುತ್ತಿದ್ದಾಳೆ." ಹೀಗೇ ಮುಂದುವರಿಸುತ್ತಾ ಅಂಬೇಡ್ಕರ್, "ವೈದಿಕ ದೇವಿಯರಾದ ಲಕ್ಷ್ಮೀ ಮತ್ತು ಸರಸ್ವತಿಯರು ಏಕೆ ಯಾವ ಯುದ್ಧದಲ್ಲಿಯೂ ಭಾಗವಹಿಸಲಿಲ್ಲ?" ಎಂಬ ಪ್ರಶ್ನೆಯ ಜಾಡಿನಲ್ಲಿಯೇ ಮುಂದುವರಿದು, "ದುರ್ಗೆ ಮಾತ್ರ ವೀರಳು, ಅವಳಿಗೆ ಮಾತ್ರ ರಾಕ್ಷಸರನ್ನು ನಾಶ ಮಾಡುವ ಸಾಮರ್ಥ್ಯವಿತ್ತು ಎಂದು ಹೇಳುವ ಮೂಲಕ, ತಮ್ಮ ದೇವರುಗಳನ್ನು ಹೇಡಿಗಳ ಗುಂಪನ್ನಾಗಿ ಮಾಡುತ್ತಿದ್ದೇವೆಂದು ಬ್ರಾಹ್ಮಣರಿಗೆ ಅನ್ನಿಸಲಿಲ್ಲವೆಂದು ಕಾಣುತ್ತದೆ. ಪ್ರಾಯಶಃ ದೇವರುಗಳು ರಾಕ್ಷಸರಿಂದ ತಮ್ಮನ್ನೂ ತಾವೇ ರಕ್ಷಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ಅದರಿಂದಲೇ ಅವರು ತಮ್ಮ ಹೆಂಡತಿಯರನ್ನು ರಕ್ಷಣೆಗಾಗಿ ಯಾಚಿಸಬೇಕಾಯಿತು."

ಬ್ರಾಹ್ಮಣರ ಪ್ರಕಾರ, ಅಸುರರ ಎದುರಿನಲ್ಲಿ ಪೌರಾಣಿಕ ದೇವರುಗಳು ಬಹಳ ಅಶಕ್ತರಿದ್ದರು ಎಂಬುದನ್ನು ತೋರಿಸಲು ಮಾರ್ಕಂಡೇಯ ಪುರಾಣದಿಂದ ಆಯ್ದ ಮಹಿಷಾಸುರ ಮರ್ಧಿನಿಯ ಕಥೆಯನ್ನು ಅಂಬೇಡ್ಕರ್ ಅವರು ಉದಹರಿಸುತ್ತಾರೆ. ನಂತರ ದೇವಿಯರಿಗೆ ಶಕ್ತಿಯಿರುವ ಕಾರಣ, ಅವರನ್ನು ಪೂಜಿಸಬೇಕು ಎಂದು ಹೇಳುವುದು ಕೇವಲ ಒಗಟಷ್ಟೇ ಅಲ್ಲ, ಒಂದು ವಿರೋಧಾಭಾಸವೂ ಹೌದು: ಈ ಶಕ್ತಿ ಸಿದ್ಧಾಂತವನ್ನು ಏಕೆ ಸೃಷ್ಟಿಸಲಾಯಿತು ಎಂಬುದಕ್ಕೆ ಒಂದು ಸ್ಪಷ್ಟೀಕರಣ ಬೇಕು. ಹೊಸ ವಸ್ತುವೊಂದನ್ನು ಮಾರುಕಟ್ಟೆಗೆ ತರಲೋಸ್ಕರ ಬ್ರಾಹ್ಮಣರು ದೇವಿಯರ ಪೂಜೆಯನ್ನು ಪ್ರಾರಂಭಿಸಿ ಇತರ ದೇವರುಗಳನ್ನು ನಿಕೃಷ್ಟಗೊಳಿಸಿರಬಹುದೇ? ಎಂದು ಕೇಳುವ ಅಂಬೇಡ್ಕರ್ ಅವರ ಪ್ರಶ್ನೆಗೆ ನಾವು ಮಾತೃದೇವತಾ ಪಂಥದ ಜನಪದ ರೂಪಗಳ ಗ್ರಾಮದೇವತೆಗಳ ಕಡೆಗೆ ತಿರುಗಬೇಕಾಗುವುದು.

ವೈದಿಕ ಮತ್ತು ಪೌರಾಣಿಕ ಹರಿವು ಮಾತ್ರವಲ್ಲದೇ ದೇವಿಯರಿಗೆ ಗಂಡುಬೀರಿತನವನ್ನು, ರುದ್ರ ಶಕ್ತಿಗಳನ್ನು ಆರೋಪಿಸಿರುವುದಕ್ಕೆ ಜನಪದದ ಮೂಲಗಳ ಕೊಡುಗೆಗಳೂ ಇವೆ. ಗ್ರಾಮದೇವತೆಗಳ ಪರಂಪರೆ, ಅವರಿಗೆ ನಡೆದುಕೊಳ್ಳುವ ಸಂಪ್ರದಾಯ ಮತ್ತು ಶಾಕ್ತ ಸಾಧನೆ ಮತ್ತು ತಂತ್ರ ಸಾಧನೆಗಳ ನೆರವುಗಳಿಂದ ಹಲವು ಉತ್ತರಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂಬುದನ್ನು ಮುಂಚಿನ ಸಂಚಿಕೆಗಳಲ್ಲಿ ತಿಳಿಯೋಣ. ●



'ಕ್ಲೀನ್‌ಚಿಟ್' ಎಂಬ ದಗಲ್ಬಾಜಿ

2002ರ ಗುಜರಾತ್ ನರಮೇಧ ಭಾರತೀಯ ಇತಿಹಾಸದ ಘಟನೆಗಳಲ್ಲಿ ಎಂದೆಂದಿಗೂ ಉಳಿಯಲಿರುವಂತಹ ಒಂದು ಮಹಾನ್ ದುರ್ಘಟನೆ. ಫೆಬ್ರವರಿ 28ರಂದು ಆರಂಭವಾದ ಆ ಗಲಭೆಗಳು ಒಂದು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿರಲಿಲ್ಲ. ರಾಜ್ಯದ ಸುಮಾರು 14 ಜಿಲ್ಲೆಗಳಲ್ಲಿ ನಡೆದ ಕೋಮುವಾದಿಗಳ ಅಟ್ಟಹಾಸಕ್ಕೆ ಸುಮಾರು 2000 ಜನ ಬಲಿಯಾದರು; ಸುಮಾರು 1,68,000 ಜನ ನಿರಾಶ್ರಿತರಾದರು. ಅಂದಿನ ಕೆಲವು ಪ್ರಮುಖ ದುರಂತಗಳ ಪೈಕಿ ಅಹಮದಾಬಾದಿನ ಗುಲ್ಬರ್ಗ್ ಸೊಸೈಟಿ ಹತ್ಯಾಕಾಂಡವೂ ಒಂದು. ಅದರಲ್ಲಿ ಮಾಜಿ ಸಂಸದ ಎಹಸಾನ್ ಜಾಫ್ರಿ ಸೇರಿದಂತೆ 69 ಮಂದಿ ಅತ್ಯಂತ ಬರ್ಬರವಾಗಿ ಕೊಲೆಗೀಡಾಗಿದ್ದರು.

ಗುಲ್ಬರ್ಗ್ ಹತ್ಯಾಕಾಂಡ ಕುರಿತು ಸುಪ್ರೀಂಕೋರ್ಟಿನಲ್ಲಿ ದಾವೆ ಹೂಡಿದ ಜಾಕಿಯಾ ಜಾಫ್ರಿ (ಎಹಸಾನ್ ಜಾಫ್ರಿಯವರ ಪತ್ನಿ) ನರೇಂದ್ರ ಮೋದಿಯನ್ನು ಮುಖ್ಯ ಆರೋಪಿಯಾಗಿ ಹೆಸರಿಸಿದ್ದರು. ಈ ಅರ್ಜಿಯನ್ನು ಪುರಸ್ಕರಿಸಿದ್ದ ಕೋರ್ಟು ವಿಶೇಷ ತನಿಖಾ ತಂಡವೊಂದನ್ನು (ಎಸ್‌ಐಟಿ) ನೇಮಿಸಿ ಮೋದಿ ವಿರುದ್ಧ ಕಾನೂನುಕ್ರಮ ಜರುಗಿಸುವಷ್ಟು ಪುರಾವೆಗಳಿವೆಯೆ ಎಂದು ತಿಳಿಯುವಂತೆ ಆದೇಶಿಸಿತ್ತು. ಮಾಜಿ ಸಿಬಿಐ ನಿರ್ದೇಶಕ ಆರ್.ಕೆ. ರಾಘವನ್ ನೇತೃತ್ವದ ಈ ಸಮಿತಿಯಲ್ಲಿದ್ದವರಲ್ಲಿ ಹಲವು ಮಂದಿ ಮೋದಿ ಕಿಂಕರರೆ ಆಗಿದ್ದರು. ಯಾವಾಗ ಎಸ್‌ಐಟಿಯ ಅಂತಿಮ ವರದಿ ಮೋದಿ ವಿರುದ್ಧ ಪ್ರಕರಣ ದಾಖಲಿಸುವಷ್ಟು ಬಲವಾದ ಸಾಕ್ಷ್ಯಾಧಾರಗಳಿಲ್ಲವೆಂದು ಹೇಳಿತೊ ಆಗ ಕೋರ್ಟು ರಾಜು ರಾಮಚಂದ್ರನ್‌ರನ್ನು ಅಮೈಕಸ್ ಕ್ಯೂರಿ ಆಗಿ ನೇಮಿಸಿತು. ಖುದ್ದು ಗುಜರಾತ್‌ಗೆ ಹೋಗಿ ಸ್ವತಂತ್ರ ತನಿಖೆ ನಡೆಸಿ ನಿಷ್ಪಕ್ಷಪಾತ ಸಲಹೆ ನೀಡುವಂತೆ ಸೂಚಿಸಿತು. ಎಸ್‌ಐಟಿ ಸಂಗ್ರಹಿಸಿದ್ದ ಅದೇ ಪುರಾವೆಗಳನ್ನು ಮರುಪರಿಶೀಲಿಸಿದ ಬಳಿಕ ತದ್ವಿರುದ್ಧ ತೀರ್ಮಾನಕ್ಕೆ ಬಂದ ರಾಜು ರಾಮಚಂದ್ರನ್ ತನ್ನ ಅಂತಿಮ ವರದಿಯಲ್ಲಿ ಮೋದಿ ವಿರುದ್ಧ ಸೆಕ್ಷನ್ 153ಎ, 153ಬಿ, 166, 505ರ ಅನುಸಾರ ಕಾನೂನುಕ್ರಮ ಕೈಗೊಳ್ಳಬಹುದೆಂದು ತಿಳಿಸಿದ್ದರು. ಅಂತೆಯೆ ಸುಪ್ರೀಂಕೋರ್ಟು ಭಾರತದ ನ್ಯಾಯಾಂಗ ಪ್ರಕ್ರಿಯೆಗನುಗುಣವಾಗಿ ಸಿಆರ್‌ಪಿಸಿ 173 (8)ರ ಅನ್ವಯ ಎಸ್‌ಐಟಿ ತನ್ನ ಅಂತಿಮ ವರದಿಯನ್ನು ಸ್ಥಳೀಯ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಿತು. ಎರಡೂ ಕಡೆಗಳ ವಾದಗಳನ್ನಾಲಿಸಿದ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಗಣಾತ್ರ, ಗುಲ್ಬರ್ಗ್ ಹತ್ಯಾಕಾಂಡಕ್ಕೆ ಸಂಬಂಧಪಟ್ಟಂತೆ ಎಸ್‌ಐಟಿ ಸಂಗ್ರಹಿಸಿರುವ ಪುರಾವೆಗಳ ಆಧಾರದಲ್ಲಿ ಮೋದಿ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಜಾಕಿಯಾ ಈ ತೀರ್ಪಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರಲ್ಲದೆ ಅದನ್ನು ಪ್ರಶ್ನಿಸಿ ಹೈಕೋರ್ಟಿಗೆ ಅರ್ಜಿ ಸಲ್ಲಿಸಿದ್ದಾರೆ. ಹೈಕೋರ್ಟು ಅವರ ಅರ್ಜಿಯನ್ನು ಏಪ್ರಿಲ್ 11ರಂದು ವಿಚಾರಣೆಗೆ ಎತ್ತಿಕೊಳ್ಳಲಿದೆ.

ನಿಜಸ್ಥಿತಿ ಹೀಗಿದ್ದರೂ ಮೋದಿ ಭಕ್ತರು ಮತ್ತು ಮಾಧ್ಯಮದ ಒಂದು ವರ್ಗ ನ್ಯಾಯಾಲಯ ಮೋದಿಗೆ



'ಕ್ಲೀನ್ ಚಿಟ್' ನೀಡಿದೆಯೆಂದು ಗಂಟಲು ಬಿರಿಯುವಷ್ಟು ದೊಡ್ಡದಾಗಿ ಕಿರಿಚುತ್ತಿದ್ದಾರೆ. ಇವರಲ್ಲಿ ನಾವೆಲ್ಲರೂ ಕೇಳಬೇಕಾಗಿರುವ ಪ್ರಶ್ನೆಗಳೇನೆಂದರೆ 'ಕ್ಲೀನ್ ಚಿಟ್' ಅಂದರೇನು? ಕಾನೂನಿನಲ್ಲಿ ಅಂತಹದೊಂದು ಶಬ್ದ ಇದೆಯೇ? ಜನಬಳಕೆಯ ಪರಿಭಾಷೆಯಲ್ಲಿ 'ಕ್ಲೀನ್‌ಚಿಟ್ ಸಿಕ್ಕಿದೆ' ಅಂದರೆ ಸಾಮಾನ್ಯವಾಗಿ ನಿರ್ದೋಷಿಯೆಂದು ಘೋಷಿಸಲಾಗಿದೆ ಯಾ ಆರೋಪಗಳಿಂದ ಮುಕ್ತಗೊಳಿಸಲಾಗಿದೆ ಎಂದರ್ಥ. ಆದರೆ ಎಸ್‌ಐಟಿ ವರದಿ ಮೋದಿಯನ್ನು ನಿರ್ದೋಷಿಯೆಂದು ಘೋಷಿಸುವುದಿಲ್ಲ; ಅದು ಹೇಳುವುದಿಷ್ಟೇ: ಅದರ ಅಭಿಪ್ರಾಯದಲ್ಲಿ, ಅದಕ್ಕೆ ದೊರೆತಿರುವ ಪುರಾವೆಗಳನ್ನು ಆಧರಿಸಿ ಮೋದಿ ವಿರುದ್ಧ ಕ್ರಿಮಿನಲ್ ಕೇಸು ಹೂಡಲಾಗುವುದಿಲ್ಲ. ಎಸ್‌ಐಟಿಯ ಈ ಅಭಿಪ್ರಾಯವನ್ನು ಸುಪ್ರೀಂಕೋರ್ಟು ಒಪ್ಪಿಲ್ಲ. ಸ್ಥಳೀಯ ನ್ಯಾಯಾಲಯ ಈ ಅಭಿಪ್ರಾಯವನ್ನು ಒಪ್ಪಿದೆ ಅಷ್ಟೆ. ಖಂಡಿತಾ ಇದರರ್ಥ ಮೋದಿ ಭಕ್ತರು ಹೇಳುವಂತೆ ಮೋದಿ ತನ್ನ ಮೇಲಿನ ಆರೋಪಗಳಿಂದ ಮುಕ್ತನಾಗಿದ್ದಾನೆ ಎಂದಲ್ಲ. ಆತನ ವಿರುದ್ಧ ಹೊಸ ತನಿಖೆ ಕೂಡ ನಡೆಸಬಹುದಾಗಿದೆ. ಇಲ್ಲಿ ನಾವು ಅಮೈಕಸ್ ಕ್ಯೂರಿ ರಾಜು ರಾಮಚಂದ್ರನ್‌ರ ವರದಿ ಏನು ಹೇಳುತ್ತದೆಂಬುದನ್ನು ಮರೆಯಬಾರದು.

ಈ ಸಂದರ್ಭದಲ್ಲಿ ಮೆಹಿಬೂಬ್ ಸಾಹಿಬ್ ವರ್ಸಸ್ ಕರ್ನಾಟಕ ಉಪಲೋಕಾಯುಕ್ತ ಪ್ರಕರಣದಲ್ಲಿ (**ILR 2002 KAR page 2535 dated 18th April 2002**) ಕರ್ನಾಟಕ ಹೈಕೋರ್ಟು ನೀಡಿರುವ ತೀರ್ಪು ತುಂಬಾ ಪ್ರಸ್ತುತವಿದೆ.

> 20) ..... ಆರೋಪಿಯನ್ನು ವಿಚಾರಣೆಗೊಳಪಡಿಸಲು ಸಾಧ್ಯವಿದೆಯೆಂದು ತನಿಖಾಧಿಕಾರಿ ಅಭಿಪ್ರಾಯಪಟ್ಟಲ್ಲಿ ಆರೋಪಪಟ್ಟಿ ಸಲ್ಲಿಸುವ ಪ್ರಕ್ರಿಯೆ ನಡೆಯುತ್ತದೆ. ತನಿಖಾಧಿಕಾರಿಯು ತದ್ವಿರುದ್ಧವಾದ ಅಭಿಪ್ರಾಯ ವ್ಯಕ್ತಪಡಿಸಿದರೆ 'ಬಿ' ವರದಿ ಸಲ್ಲಿಸಲಾಗುತ್ತದೆ. ಕ್ರಿಮಿನಲ್ ಕೋರ್ಟು 'ಬಿ' ವರದಿಯನ್ನು ಅಂಗೀಕರಿಸಿದಾಗ ವಿಷಯ ಅಲ್ಲಿಗೆ ಕೊನೆಗೊಳ್ಳುತ್ತದೆ/ ಕಾನೂನುಕ್ರಮ ಜರಗುತ್ತದೆ. ಆದುದರಿಂದ 'ಬಿ' ವರದಿ ಸಲ್ಲಿಸುವ ತನಿಖಾಧಿಕಾರಿಯು ಆರೋಪಿ ವಿರುದ್ಧ ಕ್ರಿಮಿನಲ್ ದಾವೆ ಹೂಡುವಷ್ಟು ಪುರಾವೆಗಳಿಲ್ಲ ಎಂಬ ತನ್ನ ಅಭಿಪ್ರಾಯವನ್ನಷ್ಟೆ ಕೋರ್ಟಿಗೆ ತಿಳಿಸುತ್ತಾನೆ. ಕೋರ್ಟು 'ಬಿ' ವರದಿಯನ್ನು ಅಂಗೀಕರಿಸಿ ಕಾನೂನುಕ್ರಮ ಜರುಗಿಸಲು ಆದೇಶಿಸುವ ಸಂದರ್ಭದಲ್ಲಿ ಯಾವುದೇ ಆರೋಪಗಳ ಕುರಿತು ತನಿಖೆ ನಡೆಸುವ ಕ್ರಮವಾಗಲಿ, ಆರೋಪಿ ನಿರ್ದೋಷಿಯೆಂದು ದಾಖಲಿಸುವ ಕ್ರಮವಾಗಲಿ ಇಲ್ಲ. ವಾಸ್ತವವಾಗಿ ಆರೋಪವೇ ಇಲ್ಲದಾಗ ಆರೋಪಮುಕ್ತಗೊಳಿಸುವ ಪ್ರಶ್ನೆಯೆ ಉದ್ಭವಿಸುವುದಿಲ್ಲ...


ಗುಲ್ಬರ್ಗ್ ಪ್ರಕರಣವನ್ನು ನಾವು ಈ ಹಿನ್ನೆಲೆಯಲ್ಲಿ ನೋಡಬೇಕು. ಮ್ಯಾಜಿಸ್ಟ್ರೇಟ್ ಗಣಾತ್ರ ಎಸ್‌ಐಟಿ (ಇಲ್ಲಿ ತನಿಖಾಧಿಕಾರಿ) ವರದಿಯನ್ನು ಅಂಗೀಕರಿಸಿದರೆಂದ ಮಾತ್ರಕ್ಕೆ (1) ನರೇಂದ್ರ ಮೋದಿ ನಿರಪರಾಧಿ ಎಂದಾಗುವುದಿಲ್ಲ, (2) ಆತನ ಮೇಲಿರುವ ಆರೋಪಗಳೆಲ್ಲವೂ ಬಿದ್ದುಹೋಗಿವೆ ಎಂದಾಗುವುದಿಲ್ಲ. ಮುಂದೆ ನ್ಯಾಯಾಲಯದಲ್ಲಿ ವಿದ್ಯುಕ್ತ ವಿಚಾರಣೆ ನಡೆದು, ಎಲ್ಲಾ ಪುರಾವೆಗಳನ್ನು ಪರಿಗಣಿಸಿದ ಬಳಿಕವೆ ಆರೋಪಿ ನಿರಪರಾಧಿ ಅಥವಾ ಅಪರಾಧಿ ಎಂದು ಘೋಷಿಸಲಾಗುತ್ತದೆ. ಯಾವ ಹೇಳಿಕೆಗಳ ಆಧಾರದಲ್ಲಿ ತನಿಖಾಧಿಕಾರಿ ತನ್ನ ಅಭಿಪ್ರಾಯಕ್ಕೆ ಬರುತ್ತಾನೋ ಅಂಥಾ ಹೇಳಿಕೆಗಳು ಕಾನೂನಿನ ದೃಷ್ಟಿಯಲ್ಲಿ ಪುರಾವೆ ಆಗುವುದಿಲ್ಲ. ಆದುದರಿಂದಲೆ ಸ್ಥಳೀಯ ನ್ಯಾಯಾಲಯ ಎಸ್‌ಐಟಿ ವರದಿಯನ್ನು ಒಪ್ಪಿರುವುದರ ಅರ್ಥ ಮೋದಿ ನಿರಪರಾಧಿ ಎಂದು ಅಲ್ಲವೇ ಅಲ್ಲ. ಇಲ್ಲಿ ಗಮನಿಸಬೇಕಿರುವ ಅಂಶವೆಂದರೆ ಕಾನೂನು ಪ್ರಕ್ರಿಯೆಯನ್ವಯ ಸ್ಥಳೀಯ ನ್ಯಾಯಾಲಯದ ಆದೇಶವನ್ನೀಗ ಹೈಕೋರ್ಟಿನಲ್ಲಿ ಪ್ರಶ್ನಿಸಲಾಗಿದೆ.

ಮೋದಿ ವಿರುದ್ಧ ಇನ್ನೊಂದು ಪ್ರಕರಣವೂ ಇದೆ. ಅದೇ ನರೋಡಾ ಪಾಟಿಯಾ ಪ್ರಕರಣ. ಈ ಪ್ರಕರಣದಲ್ಲಿ ಈಗಾಗಲೆ ಮಾಯಾ ಕೊಡ್ನಾನಿ, ಬಾಬು ಬಜರಂಗಿ ಮತ್ತಿತರ ಆರೋಪಿಗಳಿಗೆ ಜೀವಾವಧಿ ಶಿಕ್ಷೆಯಾಗಿದೆ ಎಂಬುದನ್ನು ನಾವೆಲ್ಲರೂ ನೆನಪಿಸಿಕೊಳ್ಳಬೇಕು. ನರೋಡಾ ಪಾಟಿಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮೋದಿ ಮತ್ತಿತರ ನಾಲ್ವರ ವಿರುದ್ಧ 5 ವರ್ಷಗಳ ಹಿಂದೆಯೆ ಎಸ್‌ಐಟಿಗೆ ಅರ್ಜಿ ಸಲ್ಲಿಸಲಾಗಿದ್ದು ಎಸ್‌ಐಟಿಯ ವರದಿ ಇನ್ನು ಬರಬೇಕಷ್ಟೆ.


ಆದುದರಿಂದಲೆ ಈ 'ಕ್ಲೀನ್‌ಚಿಟ್' ಘೋಷಣೆ ಎನ್ನುವುದು ದೊಡ್ಡದೊಂದು ದಗಲ್ಬಾಜಿಯಾಗಿದ್ದು ಅದರ ಹಿಂದೆ ಅಮಾಯಕ ಜನರ ದಿಕ್ಕು ತಪ್ಪಿಸುವ ಉದ್ದೇಶ ಅಡಗಿದೆ ಎಂಬುದನ್ನು ಈಗಲಾದರೂ ಗುರುತಿಸಬೇಕಾಗಿದೆ.

(ಆಧಾರ: **www.truthofgujarat.com**)

* * *



ಮೋದಿ ಉತ್ತರಿಸಲಾಗದ ಪ್ರಶ್ನೆಗಳು



ಮೋದಿಯ ಜನಪ್ರಿಯತೆ ವೇಗವಾಗಿ ಇಳಿಯುತ್ತಿದ್ದು ಇತ್ತೀಚಿನ ಸರ್ವೇ ಪ್ರಕಾರ ಮೋದಿಯ ಜನಪ್ರಿಯತೆ ಒಂದೇ ತಿಂಗಳಲ್ಲಿ ಒಮ್ಮೆಲೇ 3% ಇಳಿತ ಕಂಡಿದೆ. ಇದಕ್ಕೆ ಕಾರಣ ಒಂದೆಡೆ ಪ್ರಾಮಾಣಿಕ ಆಮ್ ಆದ್ಮಿ ಪಕ್ಷದ ಹೊಡೆತವಾದರೆ ಇನ್ನೊಂದೆಡೆ ಹೋದಲೆಲ್ಲಾ ಕೇವಲ "ನಾನು ನಾನು" ಎಂಬ ಪದ ಮಾತ್ರ ಮೋದಿ ಬಳಸುತ್ತಿದ್ದು "ನಾವು ಅಥವಾ ನಮ್ಮ ಪಾರ್ಟಿ" ಎಂಬ ಕಲೆಕ್ಟಿವ್ ಪದ ಅವನ ಬಾಯಿಯಿಂದ ಬರುತ್ತಲೇ ಇಲ್ಲ. ಹಾಗಾಗಿ ಬಿಜೆಪಿ ಪಾರ್ಟಿಯ ಜನಪ್ರಿಯತೆ ಕುಸಿಯುತ್ತಿದೆ.


ಸ್ವತಃ ಇಂದಿರಾ ಗಾಂಧಿ ತುರ್ತುಪರಿಸ್ಥಿತಿ ಕಾಲದಲ್ಲೂ ಹೀಗೆ 'ನಾನು ನಾನು' ಎಂಬ ಸ್ವಕೇಂದ್ರಿತ ಪದ ಬಳಸುತ್ತಿರಲಿಲ್ಲ. ಇದಕ್ಕೆ ಕಾರಣ ಮೀಡಿಯಾದವರು ಗಾಳಿ ಊದಿ ಊದಿ ಮೋದಿಯ ಇಗೋ ವಿಪರೀತ ಉಬ್ಬಿಸಿ ಬಿಟ್ಟಿರುವುದು. ಇದರಿಂದಾಗಿ ಈಗ ಅನೇಕ ಹಳೆಯ ತಲೆಮಾರಿನ ಜನರು ಈ ದುರಭಿಮಾನಿಯನ್ನು ದೂರ ಮಾಡುತ್ತಿದ್ದಾರೆ. ಜೊತೆಗೆ ಹೋದಕಡೆಯಲ್ಲೆಲ್ಲಾ ಅವನು ಕೇವಲ ತನ್ನ ಗುಜರಾತನ್ನು ಹೊಗಳಿ ಸ್ಥಳೀಯ ರಾಜ್ಯದವರನ್ನು ಹೀಗಳೆಯುವುದರಿಂದ ಸ್ವಾಭಿಮಾನವುಳ್ಳ ಬೇರೆ ರಾಜ್ಯದವರು ಈ ಬಡಾಯಿ ಬಹದ್ದೂರನನ್ನು ಗೌರವಿಸುತ್ತಿಲ್ಲ. ಗುಜರಾತಿನ ಔದ್ಯಮಿಕ ಪ್ರಗತಿಯ ಬಗ್ಗೆ ಬಡಾಯಿ ಕೊಚ್ಚುವವನು ಅಲ್ಲಿ 60 ಸಾವಿರ ಸಣ್ಣ ಉದ್ಯಮಗಳು ಬಾಗಿಲು ಮುಚ್ಚಿರುವುದೇತಕ್ಕೆ ಎಂದು ಹೇಳುತ್ತಿಲ್ಲ. ಈ ಮುಚ್ಚಿದ ಉದ್ಯಮಗಳಲ್ಲಿ ಕೆಲಸ ಕಳೆದುಕೊಂಡವರಲ್ಲಿ 40ಕ್ಕೂ ಹೆಚ್ಚು ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದು ಯಾಕೆ? ಅಲ್ಲಿಯ ಕೃಷಿ ಕ್ಷೇತ್ರದ ಪ್ರಗತಿ ಕೇವಲ 2% ಗೆ ಇಳಿದಿದ್ದು ಹೇಗೆ ಮತ್ತು ಕೇವಲ ಹಿಂದಿನ ಎರಡೇ ವರ್ಷದಲ್ಲಿ ಗೋದ್ರಾ ಗಲಾಟೆಯಲ್ಲಿ ಸತ್ತವರಿಗಿಂತ ಹೆಚ್ಚು ಸಂಖ್ಯೆಯಲ್ಲಿ ಬಡ ಗುಜರಾತಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು ಯಾಕೆ ಎಂದು ಮೋದಿ ಹೇಳುತ್ತಿಲ್ಲ. ಕೃಷಿಯಲ್ಲಿ ನಿಜವಾಗಿ ಪ್ರಗತಿಯಾಗಿದ್ದರೆ ಸಾಲಬಾಧೆಯಿಂದ ರೈತರು ಆತ್ಮಹತ್ಯೆ ಯಾಕೆ ಮಾಡಿಕೊಂಡಿದ್ದು? ಇಂತಹ ಪ್ರಶ್ನೆಗಳಿಗೆ ಮೋದಿಯಲ್ಲಿ ಉತ್ತರಗಳಿಲ್ಲ.

ಟಾರೆಂಟ್ ಎಂಬ ಬಹುರಾಷ್ಟ್ರೀಯ ವಿದ್ಯುತ್ ಉತ್ಪಾದನಾ ಕಂಪನಿಯೇ ಗ್ಯಾಸ್ ಸಿಗದ್ದರಿಂದ ತನ್ನ ವಿದ್ಯುತ್ ಘಟಕ ಮುಚ್ಚಿ ಯಂತ್ರಗಳನ್ನೆಲ್ಲ ಮಾರಿದೆ. ಅಂಬಾನಿಯ ಕಿತಾಪತಿಯಿಂದ ಗ್ಯಾಸ್ ಸಿಗದೇ ಗುಜರಾತಿನೊಳಗೆಯೇ ಮೂರು ದೊಡ್ಡ ಗ್ಯಾಸ್ ಆಧಾರಿತ ವಿದ್ಯುತ್ ಘಟಕಗಳು ಬಂದಾಗಿವೆ. ಆದರೂ ಮೋದಿ ಸರಕಾರ ಅಂಬಾನಿಗೇ ಬೆಂಬಲಿಸುತ್ತಿದೆ. ಗುಜರಾತಿನಲ್ಲಿ ಈಗ ವಿದ್ಯುತ್ ಶುಲ್ಕ ಇತರ ರಾಜ್ಯಗಳಿಗಿಂತ ದುಬಾರಿಯಾಗಿದೆ. ಇದು ಗುಜರಾತಿನ ಪ್ರಗತಿಯ ಒಂದು ಕರಾಳ ಮುಖ.

ವಿಕ್ಷಿಪ್ತ ಸುಬ್ರಹ್ಮಣ್ಯಸ್ವಾಮಿಯೂ ಬೆಂಗಳೂರಿಗೆ ಬಂದು ಕರ್ನಾಟಕದ ಅಭಿವೃದ್ಧಿಯನ್ನು ಗುಜರಾತಿಗೆ ಹೋಲಿಸಿ ಕರ್ನಾಟಕವನ್ನು ಹೀಯಾಳಿಸಿ ಕನ್ನಡಿಗರಿಗೆ ಘೋರ ಅವಮಾನ ಮಾಡಿದ್ದಾನೆ. ಮೋದಿ ಅಷ್ಟು ಡೈನಾಮಿಕ್ ಆಗಿದ್ದರೆ ಕರ್ನಾಟಕದಂತೆ ಗುಜರಾತಿನಲ್ಲಿ ಅವನಿಗೆ ಐಟಿ-ಐಟಿಇಎಸ್ ಮತ್ತು ಬಿಟಿ ಉದ್ಯಮಗಳನ್ನು ಅಭಿವೃದ್ಧಿ ಪಡಿಸಲು ಯಾಕೆ ಆಗುತ್ತಿಲ್ಲ? ಅಲ್ಲಿಯ ಕೃಷಿ ಕ್ಷೇತ್ರ ಯಾಕೆ ಕರ್ನಾಟಕಕ್ಕಿಂತ ಬಹಳ ಹಿಂದಿದೆ? ಅಲ್ಲಿಯ ವಿದ್ಯುತ್ ಶುಲ್ಕ ಯಾಕೆ ಕರ್ನಾಟಕಕ್ಕಿಂತ ದುಬಾರಿಯಾಗಿದೆ? ಗುಜರಾತಿನ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರ ಯಾಕೆ ಕರ್ನಾಟಕಕ್ಕಿಂತ ಹಿಂದಿದೆ?

ಮೋದಿಗಿಂತ ನಾಲ್ಕು ದಶಕಗಳ ಮೊದಲೇ ಗುಜರಾತಿನ ಔದ್ಯಮಿಕ ಪ್ರಗತಿಗೆ ಹಿಂದಿನ ಮುಖ್ಯಮಂತ್ರಿಗಳು ಬೀಜ ನೆಟ್ಟಿದ್ದರು. ಅದರ ಫಲ ಮೋದಿಯ ಸಮಯದಲ್ಲಿ ಬಂದಿತು ಅಷ್ಟೇ. ಅಜ್ಜ ನೆಟ್ಟ ಮರವು ಮೊಮ್ಮಗನ ಕಾಲದಲ್ಲಿ ಫಲ ಕೊಟ್ಟರೆ ಅದರ ಕ್ರೆಡಿಟ್ ಅಜ್ಜನಿಗೆ ಹೋಗಬೇಕೇ ವಿನಃ ಹಣ್ಣು ಕೀಳುವ ಮೊಮ್ಮಗನಿಗೆ ಅಲ್ಲ. ಗುಜರಾತ್ ರಾಜ್ಯವು ಭಾರತದ ವಾಣಿಜ್ಯ ರಾಜಧಾನಿ ಮುಂಬೈಗೆ ತುಂಬಾ ಹತ್ತಿರದಲ್ಲಿ ಇರುವುದರಿಂದ ಮುಂಬಯಿಯ ಹಳೆಯ ಗುಜರಾತಿ ಉದ್ಯಮಿಗಳು 1961-62 ರಲ್ಲಿ ಹೊಸದಾಗಿ ಉದಯವಾದ ತಮ್ಮದೇ ಭಾಷೆಯ ಗುಜರಾತ್ ರಾಜ್ಯಕ್ಕೆ ವಲಸೆ ಬರಲಾರಂಭಿಸಿದರು. ಇದಕ್ಕೆ ಮೂಲ ಕಾರಣ ಮುಂಬೈ ಕಾಂಗ್ರೆಸ್ಸಿನ ರಜನಿ ಪಟೇಲ್ ಮತ್ತು ಆಗಿನ ಗುಜರಾತ್ ಮುಖ್ಯಮಂತ್ರಿಗಳು. ಬ್ರಿಟಿಷರ ಕಾಲದಲ್ಲಿಯೇ ದೊಡ್ಡ ಸಂಖ್ಯೆಯಲ್ಲಿ ವಿದೇಶಕ್ಕೆ ಹೋಗಿ ನೆಲೆಸಿದ್ದ ಗುಜರಾತಿ ವ್ಯಾಪಾರಿಗಳೂ 40 ವರ್ಷಗಳ ಹಿಂದೆ ಹೊಸ ಅನಿವಾಸಿ ಭಾರತೀಯ ಇನ್‌ವೆಸ್ಟ್‌ಮೆಂಟ್ ನಿಯಮಗಳು ಜಾರಿಗೆ ಬಂದ ಮೇಲೆ ಗುಜರಾತಿನಲ್ಲಿ ಬಂಡವಾಳ ಹೂಡಿಕೆ ಆರಂಭಿಸಿದರು. ಈಗ ಅದರ ಎಲ್ಲಾ ಕ್ರೆಡಿಟ್ ಮೋದಿಗೆ ಕೊಡುತ್ತಿರುವುದು ಅನ್ಯಾಯ. ಮೋದಿ ಮುಖ್ಯಮಂತ್ರಿ ಆಗುವುದಕ್ಕೆ ಮೊದಲೇ ಗುಜರಾತ್ ಔದ್ಯಮಿಕವಾಗಿ ಪ್ರಗತಿ ಹೊಂದಿತ್ತು. ಆದರೆ ಕೃಷಿ ಕ್ಷೇತ್ರದಲ್ಲಿ ಗುಜರಾತ್ ಮೊದಲಿನಿಂದಲೂ ಹಿಂದೆಯೇ ಇತ್ತು, ಅದು ಈಗಲೂ ಹಿಂದೆಯೇ ಇದೆ. ವ್ಯಾಪಾರಿ ಬುದ್ಧಿಯ ಗುಜರಾತಿಗಳಿಗೆ ಕೃಷಿ ಮೊದಲಿನಿಂದಲೂ ಹೊಂದಿಕೆಯಾಗುತ್ತಿಲ್ಲ. ಆದುದರಿಂದ ಗುಜರಾತಿನಲ್ಲಿ ಮೇಲ್ಜಾತಿ ವ್ಯಾಪಾರಿಗಳು ಅಭಿವೃದ್ಧಿ ಹೊಂದಿ ಕೆಳಜಾತಿಯ ಕೃಷಿಕರು ಒಣಗಿ ಹೋಗಿದ್ದಾರೆ. ಹೆಚ್ಚಿನ ಎಲ್ಲಾ ಕೃಷಿ ಉತ್ಪನ್ನಗಳೂ ಗುಜರಾತಿಗೆ ನೆರೆಯ ರಾಜ್ಯಗಳಿಂದ ಹೋಗದಿದ್ದರೆ ಗುಜರಾತಿನ ಜನ ಉಪವಾಸದಿಂದ ಸಾಯಬೇಕಾಗಬಹುದು. ಗುಜರಾತ್ ಸ್ವರ್ಗವಾಗಿದ್ದು ಕರ್ನಾಟಕ ನರಕವಾಗಿದ್ದರೆ ಲಕ್ಷಾಂತರ ಗುಜರಾತಿಗಳು ಕರ್ನಾಟಕಕ್ಕೆ ಬಂದು ಯಾಕೆ ನೆಲೆಸಿರುವುದು? ಅವರೆಲ್ಲ ಗುಜರಾತ್ ಎಂಬ ಸ್ವರ್ಗದಲ್ಲಿಯೇ ವಿಹರಿಸಬಹುದಿತ್ತಲ್ಲವೇ?

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು




ದಲಿತಪರ ಕಾಳಜಿಯನ್ನು ದಲಿತೇತರರಿಂದ ಬೇರ್ಪಡಿಸಿ ನೋಡಲಾಗದು

ಏಪ್ರಿಲ್ 2, 2014ರ ಸಂಪಾದಕೀಯದಲ್ಲಿ ಅಂಬೇಡ್ಕರ್ ಪೇಟೆಂಟೀಕರಣದ ಬಗ್ಗೆ ಗೌರಿ ಲಂಕೇಶ್ ಅವರು ಎತ್ತಿರುವ ಸಂಗತಿ ನಿಜಕ್ಕೂ ಯೋಚಿಸುವಂತಾದ್ದೇ. ಡಾ.ಬಿ.ಆರ್.ಅಂಬೇಡ್ಕರರ 'ಜಾತಿವಿನಾಶ' ಲೇಖನಕ್ಕೆ

ವಿಭಿನ್ನತೆಯೇ ಮುಖ್ಯ

ಸಂದರ್ಶನ

'ಜೀವ', 'ನಂಜನಗೂಡು ನಂಜುಂಡ', 'ಜಿದ್ದಿ', 'ಪೇಪರ್ ದೋಣಿ', 'ಯುಗ', 'ರಣ', 'ಭೈರವಿ', 'ಟಿಪಿಕಲ್ ಕೈಲಾಸ್' ತರಹದ ಸಿನಿಮಾಗಳೂ ಸೇರಿದಂತೆ 'ರಂಗೋಲಿ', 'ದೊಡ್ಡಣ್ಣ ಚಿಕ್ಕಣ್ಣ', 'ಅರುಂಧತಿ', 'ಕುಲಗೌರವ', ...ಧೂರ', 'ಸುಕನ್ಯ', 'ಚಕ್ರತೀರ್ಥ', ...ಗಾರ'ದಂತಹ ಧಾರಾವಾಹಿಗಳಲ್ಲಿ ನಟಿಸಿರುವ ವರ್ಧನ್ ತೀರ್ಥಹಳ್ಳಿ ಇಲ್ಲಿ ಮಾತಾಡಿದ್ದಾರೆ.



* ನಿಮ್ಮ ಊರು, ಕುಟುಂಬ, ಓದಿನ ಕುರಿತು ...ೀರಾ?

...ವಮೊಗ್ಗ ಸಮೀಪದ ತೀರ್ಥಹಳ್ಳಿ ನನ್ನೂರು. ಅಪ್ಪ ...ಪ್ಪ ಕೃಷಿಕರು. ಅಡಿಕೆ, ಭತ್ತ ಬೆಳೆಯುತ್ತಾರೆ. ಅಮ್ಮ ...ಮ್ಮ ಗೃಹಿಣಿ. ಎಸ್ಸೆಸ್ಸೆಲ್ಸಿವರೆಗೂ ಓದಿದ್ದೇನೆ.

* ಅಭಿನಯದ ಕಡೆ ಯಾವಾಗ ಆಸಕ್ತಿ ಬಂತು?

...ಾಲಾದಿನಗಳಲ್ಲಿ ನಾಟಕ, ಡ್ಯಾನ್ಸ್ ಮಾಡ್ತಿದ್ದೆ. ಯಾವುದೇ ...ಮು ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದರೆ ಉತ್ಸಾಹದಿಂದ ...ವಹಿಸುತ್ತಿದ್ದೆ. ಮೊದಮೊದಲಿಗೆ ವೇದಿಕೆ ಮೇಲೆ ಡ್ಯಾನ್ಸ್ ...ುವಾಗ, ನಾಟಕ ಮಾಡುವಾಗ ಭಯ ಆಗ್ತಿತ್ತು, ...ಗೆ ಸಂಕೋಚವೂ ಇರುತ್ತಿತ್ತು. ಪ್ರಾಕ್ಟೀಸ್ ಚೆನ್ನಾಗಿ ...ರ್ತಿದ್ದೆ. ಆದರೆ, ವೇದಿಕೆ ಹತ್ತುತ್ತಿದ್ದ ಹಾಗೆಯೇ ... ಠುಸ್ ಆಗಿಬಿಡುತಿತ್ತು. ಈ ಹಾಳಾದ್ ಡ್ಯಾನ್ಸು ... ಮುಗಿದರೆ ಸಾಕು ಅನ್ನಿಸುವಷ್ಟರಮಟ್ಟಿಗೆ ಆಸಕ್ತಿ ...ಬಿಕೊಳ್ಳುತ್ತಿದ್ದೆ. ಕ್ರಮೇಣ ಸಾಕಷ್ಟು ಸ್ಪರ್ಧೆಗಳಲ್ಲಿ ...ವಹಿಸ್ತಾ, ಆ ಭಯ, ಅಂಜಿಕೆ, ನಾಚಿಕೆ ಎಲ್ಲವೂ ...ಯಾಗಿ ಆಮೇಲಷ್ಟೇ ನ್ಯಾಚುರಲ್ ಆಗಿ ಪರ್ಫಾರ್ಮ್ ...ಸಲು ಸಾಧ್ಯವಾಗುತ್ತಾ ಹೋಯ್ತು.

* ಸಿನಿಮಾ ಕಡೆ ಆಸಕ್ತಿ ಹುಟ್ಟಿಕೊಂಡಿದ್ದು ಹೇಗೆ?

...ಚಿಕ್ಕಂದಿನಲ್ಲಿ ಸಾಕಷ್ಟು ಸಿನಿಮಾಗಳನ್ನು ನೋಡ್ತಿದ್ದೆ. ...ಾ ಹುಚ್ಚು ಎಷ್ಟಿತ್ತೆಂದರೆ, ಹತ್ತನೇ ಕ್ಲಾಸ್‌ನಲ್ಲಿದ್ದಾಗ ... ಭಾಗವಹಿಸಿದ್ದ ರಿಲೇ ಮೂರು ರೌಂಡು ಮುಗಿದಿತ್ತು, ...ಯ ಸುತ್ತಿಗೆ ಹೋಗುವ ಬದಲು ತೀರ್ಥಹಳ್ಳಿಯ ...ಯಕ ಥಿಯೇಟರಿನಲ್ಲಿ ಆಗಷ್ಟೇ ಬಿಡುಗಡೆಯಾಗಿದ್ದ 'ಎ.ಕೆ. 47' ಸಿನಿಮಾ ನೋಡಲು ಹೋಗಿದ್ದೆ. ಕೊನೆಯ ಸುತ್ತಿನಲ್ಲಿ ನಾನು ಭಾಗವಹಿಸದಿದ್ದ ಕಾರಣ ಮೊದಲ ಮೂರು ಸುತ್ತು ವ್ಯರ್ಥವಾಗಿದ್ದವು. ಹಾಗಾಗಿ, ಮೇಷ್ಟ್ರು ಹೊಡೀತಾರೆ ಅನ್ನುವ ಭಯದಿಂದ ಒಂದು ವಾರ ಶಾಲೆಯ ಕಡೆಗೆ ತಲೆ ಹಾಕಿರಲಿಲ್ಲ. ಶಾಲೆಯಲ್ಲಿ ಬಿಟ್ಟಿದ್ದ ಸೈಕಲ್ ಒಂದು ವಾರ ಅಲ್ಲೇ ಇತ್ತು. ಆ ದಿನಗಳಲ್ಲಿ ನಾನು ನೋಡಿದ ಸಿನಿಮಾಗಳೆಂದರೆ 'ಚೆಲುವ', 'ಕುಬೇರ', 'ಕೌರವ', 'ಯಾರೇ ನೀ ಅಭಿಮಾನಿ' ಇತ್ಯಾದಿ. ನಾನು ಮೊದಲಿನಿಂದಲೂ ರವಿಚಂದ್ರನ್, ಸೌಂದರ್ಯ ಹಾಗೂ ವಜ್ರಮುನಿ ಅವರ ಫ್ಯಾನ್. ನಾನೂ ಕೂಡ ನಟ ಆಗಬೇಕು ಅಂತ ಆ ದಿನಗಳಲ್ಲೇ ಅನ್ನಿಸಿದ್ದು. ಅದೇ ರೀತಿ, ಬೆಳಗ್ಗೆ ಎಕ್ಸಾಮ್ ಇಟ್ಟುಕೊಂಡು ರಾತ್ರಿ ಪೂರ್ತಿ ಯಕ್ಷಗಾನ ನೋಡಿದ್ದೂ ಉಂಟು. ಹಾಗೇನೆ, ಆವತ್ತಿನ ದಿನಕ್ಕೆ ನಮ್ಮ ಮನೆಯಲ್ಲಿ ಟಿವಿ ಇರಲಿಲ್ಲ. ಬೇರೆಯವರ ಮನೆಗೆ ಹೋಗಿ ಟಿವಿ ನೋಡ್ತಿದ್ದೆ. ತಮಾಷೆಯೆಂದರೆ, ಯಾವುದೇ ಸಿನಿಮಾ ಟಿವಿಯಲ್ಲಿ ಪ್ರಸಾರವಾದರೂ ಇಡೀ ಸಿನಿಮಾ ನೋಡುತ್ತಿದ್ದೆ. ಆ ಸಿನಿಮಾ ಚೆನ್ನಾಗಿರಲಿ, ಇಲ್ಲದಿರಲಿ, ಪೂರ್ತಿ ನೋಡುವವರೆಗೆ ಮೇಲೇಳುತ್ತಿರಲಿಲ್ಲ. ಎಷ್ಟೋ ಸಲ ಆ ಟಿವಿ ಮನೆಯವರು ನನ್ನ ಈ ಚಾಳಿಯ ಬಗ್ಗೆ ಅಪ್ಪನ ಹತ್ತಿರ ದೂರು ಹೇಳಿದ್ದೂ ಉಂಟು. ಅದನ್ನೆಲ್ಲ ನೆನೆದರೆ ಈಗ ನಗು ಬರುತ್ತದೆ.

* ಸಿನಿಮಾರಂಗಕ್ಕೆ ಹೇಗೆ ಬಂದ್ರಿ?

ಸಿನಿಮಾರಂಗಕ್ಕೆ ಸೇರಬೇಕೆಂದು ಮೊದಲಿನಿಂದ ಆಸೆ ಇದ್ದರೂ ಎಸ್ಸೆಸ್ಸೆಲ್ಸಿ ಫೇಲ್ ಆದನಂತರ ಆ ಆಸೆ ಜಾಸ್ತಿಯಾಯಿತು. ಆಗ, ಹಿಂದೆಮುಂದೆ ಯೋಚಿಸದೆ ಸೀದಾ ಬೆಂಗಳೂರಿಗೆ ಬಂದೆ. ಬಂದವನೇ ಒಂದು ಹೋಟೆಲಿನಲ್ಲಿ ಕೆಲಸಕ್ಕೆ ಸೇರಿಕೊಂಡೆ. ಅಲ್ಲಿ ಕ್ಲೀನರ್, ಸಪ್ಲಯರ್, ಕುಕ್- ಹೀಗೆ ಹಂತಹಂತವಾಗಿ ಎಲ್ಲ ಥರದ ಕೆಲಸಗಳನ್ನು ಮಾಡಿದೆ. ಆ ಹೋಟೆಲಿನಲ್ಲಿ ಕೆಲಸ ಮಾಡಿಕೊಂಡೇ ಸಿನಿಮಾರಂಗದಲ್ಲಿ ಅವಕಾಶಗಳಿಗಾಗಿ ಹುಡುಕಾಡಿದೆ. ಒಂದಿಷ್ಟು ದುಡ್ಡು ಹೊಂದಿಸಿಕೊಂಡು ಕೆಲವೊಂದು ಫೋಟೋ ತೆಗೆಸಿ, ಯಾರು ಸಿನಿಮಾದವರ ಹಾಗೆ ಕಾಣಿಸುತ್ತಾರೋ ಅವರಿಗೆಲ್ಲಾ ಕೊಡುತ್ತಿದ್ದೆ. ಗಾಂಧಿನಗರದ ಕಾನಿಷ್ಕ ಹೋಟೆಲ್ ಮುಂದೆ ನಿಲ್ಲುತ್ತಿದ್ದೆ. ಯಾರಾದರು ನಿರ್ದೇಶಕರು ಬಂದರೆ ಚಾನ್ಸ್ ಕೊಡಿ ಅಂತ ಕೇಳ್ತಿದ್ದೆ. ಸಿನಿಮಾ ಆಫೀಸ್‌ಗಳಿಗೆ ಹೋಗಿ ಫೋಟೋಸ್ ಕೊಟ್ಟು ಬರ್ತಿದ್ದೆ. ಫೋಟೋಸ್ ಕೊಡುವ ಮೊದಲು ಫೋಟೋಸ್ ಹಿಂದೆ ನನ್ನ ನಂಬರ್ ಇದೆಯಾ, ಇಲ್ಲವಾ ಅಂತ ಪರೀಕ್ಷಿಸುತ್ತಿದ್ದೆ. ಡೈರೆಕ್ಟರ್‌ಗಳ ಮನೆಗಳಿಗೆ ಬೆಳಬೆಳಗ್ಗೇನೆ ಹೋಗಿ ಫೋಟೋಸ್ ಕೊಟ್ಟು ಆಕ್ಟಿಂಗ್ ಚಾನ್ಸ್ ಕೇಳ್ತಿದ್ದೆ. ಬೆಳಗ್ಗೆ ಹೋಗದೆ ಹೋದರೆ ಅವರೆಲ್ಲ ಕೈಗೆ ಸಿಗುತ್ತಿರಲಿಲ್ಲ. ಅದಕ್ಕೆ ಅವರು ಮನೆ ಬಿಡುವ ಮೊದಲೇ ಅವರ ಬಾಗಿಲಲ್ಲಿ ನಿಲ್ಲುತ್ತಿದ್ದೆ. ಕೆಲವರು ಅವಕಾಶ ಕೊಡುತ್ತೇನೆ ಅಂತ ಹೇಳಿ ಕಡೆಗೆ ಕೈ ಎತ್ತಿಬಿಡುತ್ತಿದ್ದರು. ನಾನು ನಿರಾಶನಾಗಿ ಮತ್ತೆ ಅವಕಾಶಗಳ ಹುಡುಕಾಟದಲ್ಲಿ ತೊಡಗುತ್ತಿದ್ದೆ. ಸಿನಿಮಾರಂಗದಲ್ಲಿ ಇದೆಲ್ಲ ಮೊದಮೊದಲಿಗೆ ಮಾಮೂಲಿ ತಾನೇ?

* ನೀವು ಮೊದಲಬಾರಿಗೆ ಬಣ್ಣ ಹಚ್ಚಿದುದರ ಬಗ್ಗೆ ಹೇಳ್ತೀರಾ?

ಮೊದಲಿಗೆ ಸಿನಿಮಾಗಳಲ್ಲಿ ನಟಿಸಲು ಅವಕಾಶ ಬರಲಿಲ್ಲ. ಆಗ ಧಾರಾವಾಹಿಗಳಲ್ಲಿ ನಟಿಸುವ ಆಸೆ ಹುಟ್ಟಿತು. ಆ ಪ್ರಯತ್ನದಲ್ಲಿ ನಾನು ಮೊದಲಿಗೆ ಬಣ್ಣ ಹಚ್ಚಿದ್ದು 'ರಂಗೋಲಿ' ಧಾರಾವಾಹಿಯ ಒಂದು ಪಾತ್ರಕ್ಕಾಗಿ. ಅದು ಯಾರೋ ಮಾಡಬೇಕಿದ್ದ ಪಾತ್ರವಾಗಿತ್ತು. ಆ ರೋಲ್ ಅಕಸ್ಮಾತ್ ನನಗೆ ಸಿಕ್ಕಿತು. ಮೊದಲಿಗೆ ಏನೂ ಗೊತ್ತಾಗ್ತಿರಲಿಲ್ಲ. ಡೈರೆಕ್ಟರ್ ಏನು ಹೇಳಿಕೊಡುತ್ತಿದ್ದರೋ ಹಾಗೆಯೇ ಮಾಡಲು ಪ್ರಯತ್ನಿಸುತ್ತಿದ್ದೆ. ಮತ್ತೆ ಮತ್ತೆ ತಪ್ಪುಗಳನ್ನು ಮಾಡ್ತಿದ್ದೆ, ಮತ್ತೆ ಮತ್ತೆ ತಿದ್ದಿಕೊಳ್ತಿದ್ದೆ. ಪ್ರತಿಕ್ಷಣ ಕಲಿಯಲು ಆಸಕ್ತಿ ಹೊಂದಿದ್ದೆ. 'ರಂಗೋಲಿ'ಯ ನಂತರ 'ದೊಡ್ಡಣ್ಣ ಚಿಕ್ಕಣ್ಣ', 'ಅರುಂಧತಿ', 'ಕುಲಗೌರವ', 'ಸಿಂಧೂರ', 'ಸುಕನ್ಯ', 'ಚಕ್ರತೀರ್ಥ', 'ಬಂಗಾರ' ಸೇರಿದಂತೆ ಒಂದಿಷ್ಟು ಧಾರಾವಾಹಿಗಳಲ್ಲಿ ಅಭಿನಯಿಸಿದೆ. ಧಾರಾವಾಹಿಗಳಲ್ಲಿ ನಟಿಸುತ್ತಲೇ ಸಿನಿಮಾಗಳಲ್ಲಿ ನಟಿಸುವ ಅವಕಾಶಗಳನ್ನು ಎದುರುನೋಡುತ್ತಿದ್ದೆ.

* ನೀವು ನಟಿಸಿದ ಮೊದಲ ಸಿನಿಮಾ ಯಾವುದು? ಹಾಗೇನೆ, ಸಿನಿಮಾಗಳಲ್ಲಿ ನಟಿಸುವಾಗಿನ ಅನುಭವಕ್ಕೂ, ಧಾರಾವಾಹಿಗಳಲ್ಲಿ ನಟಿಸುವಾಗಿನ ಅನುಭವಕ್ಕೂ ವ್ಯತ್ಯಾಸಗಳೇನು?

'ಮುಸ್ಸಂಜೆ ಮಾತು' ನಾನು ನಟಿಸಿದ ಮೊದಲ ಸಿನಿಮಾ. ಅದೊಂದು ಪುಟ್ಟ ಪಾತ್ರ. ಆ ಚಿತ್ರದ ಮೂಲಕ ದೊಡ್ಡ ದೊಡ್ಡ ನಟರ ಜೊತೆ ನಟಿಸುವ ಅವಕಾಶ ಸಿಕ್ಕಿದ್ದು ನನಗೆ ಹೆಮ್ಮೆ. ಆನಂತರ 'ಜೀವ', 'ನಂಜನಗೂಡು ನಂಜುಂಡ', 'ಜಿದ್ದಿ', 'ಪೇಪರ್ ದೋಣಿ', 'ಯುಗ', 'ರಣ', 'ಭೈರವಿ', 'ಟಿಪಿಕಲ್ ಕೈಲಾಸ್' ಸೇರಿದಂತೆ ಒಂದಿಷ್ಟು ಚಿತ್ರಗಳಲ್ಲಿ ನಟಿಸಿದೆ. ಸಿನಿಮಾಗಳಲ್ಲಿ ನಟಿಸುವಾಗಿನ ಅನುಭವಕ್ಕೂ, ಧಾರಾವಾಹಿಗಳಲ್ಲಿ ನಟಿಸುವಾಗಿನ ಅನುಭವಕ್ಕೂ ಸ್ವಲ್ಪಮಟ್ಟಿಗೆ ವ್ಯತ್ಯಾಸ ಇದೆ ಅಂತ ಭಾವಿಸುತ್ತೇನೆ. ಧಾರಾವಾಹಿಗಳಲ್ಲಿ ನಟಿಸುವಾಗ ಮನಸು ಸ್ವಲ್ಪ ಮಂದಗತಿಯಲ್ಲಿರುವಂತೆಯೂ, ಸಿನಿಮಾಗಳಲ್ಲಿ ನಟಿಸುವಾಗ ತುಸು ಚುರುಕಾಗಿಯೂ ಇರುವಂಥ ಅನುಭವ ನನಗಾಗಿದೆ. ಈ ಅಭಿಪ್ರಾಯ ಸುಳ್ಳಿದ್ದರೂ ಇರಬಹುದು ಗೊತ್ತಿಲ್ಲ. ಬಹುಷಃ ಸಿನಿಮಾಗಳಲ್ಲಿ ನಟಿಸಬೇಕೆಂದು ಪ್ರಯತ್ನಿಸಿ, ಕಡೆಗೆ ಧಾರಾವಾಹಿಗಳಲ್ಲಿ ನಟಿಸಿದ್ದರಿಂದ ನನಗೆ ಹೀಗನ್ನಿಸುತ್ತಿರಬಹುದೇನೋ ಗೊತ್ತಿಲ್ಲ. ಹಾಗೆ ಹೇಳುವುದಾದರೆ, ಸಿನಿಮಾಗಿಂತಲೂ ಧಾರಾವಾಹಿಗಳಲ್ಲಿ ನಟಿಸುವುದೇ ಚಾಲೆಂಜ್!

* ನಿಮಗೆ ಯಾವ ಥರದ ಪಾತ್ರದಲ್ಲಿ ನಟಿಸುವ ಬಯಕೆ?

ರೆಗ್ಯುಲರ್ ಅನ್ನಿಸದ ಪಾತ್ರಗಳಲ್ಲಿ ನಟಿಸುವ ಆಸೆ ನನಗೆ. ಉದಾಹರಣೆಗೆ ಸೈಕೋ, ಕುರುಡ, ವಿಲನ್ ಶೇಡ್ ಇರುವಂಥ ಪಾತ್ರಗಳಲ್ಲಿ ನಟಿಸುವ ಆಸೆ. ಒಟ್ಟಾರೆಯಾಗಿ ಹೇಳುವುದಾದರೆ ಅಭಿನಯಕ್ಕೆ ಒತ್ತು ನೀಡುವಂಥ ಯಾವ ಬಗೆಯ ಪಾತ್ರವಾಗಿದ್ದರೂ ನನಗೆ ಇಷ್ಟವಾಗುತ್ತದೆ. ಪಾತ್ರದಿಂದ ಪಾತ್ರಕ್ಕೆ ವಿಭಿನ್ನತೆಯಿಂದ ಕೂಡಿದ್ದಾಗ ಮಾತ್ರ ಒಬ್ಬ ಕಲಾವಿದ ಹೆಚ್ಚು ಕಾಲ ಉಳಿಯಲು ಸಾಧ್ಯ ಹಾಗೂ ತನ್ನೊಳಗೆ ಇರಬಹುದಾದ ನಟನಾಸಾಮರ್ಥ್ಯವನ್ನು ಹೊರಹಾಕಲು ಸಾಧ್ಯ ಎಂದು ನಂಬಿದ್ದೇನೆ. ಆ ನಿಟ್ಟಿನಲ್ಲಿ ಒಳ್ಳೆಯ ಅವಕಾಶಗಳ ನಿರೀಕ್ಷೆಯಲ್ಲಿದ್ದೇನೆ.



ಸಂದರ್ಶಕ: ಹೃದಯಶಿವ

...ಧಿಸಿದಂತೆ ಎಸ್.ಆನಂದ್ ಹಾಗು ಅರುಂಧತಿ ರಾಯ್ ... ವಿರುದ್ಧ ಕೆಲ ದಲಿತರು ತಿರುಗಿ ಬಿದ್ದಿರುವುದು ...ಜಸವಲ್ಲ. ಅದನ್ನು ಓದಿರದ ಕಾರಣ ಲೇಖಕರ ...ಪ್ರಾಯ ಒಪ್ಪತಕ್ಕದ್ದೇ ಇಲ್ಲವೇ ಎನ್ನುವುದನ್ನು ಇಲ್ಲಿ ...ವುದು ಕಷ್ಟವಾದರೂ ಕೇವಲ ಅವರು ಬ್ರಾಹ್ಮಣರೆನ್ನುವ ...ಕ್ಕೆ ವಿರೋಧ ವ್ಯಕ್ತಪಡಿಸುವುದು ಮಾತ್ರ ಎಷ್ಟಕ್ಕೂ ...ನಿಸದು.

...ಕೌದು, ತಮ್ಮ ಕಾಳಜಿಯನ್ನು ಜಾತಿ-ಲಿಂಗವೆಂದು ...ತಗೊಳಿಸದೆ ಲೋಕದ ಹಿತಕ್ಕಾಗಿ ಚಿಂತಿಸಿದ ಬಸವಣ್ಣ ...ಯಣಗುರು, ಅಂಬೇಡ್ಕರರಂತವರನ್ನು ಇದೀಗ ಕೆಲ ...ದಾಯಗಳಿಗಷ್ಟೇ ಸೀಮಿತಗೊಳಿಸಲಾಗುತ್ತಿದೆ. ಈ ...ದಾರಿಕೆ ಕೆಲ ಸಂದರ್ಭಗಳಲ್ಲಿ ಅಗತ್ಯವೆನಿಸಿದರೂ ...ಚಿಗೆ ಬ್ರಾಹ್ಮಣ್ಯದ ಅಮಲಿನ ನಾರಾಯಣಾಚಾರ್ಯ ...ತ ಬರೆದ 'ವಾಲ್ಮೀಕಿ ಯಾರು?' ಎಂಬ ಪುಸ್ತಕದ ... ನಾರಾಯಣಾಚಾರ್ಯ ಪಟಾಲಂಗೆ ಬಿಸಿ ಮುಟ್ಟಿಸಿ ...ಾಲ್ಮಿಕಿ ಜನಾಂಗ ಮಾತ್ರ) ಅವರನ್ನು ಸಕಾರಣಕ್ಕಾಗಿ ...ರೂ ಉಳಿದವರು ಮುಟ್ಟಲೇಬಾರದೆನ್ನುವಂತಹ ...ಮಾತ್ರ ಸರಿಯಲ್ಲ. ಪುಸ್ತಕದ ಶೀರ್ಷಿಕೆಯೇ ಹೇಳುವಂತೆ ...ಡ್ಕರರ ಬಗ್ಗೆ ದುರುದ್ದೇಶವಿಟ್ಟುಕೊಂಡು ಬರೆದ ... ಶೌರಿಯ 'ವರ್ಶಿಪಿಂಗ್ ಫಾಲ್ಸ್ ಗಾಡ್ಸ್' ತರಹದ ...ಳ ವಿರುದ್ಧ ಧ್ವನಿಯೆತ್ತಲೇ ಬೇಕು ಆದರೆ ...ದ್ದೇಶರಹಿತ ವಿಮರ್ಶೆಗಳನ್ನೂ ಸಹ ಅದೇ ...ಯಲ್ಲಿಟ್ಟು ನೋಡುವುದು ಸರಿಯಲ್ಲ.

...ಅಂಬೇಡ್ಕರರ ಬಗ್ಗೆ ದಲಿತರು ಮಾತ್ರವೇ ...ಬೇಕು. ರಾಯ್, ಆನಂದ್‌ರಂತಹ ...ರಿಗಿಲ್ಲೇನು ಕೆಲಸ ಎಂಬ ವಾದವೇ ...ಶವಾದದ್ದು. ದಲಿತೋದ್ಧಾರಕ್ಕಾಗಿ ...ಸಿದ ಅನೇಕ ದಲಿತೇತರ ...ಸೀಯರುಗಳು ಭಾರತದಲ್ಲಿ ಆಗಿ ...ದ್ದಾರೆ. ಸ್ವಾಮಿ ವಿವೇಕಾನಂದರು, ಮಹಾತ್ಮ ... ಕುದ್ಮುಲ್ ರಂಗರಾಯರು, ...ದನಿಶ್ವಾರ್ ಇವರುಗಳ್ಯಾರೂ ದಲಿತರಲ್ಲ, ...ೋದ್ಧಾರಕ್ಕೆ, ಕೈಹಾಕಿದ ತಪ್ಪಿಗೆ ಮಂಗಳೂರಿನಲ್ಲಿ ಕುದ್ಮುಲ್ ರಂಗರಾಯರನ್ನು ಅವರ ಜಾತಿಯಿಂದಲೇ ಬಹಿಷ್ಕಾರ ಹಾಕಲಾಯ್ತು. ಅವರ ಮೈಗೆ ಕಲ್ಲು ಸಗಣಿ ಎಸೆದವರೂ ಇದ್ದರಲ್ಲದೇ ದಲಿತರನ್ನ ಮುಟ್ಟಿಸಿಕೊಂಡ ಕಾರಣಕ್ಕೆ ಅವರ ಮಕ್ಕಳನ್ನು ಮದುವೆಯಾಗಲೂ ಯಾರೂ ಮುಂದೆಬರಲಿಲ್ಲ. ಅಮೆರಿಕದಲ್ಲಿ ನೀಗ್ರೋಗಳ ಪರವಾಗಿ ಹಾಗು ಗುಲಾಮಗಿರಿಯ ವಿರುದ್ಧ ನಿಂತು ಆ ಕಾರಣಕ್ಕಾಗಿ ಗುಂಡೇಟು ತಿಂದು ಸತ್ತಿದ್ದು ಲಿಂಕನ್ ಮಹಾಶಯ. ಆತನ ಕೊಡುಗೆಯನ್ನು ನೀಗ್ರೋಗಳು ಎಂದಿಗೂ ಮರೆಯಲಾರರು. ಮರೆಯಬಾರದು.

ಅಂಬೇಡ್ಕರ್ ಹೆಸರಲ್ಲೇ ದಲಿತರ ಆತ್ಮಗೌರವದ ಪ್ರಶ್ನೆಯಿದೆ. ಆ ಕಾರಣಕ್ಕಾಗಿ ದುರುದ್ದೇಶಪೂರಿತರಾಗಿ ಅವರಿಗೆ ಮಾನಹಾನಿಯಾಗುವಂತಹ ಸಂಗತಿಗಳನ್ನು ಹುಟ್ಟುಹಾಕುವವರನ್ನು ವಿರೋಧಿಸೋಣ. ಆದರೆ ತಮ್ಮವರೆಂಬ ನೆಪವೊಡ್ಡಿ ಅವರನ್ನು ಕಬ್ಬಿಣದ ಪೆಟ್ಟಿಗೆಯೊಳಗೆ ಬಚ್ಚಿಟ್ಟು ಸದಾ ಹರಿದು ಪಸರಿಸಬೇಕಾದ ಅವರ ಜೀವನಾದರ್ಶಗಳಿಗೆ ಕಟ್ಟೆಯನ್ನು ಕಟ್ಟುವ ಕೆಲಸ ಮಾತ್ರ ಸರ್ವಥಾ ಸಲ್ಲ.

-ರವಿ ಪುತ್ತೂರ, ದಕ

ಮೋದಿ ಪಂಚೆಗೆ ಕೈಹಾಕಿದ ಉಮಾಭಾರತಿ

ಭಾರತದ ರಾಜಕೀಯ ಇತಿಹಾಸದಲ್ಲೇ ಹಿಂದೆಂದೂ ಇಲ್ಲದಂತೆ ವ್ಯವಸ್ಥಿತವಾಗಿ ಒಬ್ಬ ತಗಡು ವ್ಯಕ್ತಿತ್ವದವನನ್ನು ಸುಳ್ಳುಸುಳ್ಳೇ ಇಂದ್ರ-ಚಂದ್ರ, ಚಾಂದ್ ಕಾ ತುಕಡಾ-ಸೋನೆ ಕಾ ತೋಹಫಾ ಎಂದು ಬಿಂಬಿಸುತ್ತಾ ಆತನಿಗೊಂದು ಹುಸಿ ಇಮೇಜನ್ನು ಕಟ್ಟಿಕೊಡುತ್ತಿರುವುದು ಅತ್ಯಂತ ಆಘಾತಕಾರಿ ಬೆಳವಣಿಗೆಯಾಗಿದೆ. ಹುಲಿ, ಸಿಂಹ, ಕರಡಿಗಳ ಚಿತ್ರಗಳೊಂದಿಗೆ ಗಲ್ಲಿಗಲ್ಲಿಗಳಲ್ಲಿ ಆತನನ್ನು ಹೀರೋ ಎಂದು ಬಿಂಬಿಸುವ ಫ್ಲೆಕ್ಸ್‌ಗಳು, ವಿಶ್ವ ಕಂಡ ಮಹಾನ್ ಚೇತನವಾದ ವಿವೇಕಾನಂದರೊಂದಿಗೆ ಹೋಲಿಸಿಕೊಂಡ ಫ್ಲೆಕ್ಸ್‌ಗಳು ಅಬ್ಬಬ್ಬಾ...!! ಹತ್ತು ಹನ್ನೆರಡು ವರ್ಷಗಳ ಹಿಂದೆ ಯಾವನಿಗೂ ಗೊತ್ತಿಲ್ಲದ ಮೋದಿ ಇಂದು ಅವತಾರ ಪುರುಷನಂತೆ ದಿಢೀರ್ ಬೆಳೆದಿದ್ದಾನೆ.

ವಿಷ್ಣುವಿನ ಹನ್ನೊಂದನೇ ಅವತಾರ ಎಂಬಂತೆ ಬಿಂಬಿಸಲ್ಪಡುತ್ತಿರುವ ಮೋದಿಯ ಬಗ್ಗೆ ಆತನ ಪಕ್ಷದಲ್ಲೇ ಭಿನ್ನಾಭಿಪ್ರಾಯವಿದೆ. ಆತನನ್ನು ತೀವ್ರವಾಗಿ ವಿರೋಧಿಸಿದ್ದ ವಾಜಪೇಯಿ ದುರದೃಷ್ಟವಶಾತ್ ಇಂದು ಮಾತಾಡದ ಸ್ಥಿತಿಯಲ್ಲಿದ್ದಾರೆ. ಜನಪರವ್ರೋ ಜನವಿರೋಧಿ ದಾರಿಯಲ್ಲೋ ಒಟ್ಟಾರೆ ಪಕ್ಷಕ್ಕಾಗಿ ಹಗಲಿರುಳು ದುಡಿದು ಪಕ್ಷವನ್ನು ಅಧಿಕಾರಕ್ಕೇರಿಸಿದ ಅಧ್ವಾನಿಯಂತವರು ಮೋದಿಯೆದುರು ಕಾಲಕಸದಂತಾಗಿದ್ದಾರೆ. ಮೂಲತಃ ಸ್ತ್ರೀ ವಿರೋಧಿ, ಪರಮ ಭ್ರಷ್ಟ (ತನ್ನ ರಾಜ್ಯದಲ್ಲಿ ಲೋಕಾಯುಕ್ತ ನೇಮಿಸದವ; ಯಡ್ಡಿ ರಾಮುಲುರಂಥವರನ್ನು ಹತ್ತಿರ ಬಿಟ್ಟುಕೊಂಡವ), ಇತಿಹಾಸ ಜ್ಞಾನವಿರದ ಮಹಾನ್ ಸುಳ್ಳನಾದ ಈತ ಕುಟ್ಟುವುದು ಯಾರೋ ಬರಕೊಟ್ಟ ಎಬಿಸಿಡಿ, ತ್ರಿಡಿ ಇತ್ಯಾದಿಗಳೆಂಬ 'ಪಾಯಿಂಟು'ಗಳ ಆಧಾರದ ಮೇಲಿನ ಭಾಷಣವನ್ನು. ಇಂತಹ ಟೊಳ್ಳು ಮನುಷ್ಯನ ಮೂಲಕ ಅಧಿಕಾರಕ್ಕೇರುವ ಆಸೆಯಿಂದ ಇತರೆ ಚಿಲ್ಲರೆ ನಾಯಕರು ಆತನನ್ನು ಸಹಿಸಿಕೊಂಡಿದ್ದಾರೆ. ಆದರೆ ಉಮಾ ಭಾರತಿಯೆಂಬ ಮೋದಿಯ ಚಿಕ್ಕಪ್ಪನ ಮಗಳಂತಹ ಮತ್ತೊಬ್ಬ ಬಾಯಿಬಡುಕಿ ಆತ ಒಬ್ಬ ಟೊಳ್ಳು ಮನುಷ್ಯ ಎಂದು ಬಹಿರಂಗವಾಗಿ ಹೇಳಿ ಅದನ್ನು ಸಮರ್ಥಿಸಿಕೊಂಡು ಮೋದಿಯ ಇಮೇಜಿಗೆ ಮಂಗಳಾರತಿ ಮಾಡಿದ್ದಾಳೆ. ಉಮಾ ಹೇಳಿದ್ದು ಬುದ್ಧಿವಂತಜನರಿಗೆ ತಿಳಿದ ಸಂಗತಿಯೇ ಆಗಿದ್ದರೂ ಸ್ವಪಕ್ಷೀಯಳಾಗಿ ಆಕೆ ಹೇಳಿದ ಮಾತಿಗೆ ಹೆಚ್ಚು ಬೆಲೆಯಿದ್ದ ಕಾರಣ ಮೋದಿಯ ಹುಸಿ ಮುಖವಾಡ ಇನ್ನೊಮ್ಮೆ ಎಲ್ಲರೆದುರು ಕಳಚಿ ಬಿದ್ದಂತಾಗಿದೆ.



-ಅವಿನಾಶ್ ಎಂ.ಎಸ್, ಈ ಮೇಲ್ ಮೂಲಕ

"ಕಣ್ಣಿಗೆ ಕಣ್ಣು ಎನ್ನುವ ದ್ವೇಷದ ಸಿದ್ಧಾಂತವು ಇಡೀ ಜಗತ್ತನ್ನೇ ಕುರುಡಾಗಿಸುತ್ತದೆ" ಎಂದು ಹೇಳಿದ ಮಹಾತ್ಮ ಗಾಂಧೀಜಿಯವರ ಮಾತು "ಗಾಂಧಿ ಮತ್ತು ಕೋಮುವಾದ" ಲೇಖನ ಓದಿ ನೆನಪಾಯಿತು (ರಂಜಾನ ದರ್ಗಾ, ಏಪ್ರಿಲ್ 09 2014 ರ ಸಂಚಿಕೆ). ನಾಗರಿಕ ಸಮಾಜವನ್ನು ನಾಶಗೊಳಿಸುತ್ತ ಭಯೋತ್ಪಾದಕತೆಯನ್ನು ಬೆಳೆಸುತ್ತಿರುವ ಈ "ಕೋಮುವಾದ" ಎಂಬ ವಿಷಚಕ್ರವನ್ನು ಬೇಧಿಸಿ, ಸೌಹಾರ್ದ ಸಮಾಜವನ್ನು ನಿರ್ಮಿಸುವುದು ನಿಜಕ್ಕೂ ದೊಡ್ಡ ಸವಾಲಾಗಿರುವ ಇಂದಿನ ದಿನಗಳಲ್ಲಿ, ಗಾಂಧಿ ತತ್ವಗಳನ್ನು ಅನುಸರಿಸಿದರೆ ಈ ಕೋಮುವಾದದ ಪರಿಹಾರದ ದಾರಿಯನ್ನು ಹುಡುಕುವುದರಲ್ಲಿ ನಾಗರಿಕ ಸಮಾಜಕ್ಕೆ ಸಹಾಯ ಸಿಗುತ್ತದೆ ಎನ್ನುವದರಲ್ಲಿ ಸಂಶಯವಿಲ್ಲ.

ಲೇಖನ ಓದುತ್ತ ಪಂಡಿತ ನೆಹರೂ ಅವರು "ಮನುಷ್ಯನು ಧರ್ಮಕ್ಕಾಗಿ ಕಚ್ಚಾಡಬಲ್ಲ, ಅದರ ಕುರಿತಾಗಿಯೇ ಬರೆಯಬಲ್ಲ ಅದಕ್ಕಾಗಿ ಸಾಯಲೂ ಬಲ್ಲ ಅದಕ್ಕಾಗಿ ಏನೆಲ್ಲವನ್ನು ಮಾಡಬಲ್ಲನಾದರೂ ತನಗಾಗಿ ಬದುಕಲಾರ" ಎಂದು ಹೇಳಿದ ಈ ಮಾತಿನಲ್ಲಿ ಸ್ವಲ್ಪ ಹುರುಳಿದೆ ಎಂದೆನಿಸಿತು.

-ಪ್ರೊ.ಎಂ.ಬಿ.ಪಾಟೀಲ, ರಾಮದುರ್ಗ

ಬಿಜೆಪಿಗಳ ನಿಜ ರೂಪವೇ ಪ್ರಮೋದ್ ಮುತಾಲಿಕ್. ಕೋಮುವಾದದ ಐಕ್ಯೂ ಪರಿಗಣಿಸಿದರೆ ಕರ್ನಾಟಕದ ಮೋದಿಯಂತಿರುವ ಮುತಾಲಿಕನೇ ಆರೆಸ್ಸೆಸ್‌ನ ಮುಖ್ಯಸ್ಥ ಮೋಹನ್ ಭಾಗವತನ ಉತ್ತರಾಧಿಕಾರಿ ಯಾಕಾಗಬಾರದು?

-ರವಿಕುಮಾರ್, ಹಾಸನ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಎಸ್.ವಿ.ಸುರೇಶ್ ಮತ್ತೆ ನಿರ್ದೇಶನಕ್ಕೆ



ಹನ್ನೆರಡು ವರ್ಷಗಳ ಹಿಂದೆ 'ಪ್ರೇಮ' ಎಂಬ ಚಿತ್ರವನ್ನು ನಿರ್ದೇಶಿಸಿದ್ದು ಇದೀಗ 'ಲೊಡ್ಡೆ' ಎಂಬ ಚಿತ್ರದ ಮೂಲಕ ಎಸ್.ವಿ.ಸುರೇಶ್ ಮತ್ತೆ ನಿರ್ದೇಶಕರಾಗುತ್ತಿದ್ದಾರೆ. ಈ ಮೊದಲು ರವಿಚಂದ್ರನ್, ದ್ವಾರಕೀಶ್, ಜೋಸೈಮನ್, ಸುನಿಲ್ ಕುಮಾರ್ ದೇಸಾಯಿ, ಬಿ.ರಾಮಮೂರ್ತಿ, ದಿನೇಶ್ ಬಾಬು, ಡಿ.ರಾಜೇಂದ್ರ ಬಾಬು, ಉಪೇಂದ್ರ ಬಳಿ ಅಸಿಸ್ಟೆಂಟ್, ಅಸೋಸಿಯೇಟ್ ಆಗಿ ಕೆಲಸ ಮಾಡಿರುವ ಅನುಭವ ಇರುವ ಸುರೇಶ್ ತಮ್ಮ 'ಲೊಡ್ಡೆ' ಟೈಟಲ್ ಮೂಲಕ ವಿವಾದಕ್ಕೂ ಗುರಿಯಾಗಿದ್ದವರು.




ಮೊದಲಿಗೆ ಈ ಟೈಟಲ್ ನಿರಾಕರಿಸಿದ್ದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ 'ಲೊಡ್ಡೆ' ಎಂಬ ಪದ ವಿಷ್ಣುವರ್ಧನ್ ಅವರ ಇಮೇಜ್ ಕೆಡಿಸುವ ಸಾಧ್ಯತೆ ಇದೆ ಎಂದು ಆತಂಕ ಪಟ್ಟಿತ್ತು. ಇದನ್ನೇ ಸವಾಲಾಗಿ ತೆಗೆದುಕೊಂಡ ಸುರೇಶ್ ಅವರು, ಅಮಿತಾಬ್ ಬಚ್ಚನ್, ಸಚಿನ್ ತೆಂಡೂಲ್ಕರ್, ಬರಾಕ್ ಒಬಾಮ, ಆಲ್ಬರ್ಟ್ ಐನ್‌ಸ್ಟೀನ್, ಮಹಾತ್ಮ ಗಾಂಧಿ, ಚಾರ್ಲಿ ಚಾಪ್ಲಿನ್, ಬಿಲ್ ಗೇಟ್ಸ್, ನೀಲ್ ಆರ್ಮ್‌ಸ್ಟ್ರಾಂಗ್ ಒಳಗೊಂಡಂತೆ ಜಗತ್ತಿನ ಯಾವ್ಯಾವ ಪ್ರಖ್ಯಾತ ವ್ಯಕ್ತಿ ಲೆಫ್ಟಿ (ಲೊಡ್ಡೆ)ಯೋ ಅವರ ಬಗ್ಗೆಯೆಲ್ಲಾ ಮಾಹಿತಿ ಕಲೆ ಹಾಕಿ 'ಲೊಡ್ಡೆ' ಎಂಬುದು ಹೆಮ್ಮೆಪಟ್ಟುಕೊಳ್ಳಬೇಕಾದ ವಿಷಯವೇ ಹೊರತು ಕೀಳರಿಮೆಯಿಂದ ಬಳಲಬೇಕಾದ ಅಂಶವಲ್ಲ ಎಂಬ ವಾದವನ್ನು ಚೇಂಬರ್ ಮುಂದೆ ಮಂಡಿಸಿ ತಮ್ಮ 'ಲೊಡ್ಡೆ' ಟೈಟಲ್ ಅನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಈ 'ಲೊಡ್ಡೆ' ಟೈಟಲ್ ಕುರಿತಂತೆ ವಿಷ್ಣುವರ್ಧನ್ ಅಭಿಮಾನಿಗಳಲ್ಲಿ ಕೀಳರಿಮೆಗೆ ಬದಲಾಗಿ ಹೆಮ್ಮೆ ಮೂಡುವಂತೆ ಮಾಡುವಲ್ಲಿ ಸಫಲರಾದರು.

ಅಂದಹಾಗೆ, 'ಲೊಡ್ಡೆ' ಚಿತ್ರದಲ್ಲಿ ಕೋಮಲ್ ಕುಮಾರ್ ಅಭಿನಯಿಸಿದ್ದು ಈಗಾಗಲೇ ಶೂಟಿಂಗ್, ಎಡಿಟಿಂಗ್ ಕೆಲಸಗಳು ಮುಗಿದು ಚಿತ್ರಕ್ಕೆ ರೀ ರೆಕಾರ್ಡಿಂಗ್ ಕೆಲಸ ಶುರುವಾಗಬೇಕಿದೆ. ಉಲ್ಲಾಸ್ ಸಿನಿಮಾ ಬ್ಯಾನರ್ ಅಡಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ತಿರುಮಲ ಡೆವಲಪರ್ಸ್‌ನ ಮಂಜುನಾಥ್ ಹಣ ಹಾಕಿದ್ದಾರೆ. ಸಂಗೀತದ ಜವಾಬ್ದಾರಿಯನ್ನು ಹೈದರಾಬಾದಿನ ಚಿನ್ನಿಚರಣ್ ಹೊತ್ತರೆ, ಛಾಯಾಗ್ರಹಣದ ಹೊಣೆ ಭುವನ್ ಗೌಡ ಅವರದು. ಇನ್ನು ಕಥೆ-ಸಂಭಾಷಣೆ ಶರಣ್ ಅಭಿನಯದ ಶರಣ್ ನಟಿಸಿದ್ದ 'ರಾಂಬೋ' ಚಿತ್ರವನ್ನು ನಿರ್ದೇಶಿಸಿದ್ದ ಎಂ.ಎಸ್.ಶ್ರೀನಾಥ್ ಅವರದು. ಕೋಮಲ್ ಕುಮಾರ್ ಜೊತೆಗೆ ಶಯ್ಯಾಜಿರಾವ್ ಶಿಂಧೆ, ಅವಿನಾಶ್, ಮು.ಮ.ಚಂದ್ರು, ಕರಿಸುಬ್ಬು, ಆಕಾಂಕ್ಷ ಪೂರಿ, ಲಕ್ಷ್ಮಿದೇವಮ್ಮ, ಪವಿತ್ರಾಲೋಕೇಶ್, ಆಶಾಲತಾ 'ಲೊಡ್ಡೆ'ಯ ತಾರಾಗಣದಲ್ಲಿದ್ದಾರೆ.

ಎರಡು ವೈಟು ಒಂದು ರೆಡ್ಡು

ಸೌಧು ಕೋಕಿಲ, ಸುಂದರ್ ರಾಜ್ ಕಾಮಿಡಿ ಪೊಲೀಸರಾಗಿ ಕಾಣಿಸಿಕೊಳ್ಳುತ್ತಿರುವ 'ಪಂಗನಾಮ' ಚಿತ್ರದ ಟೈಟಲ್ ಇದೀಗ ವಿವಾದಕ್ಕೆ ಗುರಿಯಾಗಿದೆ. ಗುರುರಾಜ್ ಎನ್ನುವ ಹೊಸ ಹುಡುಗ ನಟಿಸಿ, ನಿರ್ಮಿಸಿ, ನಿರ್ದೇಶಿಸುತ್ತಿರುವ ಈ ಚಿತ್ರ ಪಂಗ ಹಾಗೂ ಮೂರು ನಾಮದ ಲಾಂಛನ ಹೊಂದಿದ್ದು ಒಟ್ಟಾರೆಯಾಗಿ 'ಪಂಗನಾಮ' ಎಂಬ ಅರ್ಥ ಕಲ್ಪಿಸಿಕೊಡುತ್ತದೆ. ಯಾವಾಗ ಪಂಗ ಜೊತೆಗೆ ಎರಡು ಬಿಳಿ ಹಾಗೂ ಒಂದು ಕೆಂಪು ಬಣ್ಣದ ನಾಮಗಳನ್ನುಳ್ಳ ಪೋಸ್ಟರ್‌ಗಳು ಸಾರ್ವಜನಿಕವಾಗಿ ಕಾಣಿಸಿಕೊಂಡವೋ ಮೇಲುಕೋಟೆಯ ನಾಮದ ಮಂದಿ ಕಿರಿಕ್ ತೆಗೆದಿದ್ದಾರೆ.



ಎರಡು ವೈಟು ಹಾಗೂ ಒಂದು ರೆಡ್ಡು ನಾಮಗಳಿಗೆ ತಲತಲಾಂತರದಿಂದ ತನ್ನದೇ ಆದ ಗೌರವವಿದ್ದು, ಇದೀಗ ಆ ಗೌರವಕ್ಕೆ ಚ್ಯುತಿ ತರುವ ಪ್ರಯತ್ನ ಆಗುತ್ತಿದೆ. ಹಾಗಾಗಿ ಮೂರು ನಾಮದ ಆ ಲಾಂಛನವನ್ನು ತಮ್ಮ ಚಿತ್ರದ ಟೈಟಲ್ ಆಗಿ ಬಳಸಕೂಡದು ಅಂತ ತಕರಾರು ಎತ್ತಿದ್ದಾರೆ. ಈ ಕುರಿತು ಈಗಾಗಲೇ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರ ಜೊತೆ ಮಾತಾಡಿದ್ದು, ಟೈಟಲ್ ಬದಲಾಯಿಸುವಂತೆ ಸಂಬಂಧಿಸಿದ ನಿರ್ದೇಶಕರೊಂದಿಗೆ ಮಾತಾಡುವುದಾಗಿ ಭರವಸೆ ನೀಡಿದ್ದಾರೆಂಬ ಸಮಾಧಾನ ನಾಮದ ಮಂದಿಯದು. 'ಇದನ್ನೇಕೆ ಮನರಂಜನೆಯಾಗಿ ತಗೋಬಾರದು, ಪಂಗನಾಮ ಎನ್ನುವ ಮಾತು ಮೊದಲಿಂದಲೂ ಸಮಾಜದಲ್ಲಿ ಚಾಲ್ತಿಯಲ್ಲಿದ್ದು, ಇದು ನಾವೇನು ಹೊಸದಾಗಿ ಸಂಶೋಧಿಸಿದ್ದಲ್ಲ' ಎಂಬುದು ನಿರ್ದೇಶಕರ ವಾದ. ಈ ನಾಮದ ವಿಷಯ ಎಲ್ಲಿಗೆ ಬಂದು ನಿಲ್ಲುತ್ತದೋ ಆ ರಾಮಾನುಜಾಚಾರ್ಯರೇ ಹೇಳಬೇಕು.

ರಾಗಿಣಿ-ದಿಗಂತ್ ಪರಪಂಚ

ಮೂರು ವರ್ಷಗಳ ಹಿಂದೆಯಷ್ಟೇ 'ಕಾಂಚಾಣ' ಎನ್ನುವ ಫ್ಲಾಪ್ ಸಿನಿಮಾದಲ್ಲಿ ಒಟ್ಟಿಗೆ ಅಭಿನಯಿಸಿದ್ದ ದಿಗಂತ್-ರಾಗಿಣಿ ಜೋಡಿ ಈಗ 'ಪರಪಂಚ' ಎನ್ನುವ ಚಿತ್ರದ ಮೂಲಕ ಮತ್ತೆ ಒಂದಾಗಿದೆ. ಈ ಚಿತ್ರಕ್ಕೆ ಯೋಗರಾಜ್ ಭಟ್ ಹಣ ಹಾಕಿದರೆ, ಕ್ರಿಷ್ ಜೋಷಿ ಎನ್ನುವವರು ನಿರ್ದೇಶಕ. ಏಪ್ರಿಲ್ 10ನೇ ತಾರೀಖು ಸೆಟ್ಟೇರಲಿರುವ ಈ ಚಿತ್ರಕ್ಕೆ '70 ಕ್ಲಾಕ್' ಹಾಗೂ 'ಸವಿಸವಿ ನೆನಪು' ಚಿತ್ರಗಳನ್ನು ನಿರ್ದೇಶಿಸಿದ್ದ ಸಂತೋಷ್ ರೈ ಪಾತಾಜೆ ಕ್ಯಾಮರಾಮ್ಯಾನ್. ವರ್ಷಕ್ಕೂ ಹಿಂದೆ ಬಿಡುಗಡೆಯಾದ ತಮ್ಮ 'ಬರ್ಫಿ' ಚಿತ್ರದ ನಂತರ ದಿಗಂತ್ ಮತ್ತೆ ಈ ಚಿತ್ರದ ಮೂಲಕ ಅಖಾಡಕ್ಕೆ ಇಳಿಯುತ್ತಿದ್ದಾರೆ. ಇಷ್ಟಕ್ಕೂ ದಿಗಂತ್, ಯೋಗರಾಜ ಭಟ್ ನಿರ್ದೇಶನದ ಚಿತ್ರಗಳಲ್ಲದೆ ಬೇರ್‍ಯಾವ ನಿರ್ದೇಶಕನಡಿ ಕೆಲಸ ಮಾಡಿ ದಿಗಂತ್ ಗೆದ್ದ ನಿದರ್ಶನಗಳಿಲ್ಲದಿರುವುದು ನಿಜಕ್ಕೂ ಗಮನೀಯ ಸಂಗತಿ ಅಲ್ಲವೇ?



ಮನೋಹರ್ ಮರಳಿ ಜೆಡಿಎಸ್‌ಗೆ

ಒಂದು ಕಾಲದಲ್ಲಿ ಜೆಡಿಎಸ್ ಪಕ್ಷದಲ್ಲಿದ್ದು ನಂತರ ಕಾಂಗ್ರೆಸ್ ಪಾರ್ಟಿಗೆ ವಲಸೆ ಹೋಗಿ ಇದೀಗ ಮತ್ತೆ ಜೆಡಿಎಸ್‌ಗೆ ಮರಳಿರುವ ವ್ಯಕ್ತಿಯ ಹೆಸರು ಸಿ.ಆರ್.ಮನೋಹರ್. ಇವರು ಈಗಾಗಲೇ 'ಒರಟ ಐ ಲವ್ ಯೂ' ಎಂಬ ಸಿನಿಮಾ ನಿರ್ಮಿಸಿ ಗಾಂಧಿನಗರದಲ್ಲಿ ತಕ್ಕ ಮಟ್ಟಿಗೆ ಗುರ್ತಿಸಿಕೊಂಡಿದ್ದರು. 'ಒರಟ ಐ ಲವ್ ಯೂ' ಯಾವಾಗ ಒಂದು ಮಟ್ಟಕ್ಕೆ ಕಲೆಕ್ಷನ್ ತಂದುಕೊಟ್ಟಿತೋ ಅದೇ ಜೋಶ್‌ನಲ್ಲಿ ವಿಷ್ಣುವರ್ಧನ್ ಹಾಕಿಕೊಂಡು 'ಮಾಸ್ಟರ್' ಎನ್ನುವ ಚಿತ್ರ ನಿರ್ಮಿಸಿದರು. ಸದ್ಯಕ್ಕೆ ಇವರು 'ಬಸವಣ್ಣ' ಚಿತ್ರಕ್ಕೆ ಹಣ ಹಾಕುವುದರ ಜೊತೆಗೆ 'ಉಪ್ಪಿ-2' ಚಿತ್ರಕ್ಕೆ ನಿರ್ಮಾಪಕರಲ್ಲೊಬ್ಬರು. ಜೊತೆಗೆ 'ಎಫ್.ಎಂ.ರೇಡಿಯೋ' ಎನ್ನುವ ಚಿತ್ರದ ಮೂಲಕ ತಮ್ಮ ಸಹೋದರನನ್ನು ಹೀರೋ ಮಾಡಲು ಹೊರಟು ಚಿತ್ರವು ಆಡಿಯೋ ಸಿ.ಡಿ. ಬಿಡುಗಡೆ ಮಾಡಿಕೊಂಡು ಮೂಲೆ ಸೇರಿದೆ. ಉಳಿದಂತೆ ಇವರು ತೆಲುಗಿನಲ್ಲಿ 'ರಂಗ ದಿ ದೊಂಗ' ಹಾಗೂ 'ಮಹಾತ್ಮ' ಎಂಬೆರಡು ಚಿತ್ರಗಳನ್ನು ನಿರ್ಮಿಸಿದ್ದಾರೆ. ಇಂಥ ಇತಿಹಾಸವಿರುವ ಕೋಲಾರ ಕಡೆಯ ಸಿ.ಆರ್.ಮನೋಹರ್ ಮೂಲತಃ ತೆರಿಗೆ ಅಧಿಕಾರಿಯೊಬ್ಬರ ಮಗನಾಗಿದ್ದು, ಹೂವಿನ ವ್ಯಾಪಾರಿಯಾಗಿರುವ ಇವರು, ರಿಯಲ್ ಎಸ್ಟೇಟ್ ದಂಧೆಯಲ್ಲೂ ಪಳಗಿದ ಕೈ. ಕುತೂಹಲಕಾರಿ ಸಂಗತಿಯೆಂದರೆ, ಇವರ ಹಿಂಬಾಲಕರಾಗಿದ್ದು ಬಹುಪರಾಕ್ ಕೂಗುವವರಿಗೆ ಇವರಿಂದ ಒಂದಿಷ್ಟು ಸೇವೆಗಳು ಆಗುತ್ತವಂತೆ. ಅಂದಹಾಗೆ, ಈ ಸಿ.ಆರ್.ಮನೋಹರ್ ಮಾಡಿರುವ ಸಮಾಜ ಸೇವೆಯನ್ನು ಮೆಚ್ಚಿ ಗೌರವ ಡಾಕ್ಟರೇಟ್ ಕೂಡ ಬಂದಿದೆಯಂತೆ. ಅದೇನು ಸಮಾಜ ಸೇವೆ ಮಾಡಿದ್ದಾರೆ ಅನ್ನೋದನ್ನು ಇನ್ನಷ್ಟೇ ಶೋಧಿಸಬೇಕಿದೆ!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com